

K
923.254
G 151 D

ಗಾಂಧೀಜೀ ಜನ್ಮ ಶತಾಬ್ದಿಯ ನೆನಪಿಗಾಗಿ

೨ ಒಕ್ಟೋಬರ್ ೧೯೬೯

# ಪುಷ್ಪಾಂಜಲಿ

ಕೆ. ಧರ್ಮರಾಜ

ಬಾಪೂಜಿಯ ಜನ್ಮ ಶತಾಬ್ದಿಯ ನೆನಪಿಗಾಗಿ

೨ ಒಕ್ಟೋಬರ್ ೧೯೬೯

Library IIAS, Shimla
K 923.254 G 151 D
00033612

33612
12-12-69

K
923.254
G151D

# ಮುನ್ನುಡಿ

ಬ್ಲೋಕ್ ಡೆವಲಪ್‌ಮೆಂಟ್ ಆಫೀಸರರೂ, ಉತ್ಸಾಹೀ ಕಾರ್ಯಕರ್ತರೂ, ಲೇಖಕರೂ ಆದ ಶ್ರೀ ಕೆ. ಧರ್ಮರಾಜರು ಬರೆದಿರುವ ಗಾಂಧೀವಿಚಾರ ಮಂಥನವುಳ್ಳ ಈ ಕಿರು ಹೊತ್ತಗೆಯನ್ನು ಓದಿ ನಾನು ಸಂತೋಷಪಟ್ಟಿದ್ದೇನೆ. ಅದುಕಾರಣವೇ, ಇದಕ್ಕೆ ಮುನ್ನುಡಿ ಬರೆದುಕೊಡಬೇಕೆಂಬ ಅವರ ಸದಪೇಕ್ಷೆಯನ್ನು ನೆರವೇರಿಸಲು ನಾನು ಅಭಿಮಾನ ಪಡುತ್ತೇನೆ. ಗಾಂಧೀಶತಮಾನೋತ್ಸವದ ಈ ವರ್ಷದಲ್ಲಿ ಈ ತೆರನ ಪುಸ್ತಕವನ್ನು ಓದಿದುದರಿಂದ ನನಗಾದ ಸಂತೋಷದಲ್ಲಿ ಸಹಭಾಗಿಗಳಾಗಲು, ತನ್ಮೂಲಕ ನಮ್ಮ ಮಾತೃಭೂಮಿಯ ಅಭಿವೃದ್ಧಿ ಕಾರ್ಯದ ಕುರಿತು ಚಿಂತನೆ ಮಾಡಲು ವಾಚಕರಿಗೆ ಅನುಕೂಲವಾಗಬೇಕೆಂಬ ಹಾರೈಕೆಯಿಂದ ನಾನೀ ಮುನ್ನುಡಿಯನ್ನು ಬರೆಯುತ್ತಿದ್ದೇನೆ.

ನಮ್ಮ ರಾಷ್ಟ್ರಪಿತನೆನಿಸಿದ ಗಾಂಧೀಜಿ ಭಾರತದ ಸಂಸ್ಕೃತಿಯ ಆದರ್ಶ ಪ್ರತೀಕವಾಗಿ ಬಾಳಿದರು. ಅವರ ಅನುಪಮ ತ್ಯಾಗ, ಸತ್ಯಶಕ್ತಿ, ದೈವಭಕ್ತಿ ಮೊದಲಾದ ಸದ್ಗುಣಗಳು ಚಿರಂತನವಾಗಿ ಬೆಲೆಯುಳ್ಳ ವಿಷಯಗಳು. ಗಾಂಧೀಜಿ ದೇಶದ ಮುಂದಿಟ್ಟ ಬುನಾದಿ ಶಿಕ್ಷಣದ ಉದಾತ್ತ ಧ್ಯೇಯ ದೇಶೋನ್ನತಿಗೆ ಸಹಾಯವಾದುದು, ಯುವಜನಾಂಗಕ್ಕೆ ಅವರು ಎಂತಹ ಮಾರ್ಗದರ್ಶನ ಮಾಡಿದರು, ದೀನದಲಿತರ ಬಗ್ಗೆ ಗಾಂಧೀಜಿಯಲ್ಲಿ ಎಷ್ಟು ಅಪಾರ ಅನುಕಂಪ ಇತ್ತು, ಗಾಂಧೀಜಿ ಕಲ್ಪನೆಯ ಗ್ರಾಮ ಸ್ವರಾಜ್ಯವೇನು?-ಇಂತಹ ಉಪಯುಕ್ತ ವಿಷಯಗಳೆನ್ನೆತ್ತಿಕೊಂಡು ಶ್ರೀ ಧರ್ಮರಾಜರು ಇಲ್ಲಿ ಸಾಧ್ಯವಾದಷ್ಟು ಅಂಕೆ ಸಂಖ್ಯೆಗಳ, ಘಟನಾವಳಿಗಳ ಚಿತ್ರಣಗಳಿಂದ ವಿಷಯಗಳು ಮುಂದಟ್ಟಾಗುವಂತೆ, ಗ್ರಾಮೋದ್ಧಾರ ಕಾರ್ಯದಲ್ಲಿ ನಿರತರಾದ ಕಾರ್ಯಕರ್ತರಿಗೆ ಪ್ರಯೋಜನಕಾರಿ ಆಗುವಂತೆ ಈ ಪುಸ್ತಕವನ್ನು ಬರೆದಿದ್ದಾರೆ. ಬರೆದು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಶ್ರೀ ಧರ್ಮರಾಜರು ಗ್ರಾಮಾಭಿವೃದ್ಧಿ ಕಾರ್ಯಕ್ಷೇತ್ರದಲ್ಲಿ ಉತ್ಸಾಹದಿಂದ ದುಡಿಯುವ ಕಾರ್ಯಕರ್ತರು. ತತ್ವಾದರ್ಶಗಳನ್ನು ನಿಷ್ಠಾಪೂರ್ವಕ ಅನುಸರಿಸಲು ಯತ್ನಿಸುವ ದೇಶಪ್ರೇಮಿಗಳು, ಸರಕಾರೀ ಉದ್ಯೋಗದಲ್ಲಿದ್ದುಕೊಂಡು ಸಾಹಿತ್ಯ ವ್ಯವಸಾಯದಲ್ಲಿಯೂ ಅಭಿರುಚಿಯುಳ್ಳ ಸಹೃದಯರು. ಶ್ರೀಯುತರಿಗೆ ಲೇಖನ ವ್ಯವಸಾಯಕ್ಕೆ ಬೇಕಾದ ಭಾಷೆ, ಶೈಲಿ ಸಿದ್ಧಿಸಿದೆ; ವಿಷಯ ಸಮರ್ಥನೆ ಮಾಡತಕ್ಕ ವಿಚಾರಸರಣಿ ಇದೆ. ಆಡಳಿತ ಅನುಭವ, ಜನತಾ ಸಂಪರ್ಕ ತತ್ವಾನುಸಂಧಾನ- ಇಂತಹ ವಿಶಿಷ್ಟ ಅನುಕೂಲತೆಗಳ ಫಲವಾಗಿ ಶ್ರೀ ಧರ್ಮರಾಜರು ಇನ್ನಷ್ಟು ವಿಶಾಲವೂ, ಸಮೃದ್ಧವೂ, ಉಪಯುಕ್ತವೂ ಆದ ಗ್ರಂಥಗಳನ್ನು ನಿರ್ಮಾಣಮಾಡಿ ಕೀರ್ತಿಭಾಜನರಾಗಲಿ ಎಂದು ಹಾರೈಸುತ್ತೇವೆ.

ಪೆರಡಾಲ
೨೪—೯—೧೯೬೯ } **ಕಯ್ಯಾರ ಕಿಞ್ಞಣ್ಣ ರೈ**

# ಎರಡು ಮಾತು

"ಪುಷ್ಪಾಂಜಲಿ"ಯು ಒಂದು ವಿಶಿಷ್ಟವಾದ ಭಕ್ತಿಯ ಕಾಣಿಕೆಯಾಗಿದೆ. ಗಾಂಧೀಜಿಯ ಹಲವಾರು ಸಾಮಾಜಿಕ ವಿಚಾರಗಳನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಅಳವಡಿಸಿಕೊಳ್ಳದೆ ಬೇರೆ ದಾರಿಯಿಲ್ಲ. ಈ ದೆಸೆಯಲ್ಲಿ ಈ ಪುಸ್ತಕವು ಸ್ಥೂಲವಾದ ಗಾಂಧೀ ವಿಚಾರಧಾರೆಯನ್ನು ಓದುಗರ ಮುಂದಿರಿಸಿದೆ. ಬಾಪೂಜಿಯ ಬಹುಮುಖ ಜೀವನ, ಆದರ್ಶ ವಿದ್ಯಾ ಪದ್ಧತಿ, ಯುವಕರ ಕರ್ತವ್ಯ, ಹರಿಜನ ಕಲ್ಯಾಣ, ಪಂಚಾಯತು ರಾಜ್ಯಗಳ ಹಕ್ಕಿನೋಟವನ್ನು ಈ ಲೇಖನಗಳ ಮೂಲಕ ನೋಡಬಹುದಾಗಿದೆ.

ಪುಸ್ತಕಗಳಿಗೆ ಮುನ್ನುಡಿ ಬರೆಯುವುದು ಓದುವವರ ದೃಷ್ಟಿಯಿಂದ ಕಿರಿದಾದರೂ ಬರೆಯುವವರಿಗೆ ಹಿರಿದು. ಅಂತರ್ಗತ ವಿಚಾರವನ್ನು ತೂಗಿ, ಬರೆದು ಪ್ರತಿಬಿಂಬಿಸುವುದು ಮಹತ್ವದ ವಿಚಾರವೇ ಆಗಿದೆ.

ಪ್ರಕೃತ ನಾನು ಬರೆಯಬೇಕಾದ ಹೊತ್ತಗೆ ಹೊತ್ತಿರುವ ವಸ್ತು, ಸಾಮಾನ್ಯವಲ್ಲ. ಅಮರರಾದ ಬಾಪೂಜಿಯವರು ಅರ್ಧ ಶತಮಾನದ ಹಿಂದೆ ಕಂಡ ಕನಸನ್ನು ನೆನಸು ಮಾಡಬೇಕಾದ ನಮ್ಮ ಜವಾಬ್ದಾರಿ, ಭಾರತೀಯನ ಕರ್ತವ್ಯ, ಮಾಡಬೇಕಾದ ತ್ಯಾಗವೇ ಮೊದಲಾದುವುಗಳನ್ನು ಅನುಷ್ಠಾನಕ್ಕೆ ತಂದರೇನೇ ಅಮೃತಾತ್ಮ ಗಾಂಧಿಯ ಆತ್ಮಕ್ಕೆಶಾಂತಿ ದೊರಕೀತಷ್ಟೆ! ದೀನ, ದಲಿತ, ಅಸ್ಪೃಶ್ಯ, ಅವಿದ್ಯಾವಂತ ಬಂಧುಗಳಿಗೆ ಸುಖ ಸಮತೆ ಬರದಿದ್ದರೆ, ಯಾವುದೋ ಒಂದು ಸೋಗಿನಲ್ಲಿ ನಡೆಯುವ ಒಂದು ಅಕೃತ್ಯವಿದ್ದರೆ ಅದನ್ನು ಇಟ್ಟೊರಸದೆ ಹೋದರೆ ಆ ದೇವತಾತ್ಮನ ಕಂಬನಿ ಮರ್ತ್ಯಕ್ಕೆ ಹನಿಯದೇ?

"ಸತ್ಯಂವದ - ಧರ್ಮಂಚರ - "ಎಂಬ ಉಪನಿಷದ್ವಾಕ್ಯವನ್ನು ಅನುಷ್ಠಾನಕ್ಕೆ ತಂದ ಮಹಾಭಾಗರು - ಗಾಂಧೀಜಿ. "ಸತ್ಯಂಬ್ರೂಯಾತ್, ಪ್ರಿಯಂಬ್ರೂಯಾತ್" ಎಂಬ ಸುಭಾಷಿತಕ್ಕೆ ಅವರ ಕಿವಿ ನಿಮಿರಲಿಲ್ಲ.

ಅವರ ಜನ್ಮ ಶತಾಬ್ದಿಯ ಈ ವತ್ಸರದಲ್ಲಿ ಯುಗಪ್ರವರ್ತಕರ ಮಾತುಗಳನ್ನು ಇಲ್ಲಿ ಸ್ಮರಿಸ ಬೇಕು. "ಲೋಕದ ಡೊಂಕ ನಿವೇಕೆ ತಿದ್ದುವಿರಿ, ನಿಮ್ಮನ್ನು ನೀವೇ ಸಂತೈಸಿಕೊಳ್ಳಿ" -ಎಂದು ಉದ್ಘೋಷಿಸಿದ ಬಸವಣ್ಣರ ವಚನವನ್ನು ಪುನರಪಿ ಅಮರಾತ್ಮರು ಉಚ್ಚರಿಸಿದರು. ಅದು ನಮ್ಮ ಬಾಳಿನ ಹಾಸುಹೊಕ್ಕಾಗ ಬೇಡವೇ? ಬಾಪು ಬೆಳಗಿದ ದಿವ್ಯ ಜ್ಯೋತಿಗೆ ಸ್ನೇಹವನ್ನೆರೆದು ಶತಶತಮಾನಗಳ ವರೆಗೆ ಬೆಳಗುವಂತೆ ನಮ್ಮ ಪರಂಪರೆಗೆ ಆದರ್ಶ ಮಾರ್ಗದರ್ಶನ ಮಾಡುವ ಹೊಣೆ ನಮ್ಮದಿದೆ.

ಶ್ರೀ ಧರ್ಮರಾಜರು ಗಾಂಧೀ ಜೀವನವನ್ನೂ, ತತ್ವವನ್ನೂ ಆಳವಾಗಿ ಅಭ್ಯಸಿಸಿ ಸಮಾಜ ದರ್ಶನ ಮಾಡಿದ್ದು ಪ್ರಶಂಸನೀಯ. ಇಂತಹ ಕಿರು ಹೊತ್ತಗೆಗಳು ನಮ್ಮ ಸಮಾಜಕ್ಕೆ ದಾರಿ ದೀಪಗಳು. ಭಾವೀ ಜನಾಂಗಕ್ಕೆ ಗಾಂಧೀ ಜೀವನದ ಕಿಡಿಗಳನ್ನು ಕಾಣಿಸಿದರೆ ಅವು ಪ್ರಜ್ವಲಿಸಿ ಮುಂದಿನ ಪೀಳಿಗೆಯನ್ನು ಬೆಳಗಬಹುದು. ಮಾನವನು ದೋಷವಿದೂರನಲ್ಲ; ಸ್ವಚ್ಛ ಪಡಿಸಿಕೊಳ್ಳುವ ಬುದ್ಧಿ ಇದೆ. ಆ ಬುದ್ಧಿ ಪ್ರಚೋದಕವಾಗುವಂತೆ ಶ್ರೀ ಭಗವಂತನು ಕರುಣಿಸಲಿ.

**ಭದ್ರವಾಗಲಿ – ಶುಭವು ಮಂಗಲವಿರಲಿ.**

ಪುತ್ತೂರು
ತಾ. 25—9—1969

**ಬಿ. ಸಂಕಪ್ಪ ರೈ,**
ಅಧ್ಯಕ್ಷ
ತಾಲೂಕು ಅಭಿವೃದ್ಧಿ ಮಂಡಲಿ.

# ಕೃತಜ್ಞತೆ

'ಸಮ್ಯಕ್ ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗಃ.' ಸತ್ಯವಾದ ವಿಚಾರಗಳ ದರ್ಶನವನ್ನು ಪಡೆದು, ಈ ತತ್ವಗಳ ಕುರಿತು ಆಳವಾದ ಜ್ಞಾನವನ್ನು ಸಂಗ್ರಹಿಸಿ, ಸತ್ಯವಾದ ವಿಚಾರಗಳಿಗೆ ಅಪಚಾರವಾಗದಂತೆ ಆಚರಣೆಗೆ ತರುವುದರಿಂದಲೇ ನಮ್ಮ ಮುಕ್ತಿಯನ್ನು ಸಾಧಿಸಲು ಸಾಧ್ಯ. ಇಷ್ಟೆಲ್ಲವನ್ನು ಸಾಧಿಸಲಾಗದವರು ತತ್ವಗಳ ಅನ್ವೇಷಣೆಗಾಗಿ ಪರಕೀಯರತ್ತ ದೈನ್ಯದಿಂದ ನೋಡುತ್ತಿರುತ್ತಾರೆ. ತತ್ವಗಳ ಹೆಸರುಗಳಲ್ಲಿ ಹೊಡೆದಾಡುತ್ತಿದ್ದಾರೆ. ಜೀವನದಲ್ಲಿ ಆಚರಿಸಿ ತೋರಲಾಗದ ಯಾವ ತತ್ವಗಳಿಂದಲೂ ಯಾರ ಕಲ್ಯಾಣವೂ ಸಾಧಿಸದು. ತನ್ನದೇ ಆದ ಅಮೂಲ್ಯ ತತ್ವಗಳ ವಿಚಾರ ಅಭ್ಯಸಿಸಲು ಮನಸ್ಸು ಮಾಡದವನು ಪರದೇಶಗಳ ತತ್ವಗಳನ್ನು ಕಲಿಯುವ ಗೋಜಿಗೆ ಹೋಗುತ್ತಾನೆ. ಅಲ್ಲಿಯೂ ಆಳವಾದ ಜ್ಞಾನ ಸಂಗ್ರಹ ಮಾಡಲು ಮನಸ್ಸುಮಾಡದೆ ಅಂಡಲೆಯುತ್ತಿರುತ್ತಾನೆ. ಇದು ಸಾಮಾನ್ಯವಾಗಿ ಸುಲಭ ಜೀವನವನ್ನು, ಮೃಗ ಜೀವನವನ್ನು ಹುಡುಕುತ್ತ ಅಲೆಯುವ ಕ್ರಮ. ಆದುದರಿಂದಲೇ ಗಾಂಧೀಜಿ ಭಾರತೀಯರಿಗೆ ಭಾರತೀಯರಾಗಿ ಬಾಳುವ ದಾರಿಯನ್ನು ತೋರಿದರು. ಭಾರತೀಯ ರಾಜಕಾರಣಿ, ಅಧಿಕಾರಿ, ನೌಕರ, ವಿದ್ಯಾರ್ಥಿ, ರೈತ, ಕಾರ್ಮಿಕ, ಬಡವ, ಬಲ್ಲಿದರೆಲ್ಲರೂ ಗಾಂಧೀಜಿಯ ವಿಚಾರಗಳನ್ನು ಆಳಲಾಗಿ ಅಭ್ಯಸಿಸಬೇಕು, ಮತ್ತು ಅಂತಹ ವಿಚಾರಗಳನ್ನು ವೈಯಕ್ತಿಕ ಮತ್ತು ಸಾಮೂಹಿಕ ಜೀವನದಲ್ಲಿ ಆಚರಣೆಗೆ ತರುವುದು ಅಗತ. ಈ ರೀತಿ ಗಾಂಧೀ ವಿಚಾರಗಳ ದರ್ಶನ, ಜ್ಞಾನ, ಚಾರಿತ್ರ್ಯಗಳನ್ನು ಸಾಧಿಸುವುದರಿಂದ ಮಾತ್ರ ನಮ್ಮ ಕಲ್ಯಾಣ ಅಥವಾ ಮೋಕ್ಷ ಸಾಧ್ಯ.

ಗಾಂಧೀಜಿ ಪ್ರಯೋಗಗಳ ಮೂಲಕ ಸಾಧಿಸಿ ತೋರಿದ ವರ್ಧಾ ಶಿಕ್ಷಣ ಕ್ರಮವು ಬೆಳೆಯುತ್ತಿರುವ ಜೀವಿಯ ದೇಹ, ಬುದ್ಧಿ ಮತ್ತು ಆತ್ಮಗಳ ವಿಕಸನವನ್ನು ಸಾಧಿಸುವ ಬೀಜ ಮಂತ್ರವಾಗಿದೆ; ಸ್ವಾವಲಂಬನದ ಅಡಿಗಲ್ಲಾಗಿದೆ. ಅವರ ಸ್ವದೇಶೀ ಭಾವನೆ ಮತ್ತು ಖಾದೀ ಕಾರ್ಯಕ್ರಮಗಳು ನಮ್ಮ ಗ್ರಾಮದ ಕೈಗಾರಿಕೆಗಳ ಮುನ್ನುಡಿಯಾಗಿದೆ. ಹಿಂದೂ ಮುಸ್ಲಿಂ ಐಕ್ಯ,

ಮಹಿಳೆಯರಿಗೆ ಸಮಾನತೆ, ಹರಿಜನ ಕಾರ್ಯಕ್ರಮಗಳು ಸಾಮಾಜಿಕ ಪುನರುದ್ಧಾರದ ತಾರಕ ಮಂತ್ರವಾಗಿದೆ. ಈ ಕಿರು ಹೊತ್ತಗೆಯಲ್ಲಿ ಗಾಂಧೀಜೀ ವಿಚಾರ ಧಾರೆಯತ್ತ ಬೊಟ್ಟುಮಾಡಿ ತೋರಿಸುವ ಕೆಲಸವನ್ನು ಮಾಡಲಾಗಿದೆ. ಇದೊಂದು ಭಕ್ತಿಯ ಕಾಣಿಕೆ - ಪುಷ್ಪಾಂಜಲಿ. ಗಾಂಧೀಜಿಯ ಜೀವನವೇ ದೊಡ್ಡದೊಂದು ಗ್ರಂಥರಾಶಿ – ಅನುಭವಗಳ ಅಮೂಲ್ಯ ಗನಿಯಾಗಿದೆ. ಇವನ್ನೆಲ್ಲ ಓದಿ, ಗ್ರಹಿಸಿ, ಸೂಕ್ತ ಕ್ರಮದಲ್ಲಿ ಆಚರಣೆಗೆ ತರುವುದರಿಂದ ನಮ್ಮ ಕಲ್ಯಾಣವನ್ನು ಸಾಧಿಸಬಹುದು. ಆದರೆ ಇಂತಹ ವಿಚಾರಗಳ ವಜ್ರದ ಗನಿಯೇ ನಮ್ಮಲ್ಲಿರುವಾಗ ಅದರಲ್ಲಿ ದುಡಿಯಲಾರದೆ ಸೋಮಾರಿಗಳಾಗಿ ಪರಕೀಯರನ್ನು ಅನುಕರಿಸುವ "ಗುಲಾಮಗಿರಿ"ಯ ಅಭ್ಯಾಸಬಲವನ್ನು ಬಿಟ್ಟುಬಿಡುವ ವಿದ್ಯಾಭ್ಯಾಸವನ್ನು ನಾವು ಹೊಂದುವುದು ಅಗತ್ಯ. ಗಾಂಧೀಜಿಯ ವಿಚಾರ ಸರಣಿಯಲ್ಲಿ ಜಗತ್ತಿನ ಎಲ್ಲಾ ಕ್ರಾಂತಿಗಳ ಕಾವು ಹುದುಗಿದೆ. ಆದರೆ ಇತರ ಕ್ರಾಂತಿಗಳು ಹಿಂಸೆಯ ಮೇಲೆ ಅವಲಂಬಿತವಾಗಿವೆ; ಕ್ರಾಂತಿಗೆ ಆತಂಕವಾದುದನ್ನು ನಾಶಮಾಡುತ್ತ ಮುಂದೆ ನಡೆದಿವೆ –ಅವು ಹಾಗೆಯೇ ರಕ್ತ ಕ್ರಾಂತಿಯನ್ನು ನಡೆಯಿಸುತ್ತಲೇ ಇರಬೇಕಾಗುತ್ತದೆ –ಹುಲಿಯನ್ನು ಹತ್ತಿದ ಹಮ್ಮೀರನಂತೆ-ಅದು ಓಡುತ್ತಲೇ ಇರುತ್ತದೆ. ಆದರೆ ಗಾಂಧೀಜಿಯು ತನ್ನ ಕ್ರಾಂತಿಗೆ ಆತಂಕವಾದುದನ್ನು ಅಹಿಂಸೆಯ ಮೂಲಕ, ಸತ್ಯಾಗ್ರಹದ ಮೂಲಕ, ಆತ್ಮ ಬಲಿದಾನದ ಮೂಲಕ ಪರಿವರ್ತಿಸುತ್ತಿದ್ದರು. ಸರ್ವೋದಯ ಮತ್ತು ಅದರ ಮೂಲಕ ನಿತ್ಯ ಶಾಂತಿಯೇ ಅದರ ಅಂತಿಮ ಗುರಿ. ಪರಕೀಯರನ್ನು ಅನುಸರಿಸುವ ನಮ್ಮ ಪ್ರವೃತ್ತಿಯು ನಮ್ಮ ಪೈಗಳ್ಳತನಕ್ಕೆ ಸಾಕ್ಷಿ: ದುಡಿಮೆಯಿಂದ ನುಣುಚಿಕೊಳ್ಳುವ ಗುಣ. ಪರಕೀಯರ ಸಾಹಸಪ್ರಿಯತೆಗಳನ್ನು ನಾವು ಅನುಸರಿಸದೆ ಅವರಲ್ಲಿರುವ ಕೆಲವು ಕೆಟ್ಟ ಚಾಳಿಗಳನ್ನು ಅನುಸರಿಸುತ್ತೇವೆ. ಈ ರೀತಿಯಾಗಿ ದೇಶಕ್ಕೂ ಸಲ್ಲದ, ಪರದೇಶಕ್ಕೂ ಒಪ್ಪದ ಜೀವನವು ಯಾವ ಭಾರತೀಯನಿಗೂ ಭೂಷಣವಲ್ಲ. ಸಹೃದಯ ಓದುಗರು ತಪ್ಪುಗಳಿದ್ದರೆ ಕ್ಷಮಿಸಬೇಕಾಗಿ ಪ್ರಾರ್ಥನೆ. ಮಹಾತ್ಮಾಗಾಂಧಿಯವರ ಜನ್ಮಶತಾಬ್ದಿಯ ಕಾಣಿಕೆಯನ್ನು ಓದುಗರ ಕೈಯಲ್ಲಿಡಲು ಹೆಮ್ಮೆಪಡುತ್ತೇನೆ. ಈ ಲೇಖನಗಳನ್ನು ಇಷ್ಟೊಂದು ಅವಸರವಾಗಿ ಅಚ್ಚು ಹಾಕಿಸುವಂತೆ ಪ್ರೋತ್ಸಾಹಿಸಿ ಸಹಕರಿಸಿದ ಬಂಧು ಶ್ರೀ ಯು. ಕೃಷ್ಣಪ್ಪ ಶೆಟ್ಟಿ

ಯವರಿಗೆ ಚಿರ ಋಣಿಯಾಗಿರುತ್ತೇನೆ. ಅದೇ ರೀತಿ ಲೇಖನಗಳಲ್ಲಿ ತಿದ್ದುಪಡಿಗಳನ್ನು ಸೂಚಿಸಿದ ಕನ್ನಡ ಅಧ್ಯಾಪಕ ಶ್ರೀ ಬಿ. ಯಲ್. ನಾರಾಯಣ ಭಟ್ಟರಿಗೂ ಕೃತಜ್ಞತೆಗಳು,

ಪುಸ್ತಕದ ಮುಖ ಚಿತ್ರವನ್ನು ಬರೆದುಕೊಟ್ಟ ಶ್ರೀ S. ನಾರಾಯಣಾಚಾರ್ಯರಿಗೆ ಕೃತಜ್ಞತೆಗಳು. ಚಿತ್ರದ ಬ್ಲೋಕ್ ತಯಾರಿಸಿಕೊಟ್ಟ ಮಂಗಳೂರಿನ ಶಾರದಾ ಪ್ರೆಸ್ಸಿನ ಮಾಲಿಕರಿಗೂ ಕೃತಜ್ಞತೆಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಪುತ್ತೂರಿನ ಶಾಂತಿನಾಥ ಪ್ರೆಸ್ಸಿನ ಮಾಲಿಕ ಶ್ರೀ ಪಿ. ಜಿನರಾಜ ಶೆಟ್ಟಿಯವರಿಗೂ ಅವರ ಸಂಗಡಿಗರಿಗೂ ವಂದನೆಗಳು.

ಈ ಕಿರು ಹೊತ್ತಗೆಯ ಮುನ್ನುಡಿಯನ್ನು ಬರೆದು ಹರಸಿರುವ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಎಲ್ಲರಿಗೂ ಚಿರಪರಿಚಿತರು. ಮಾನ್ಯರು ಮನ ಕರಗಿಸುವ, ಆತ್ಮವನ್ನೆಚ್ಚರಿಸುವ ಹಲವಾರು ಕ್ರಾಂತಿಕಾರಿ ಕವಿತೆಗಳನ್ನು ರಚಿಸಿರುವ ಹಿರಿಯ ಕವಿಗಳು ಮಾತ್ರವಲ್ಲ, ರಾಷ್ಟ್ರ ಪ್ರಶಸ್ತಿ ವಿಜೇತ ಆದರ್ಶ ಶಿಕ್ಷಕರೂ ಆಗಿದ್ದಾರೆ. ಗ್ರಾಮ ಪಂಚಾಯತು ಮತ್ತು ಬ್ಲೋಕ್ ಸಲಹಾ ಸಮಿತಿಯ ಸಕ್ರಿಯ, ಸಶಕ್ತ ಮುಂದಾಳುಗಳೂ ಆಗಿ ದುಡಿಯುತ್ತಿರುವ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳನ್ನು ವಂದಿಸುವುದು ಅಗತ್ಯ.

ಪುತ್ತೂರು ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಬಿ. ಸಂಕಪ್ಪ ರೈಗಳು ಪ್ರೀತಿಯಿಂದ ಪ್ರೋತ್ಸಾಹದಾಯಕವಾದ ಎರಡು ಮಾತುಗಳನ್ನು ಬರೆದು ಸಹಕರಿಸಿರುವುದಕ್ಕಾಗಿ ಕೃತಜ್ಞನಾಗಿರುತ್ತೇನೆ. ಈ ಪುಸ್ತಕದಿಂದ ದೊರೆಯಬಹುದಾದ ಆರ್ಥಿಕ ಪ್ರತಿಫಲವನ್ನು ಐದು ಹರಿಜನ ಕುಟುಂಬಗಳಿಗೆ ಹಂಚಿ ಕೊಡಲಾಗುವುದು.

**ಜೈಹಿಂದ್**

ಪುತ್ತೂರು
೨ ಅಕ್ಟೋಬರ ೧೯೬೯ } **ಕೆ. ಧರ್ಮರಾಜ**

ಪೂಜ್ಯ ಮಾತಾಪಿತೃಗಳ ಚರಣ ಕಮಲಗಳಲ್ಲಿ
ಭಕ್ತಿಯ ಮೊದಲ ಕಾಣಿಕೆಯಾದ

"ಪುಷ್ಪಾಂಜಲಿ"ಯನ್ನು

ಸಮರ್ಪಿಸುತ್ತಿದ್ದೇನೆ.

ಕೆ. ಧರ್ಮರಾಜ

# ಭಾರತದ ಸತ್ಪುರುಷ—ಬಾಪೂಜಿ

### ಕತ್ತಲೆ ಕಳೆಯಿತು ಬೆಳಕು ಹರಿಯಿತು.

ಪೂಜ್ಯ ಕನಕ ನಡೆದಲ್ಲಿ ಕಲ್ಲ ಗೋಡೆ ಒಡೆಯಿತು; ಕನಕನ ಕಿಂಡಿ ಬಿರಿಯಿತು, ಹೊಸ ಹೊಂಬೆಳಕು ದೇವರ ಗರ್ಭಗುಡಿಯನ್ನು ಬೆಳಗಿತು, ಅಲ್ಲಿ ಕವಿದಿದ್ದ ಕತ್ತಲೆ ಕಳೆಯಿತು.

ಪೂಜ್ಯ ಗಾಂಧೀಜಿ ಹೋದಲ್ಲಿ ಬಂದಲ್ಲಿ ದಾಸ್ಯ ಜೀವನ ಕಳಚಿಬಿತ್ತು. ಪೊರೆ ಕಳೆದ ಹಾವಿನಂತೆ ಜನತೆ ಹೊಸ ಹುರುಪು ತಳೆಯಿತು. ಆಯುಧವಿಲ್ಲದೆ ಯುದ್ಧ ನಡೆಯಿತು. ಸೂರ್ಯನು ಎಂದೆಂದೂ ಅಸ್ತಮಿಸದ ಸಾಮ್ರಾಜ್ಯಶಾಹಿ ಎಲ್ಲಿ? ಪರಕೀಯ ಮಾಯಾಜಾಲದಲ್ಲಿ ಸಿಲುಕಿ ತಮ್ಮ ಆತ್ಮವನ್ನೇ ಮರೆತ ಜೀವಚ್ಛವ ಭಾರತೀಯರೆಲ್ಲಿ! ಆತ್ಮಶೋಧನೆಯನ್ನು ಮಾಡುವ ಮೂಲ ಪಾಠವನ್ನು ಗಾಂಧೀಜಿ ಭಾರತೀಯರಿಗೆ ಕಲಿಸಿಕೊಟ್ಟರು. ಕೇಸರವನ್ನು ಕೆರಳಿಸಿ ಕಾಲು ಕೆದರಿ ನಿಂತ ಸಿಂಹವನ್ನು ಮದಗಜಗಳು ಸುತ್ತುವರಿದು ನಿಂತಾಗ ಮುದಿ ಸಿಂಹಕ್ಕೆ ತನ್ನ ಮುದಿತನದ ಅರಿವಾಯ್ತು; ಅಲ್ಲಿಂದತ್ತ ತನ್ನ ಗವಿಯೊಳಗೆ ಮೈಯೆಳೆದುಕೊಂಡಿತು! ಗಾಂಧೀಜಿಯವರ ಸತ್ಯ ಶೋಧನೆಯು ಭಾರತೀಯರ ಆತ್ಮಶೋಧನೆಯ ಕೀಲಿಕೈಯಾಯ್ತು! ಭಾರತೀಯ ಮಕ್ಕಳ ಕಣ್ಣೀರು, ಕೆನ್ನೀರ ಮಡುವಿನಲ್ಲಿ ಸ್ವಾತಂತ್ರ್ಯ ತಾವರೆ ಅರಳಿತು. ಸ್ವಾತಂತ್ರ್ಯಪ್ರಿಯ ಮರಿದುಂಬಿಗಳನ್ನು ಜಗತ್ತಿನಾದ್ಯಂತ ತನ್ನತ್ತ ಕೈಮಾಡಿ ಕರೆಯಿತು! ಮಾನವ ಜನಾಂಗಕ್ಕೆ ಅತ್ಯಮೂಲ್ಯವಾದ ತಾತ್ವಿಕ ವಿಚಾರಗಳನ್ನು ದತ್ತವಾಗಿತ್ತ ಪುರುಷಸಿಂಹಗಳೆಷ್ಟೋ ಇರಬಹುದು. ಆದರೂ ಇಂತಹ ಆಕಾಶ ಕುಸುಮಗಳನ್ನು ಭಾರತೀಯ ನೆಲದಲ್ಲಿ ನೆಟ್ಟು ನೀರೆರೆದು ಬೆಳೆಸಲು ಜನಸಾಮಾನ್ಯರಿಗೂ ಸಾಧ್ಯವೆಂದು ಪ್ರಮಾಣ ರೂಪವಾಗಿ ಮಾಡಿ ತೋರಿದ ಪವಾಡವನ್ನು ಸಾಧಿಸಿದವರು, ಗಾಂಧೀಜಿ ಒಬ್ಬರೇ ಎಂದರೆ ಅತಿಶಯೋಕ್ತಿಯಾಗಲಾರದು. ಗಾಂಧೀಜಿಯ ವ್ಯಕ್ತಿತ್ವ ಹಿರಿದು—ಅದು ಹಿಮಾಲಯದಷ್ಟು

ಉನ್ನತವಾಗಿಯೂ ಇದೆ, ಹಿಮಾಲಯದಷ್ಟೇ ಪವಿತ್ರವಾಗಿಯೂ ಇದೆ. ಹಿಂದೂ ಸಾಗರದಷ್ಟು ಆಳವಾಗಿಯೂ ಇವೆ, ಸಾಗರದಂತೆಯೇ ತುಂಬಿಯೂ ಇದೆ; ಗಂಭೀರವೂ ಆಗಿದೆ.

ಸಾಮಾನ್ಯವಾಗಿ ಗಾಂಧೀಜಿಯನ್ನು ಓರ್ವ ಆದರ್ಶ ಭಾರತೀಯ ರಾಗಿದ್ದರೆಂದು ಹೇಳುವುದು ಸೂಕ್ತ. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣದ ಚತುರ್ಮುಖಗಳು ಗಾಂಧೀಜಿಯಲ್ಲಿ ಐಕ್ಯವಾಗಿದ್ದುವು. ಸತ್ಯದ ತತ್ವವನ್ನು ಸವಿದು ಇತರರಿಗೂ ಅದನ್ನು ಉಣ್ಣಿಸಿದರು, ಧರ್ಮದ ಚಲನವನ್ನು ಕಂಡುಕೊಂಡರು; ತನ್ನ ಸಂಗಡಿಗರಿಗೂ ತೋರಿಸಿಕೊಟ್ಟರು. ಅಹಿಂಸೆಯ ಅಗಾಧ ಶಕ್ತಿಯನ್ನು ಜಗತ್ತಿಗೇ ಎತ್ತಿ ತೋರಿಸಿದರು. ಸತ್ಯ, ಅಹಿಂಸೆಗಳು ಅಬಲರ ಆಸರೆಗಳಲ್ಲವೆಂದೂ ಅವು ಮಹಾಪುರುಷರ ಅಮಾನುಷ ದೈವೀಶಕ್ತಿಯೆಂದೂ, ಆತ್ಮಶಕ್ತಿಯೆಂದೂ ತಮ್ಮ ಜೀವನದ ಪ್ರತಿ ಹೆಜ್ಜೆ ಹೆಜ್ಜೆಗೂ ತೋರಿಸಿಕೊಟ್ಟರು. ದಕ್ಷಿಣ ಆಫ್ರಿಕದಲ್ಲಿ ಕಿಡಿಗೇಡಿ ಬಿಳಿಯನಿಂದ ಕಾಲೊದೆತ ತಿಂದಾಗಲೇ ಬ್ಯಾರಿಷ್ಟರ್ ಗಾಂಧೀಜಿಗೆ—ಭಾರತೀಯ ಗಾಂಧೀಜಿಯ ಆತ್ಮದರ್ಶನವಾಯ್ತು. ಬ್ರಹ್ಮಸಾಕ್ಷಾತ್ಕಾರವಾಯಿತು. ಹುಚ್ಚನೊಬ್ಬನ ಗುಂಡಿನಿಂದ ದೇಹಾಂತ್ಯವಾದಾಗಲೂ ಗಾಂಧೀಜಿಗೆ ಆತ್ಮನ ದರ್ಶನವಾಯ್ತು. ಹೊಡೆದವನನ್ನು ಹೊಡೆಯದಂತೆ—ಕೊಂದವನನ್ನು ಕೊಲ್ಲದಂತೆ ಆದೇಶವಿತ್ತ ಗಾಂಧೀಜಿ ಬ್ರಹ್ಮತೇಜೋಪುಂಜವಾಗಿದ್ದರು. ಗೀತೆಯಲ್ಲೂ, ಕುರಾನಿನಲ್ಲೂ ಬೈಬಲಿನಲ್ಲೂ, ಪರಮಾತ್ಮನ ಸಾನ್ನಿಧ್ಯ ಸಾಧ್ಯವೆಂದು ದಿನನಿತ್ಯ ಆಚರಿಸಿ ತೋರಿಸಿದರು. ಕಡೆಗೂ ಹರೇ ರಾಮ್ ಎಂದೇ ಜಪಿಸುತ್ತಾ ಆತ್ಮಾರ್ಪಣೆ ಗೈದರು. ಬ್ರಾಹ್ಮಣ್ಯಕ್ಕೆ ಇದಕ್ಕಿಂತ ಸುಂದರವಾದ, ಸೂಕ್ತವಾದ ಆದರ್ಶ ಸಿಗಲಾರದು!

ಗಾಂಧೀಜಿಯಲ್ಲಿ ಕ್ಷಾತ್ರತೇಜವೂ ಜ್ವಲಿಸುತ್ತಿತ್ತು. ಜಗತ್ತಿನಲ್ಲಿ ಪ್ರಬಲ ಶಕ್ತಿ ಎಂದುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯದೆದುರು ಎದ್ದುನಿಂತ ಗಾಂಧೀಜಿಗೆ ಅಂಜಿಕೆ ಎಂಬುದಿಲ್ಲ. ಹಾಗೆಂದು ಅವರೆಂದೂ ಬ್ರಿಟಿಷರನ್ನು ದ್ವೇಷಿಸುತ್ತಿದ್ದಿಲ್ಲ. ಇಂಗ್ಲೀಷ್ ಜನತೆಯ ಸೌಹಾರ್ದವನ್ನು, ಆಡಳಿತ ಕುಶಲತೆಯನ್ನು, ರಾಜಕೀಯ ಮುತ್ಸದ್ದಿತನವನ್ನು ಹೊಗಳುತ್ತಿದ್ದರು. ಹಿಟ್ಲರನ ಅಂಧತೆಯನ್ನು ದ್ವೇಷಿಸುತ್ತಿದ್ದರು; ಆದರೆ ಎಚ್ಚೆತ್ತ ಜರ್ಮ

ನಿಯ ಜನತೆಯನ್ನು ಮೆಚ್ಚುತ್ತಿದ್ದರು. ಈ ರೀತಿ ಗಾಂಧೀಜಿ ಅಜಾತ ಶತ್ರುವಾಗಿದ್ದರು. 1917ರಲ್ಲಿ ಚಂಪಾರಣ್ಯದ ಬಡ ರೈತರಿಗೆ ಅನ್ಯಾಯ ವನ್ನು ಪ್ರತಿಘಟಿಸಲು ಕಲಿಸಿದರು. ಅಹಮ್ಮದಾಬಾದಿನ ಗಿರಣಿ ಕಾರ್ಮಿಕರಿಗೆ ಅವರ ಶಕ್ತಿಯ ಅರಿವನ್ನುಂಟುಮಾಡಲು ಮೂರು ದಿನಗಳ ಉಪವಾಸ ಮಾಡಿದರು, 1919 ಮಾರ್ಚಿ 19ರಂದು ಭಾರತದಾದ್ಯಂತ ಹರ ತಾಳವಾಚರಿಸಿದಾಗ ದೇಶವಿಡೀ ಶಾಲಾ ಕಾಲೇಜುಗಳು ಮುಚ್ಚಿದುವು. ಅಂಗಡಿ ಕಾರ್ಖಾನೆಗಳು ಸ್ಥಗಿತಗೊಂಡವು. ಪೇಶಾವರ, ಬೊಂಬಾಯಿ, ಕಲ್ಕತ್ತ ದಂತಹ ಪಟ್ಟಣಗಳು ನಿರ್ಜನವಾದುವು—ಅಂದು ಭಾರತೀಯರಿಗೆ ತಮ್ಮ ಶಕ್ತಿಯ ವಿರಾಟರೂಪದ ಅರಿವಾಯ್ತು. 1919 ಎಪ್ರಿಲ್ 13ರಂದು ಜಲಿಯನ್ ವಾಲ್‌ಬಾಗ್ ಘಟನೆಯು ಭಾರತೀಯರ ಕ್ಷಾತ್ರ ತೇಜದ ಕಿಚ್ಚನ್ನು ಕೆರಳಿಸಿತು. 1919 ನವಂಬರದಲ್ಲಿ ಖಿಲಾಫತ್ ಚಳವಳದ ಮೂಲಕ ಪರಕೀಯ ವಸ್ತುಗಳು, ಶಾಲೆಗಳು, ನ್ಯಾಯಾಲಯ ಗಳು, ಬಿರುದುಬಾವಲಿಗಳು ಬಹಿಷ್ಕರಿಸಲ್ಪಟ್ಟವು! 1925ರಲ್ಲಿ ಹಿಂದೂ ಮುಸ್ಲಿಂ ಸೌಹಾರ್ದಕ್ಕಾಗಿ 21 ದಿನಗಳ ಉಪವಾಸಹೂಡಿದರು. 1937ರಲ್ಲಿ ಹರಿಜನರ ಉದ್ಧಾರಕ್ಕಾಗಿ ಆಮರಣ ಉಪವಾಸ ವ್ರತ ಕೈಕೊಂಡರು. 1930ರಲ್ಲಿ ಮಾರ್ಚಿ 12ರಂದು 54 ಅಂಗುಲ ಎತ್ತರ ಬಿದಿರ ಕಣೆಯನ್ನು ಹಿಡಿದು ದಂಡಿಯಾತ್ರೆಗಾಗಿ ತೆರಳಿದಾಗ—ನಮ್ಮ 'ಬುದ್ಧಿ ಜೀವಿಗಳು' ಮುಸು ಮುಸು ನಕ್ಕರು. ಬರೇ 78 ಮಂದಿ ಆಶ್ರಮವಾಸಿಗಳೊಡನೆ ಪ್ರಾರಂಭವಾದ ಈ ವಿಜಯಯಾತ್ರೆ 24 ದಿನಗಳಲ್ಲಿ 200 ಮೈಲುಗಳಷ್ಟು ನಡೆದು ಸಾವಿರಾರು ಜನರು ದಂಡಿಯನ್ನು ತಲುಪಿದಾಗ—ಉಪ್ಪಿನ ಸತ್ಯಾ ಗ್ರಹವನ್ನು ತೊಡಗಿದಾಗ—ನಮ್ಮ 'ಬುದ್ಧಿ ಜೀವಿಗಳು' ಪ್ರಮೆಗೊಂಡರು. ಜಗತ್ತೇ ಅಚ್ಚರಿಪಟ್ಟಿತು! ಭಾರತದ ನಿರ್ಗತಿಕ ಜನತೆ, ಹೆಂಗಸರು, ಮಕ್ಕಳು ಭಾಗವಹಿಸಿದ ಚರಿತ್ರಾರ್ಹ ದಂಡೀಯಾತ್ರೆಯಲ್ಲಿ ತಾವು ಪಾಲ್ಗೊಳ್ಳಲಿಲ್ಲ ವೆಂದು ನಾಚಿದರು! ಗಾಂಧೀಜಿಯ ಸಣ್ಣ ಮೂರ್ತಿಯಲ್ಲಿ ವಾಮನವತಾರವೇ ಅಡಗಿತ್ತೆಂದು ಜಗತ್ತು ನಂಬುವಂತಾಯ್ತು. ಬ್ರಿಟಿಷ್ ಬಲಿಚಕ್ರವರ್ತಿ ಸಮುದ್ರದತ್ತ ಕುಸಿದಾಗ ಜಗತ್ತಿಗೇ ದಿಗಿಲಾಯ್ತು! ಗಾಂಧೀಜಿಯು ಎಪ್ರಿಲ್ 6ರಂದು ಸಮುದ್ರದಂಡೆಯಲ್ಲಿ ಕೈಗೆತ್ತಿಕೊಂಡ ಒಂದಿಷ್ಟು ಉಪ್ಪಿನ ಶಕ್ತಿ

ಆಗಾಧವಾದುದು! ದೇಶದಾದ್ಯಂತ ಜನತೆ ಸಮುದ್ರದ ನೀರಿನಿಂದ ಉಪ್ಪು ತಯಾರಿಸಿದರು. ಉಪ್ಪಿನ ಕರವನ್ನು ಉಲ್ಲಂಘಿಸಿದರು. 60,000ಕ್ಕೂ ಮಿಕ್ಕಿದ ಮುಂದಾಳುಗಳು ಬ್ರಿಟಿಷ್ ಕೋಟೆಗಳಲ್ಲಿ ಕೈದಿಗಳಾದರು — ಬ್ರಿಟಿಷರ ಕಾನೂನಿನ ಕೋಟೆ ಮುರಿದುಬಿತ್ತು. ಭಾರತೀಯರಿಗೆ ಸ್ವಾತಂತ್ರ್ಯದ ಸವಿ ಸಿಕ್ಕಿತು, ನೆತ್ತರಿನ ರುಚಿಯುಂಡ ಹೆಬ್ಬುಲಿಗಳಂತೆ ಭಾರತೀಯ ವೀರಾಗ್ರಣಿಗಳು ದೇಶದ ಮೂಲೆ ಮೂಲೆಗಳಲ್ಲೂ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನೂದಿದರು. 54 ಅಂಗುಲದ ಬಿದಿರ ದಂಟು ಗಾಂಧೀಜಿಯ ಕೈಯಲ್ಲಿ ಪರಶಿವನ ತ್ರಿಶೂಲದಂತಾಯ್ತು, ಗಾಂಧೀಜಿಯ ಕ್ಷಾತ್ರಶಕ್ತಿ ಅವರ ಆತ್ಮದಲ್ಲಿ ಅಡಗಿತ್ತು. ಅಂತಹ ಆತ್ಮ ಶಕ್ತಿಯನ್ನು ಮರೆತು ಮಲಗಿದ್ದ ಕೋಟಿ ಭಾರತೀಯರ ಆತ್ಮಗಳನ್ನು ಹೊಡೆದೆಬ್ಬಿಸಿದರು, ಎಚ್ಚೆತ್ತ ಭಾರತೀಯರು ತಮ್ಮ ಸೇನಾ ನಾಯಕನ ಆಜ್ಞೆಯಿಂದ ಮುಂದೆ ಮುಂದೆ ನಡೆದರು. 1942ರಲ್ಲಿ ಪರಕೀಯರನ್ನು "ಹೊರ ನಡೆಯಿರಿ" ಎಂದು ಘೋಷಿಸುತ್ತಾ ದಿಲ್ಲಿಯ ಕೆಂಪು ಕೋಟೆಯ ತನಕವೂ ನಡೆದರು. ಗಾಂಧೀಜಿಯವರ ಕ್ಷಾತ್ರತೇಜದೆದುರು ಜಗತ್ತಿನ ದಂಡನಾಯಕರೆಲ್ಲಾ ತಲೆ ಬಾಗುವಂತಾಯ್ತು!

ಗಾಂಧೀಜಿ ಆದರ್ಶ ವೈಶ್ಯರೂ ಆಗಿದ್ದರು. ಹುಟ್ಟಿನಿಂದ ಬನಿಯ ರಾಗಿದ್ದ ಗಾಂಧೀಜಿ ವ್ಯಾಪಾರೀ ಜೀವನವನ್ನು ಚೆನ್ನಾಗಿ ತಿಳಿದಿದ್ದರು. ಆದರ್ಶ ವ್ಯಾಪಾರಿಯ ಮೇಲ್ಪಂಕ್ತಿಯನ್ನು ನಮ್ಮ ಮುಂದಿಟ್ಟಿರುತ್ತಾರೆ. 1920–1925ರ ವರೇಗೆ ಸತತವಾಗಿ ಗಾಂಧೀಜಿ ಭಾರತದಾದ್ಯಂತ ಯಾತ್ರೆ ಮಾಡಿದರು. ಹಳ್ಳಿ ಹಳ್ಳಿಗಳಲ್ಲೂ ತಿರುಗಾಡಿದರು. ಜನರಲ್ಲಿ ಖಾದಿಯ ಭಾವನೆಯನ್ನು ಬಿತ್ತಿದರು. ಭಾರತದ ಹಳ್ಳಿಗಳಲ್ಲಿ ರೈತರ ಬೆವರು ನೆತ್ತರು ಹರಿಸಿ ಬೆಳೆಸಿದ ಹತ್ತಿಯು ಇಂಗ್ಲೆಂಡಿನ ಮೆಂಚೆಸ್ಟರಿನಲ್ಲಿ ಬಟ್ಟೆಯ ಕಾರ್ಖಾನೆಗಳನ್ನು ನಡೆಸುತ್ತಿದ್ದುವು, ಅಲ್ಲಿಯ ಜನರಿಗೆ ಉದ್ಯೋಗ ದೊರಕಿಸಿ ಕೊಡುತ್ತಿತ್ತು; ಪುನಃ ನಮ್ಮ ಹತ್ತಿಯು ಬಟ್ಟೆಯಾಗಿ ನಮಗೆ ದುಬಾರಿ ಬೆಲೆಗೆ ಕೊಡಲ್ಪಡುತ್ತಿತ್ತು. ಈ ರೀತಿಯ ವ್ಯಾಪಾರಿ ಸುಲಿಗೆಯನ್ನು ಗಾಂಧೀಜಿ ಸಹಿಸಲಿಲ್ಲ. ಇಂಗ್ಲೇಂಡಿನ ಬಟ್ಟೆಗಳನ್ನೆಲ್ಲಾ ಬೊಂಬಾಯಿಯ ಚಪಾಟಿನಲ್ಲಿ ಒಟ್ಟುಹಾಕಿ ಸುಟ್ಟುಬಿಟ್ಟರು, ರಾಜಾಜಿ ಮೋತಿಲಾಲ್ ಮೊದಲಾದ

ಮೇಧಾವಿಗಳಿಂದ ಪೇಟೆಯ ಗಲ್ಲಿಗಲ್ಲಿಗಳಲ್ಲಿ ಖಾದಿ ಬಟ್ಟೆಯನ್ನು ಹೊರಿಸಿ ಕೊಂಡು ಹೋಗಿ ಖಾದಿ ವ್ಯಾಪಾರವನ್ನೇ ತೊಡಗಿದರು. ಭಾರತೀಯರು– ವಿದ್ಯಾವಂತರು, ಅವಿದ್ಯಾವಂತರೆಂಬ ಭೇದವಿಲ್ಲದೆ —ಬಡವರು, ಶ್ರೀಮಂತ ರೆಂಬ ಭೇದವಿಲ್ಲದೆ —ಮಿಲ್ಲು ಬಟ್ಟೆಗಳನ್ನು ಬಹಿಷ್ಕರಿಸುವಂತೆ ಮಾಡಿದರು. ಎಲ್ಲರೂ ತಾವೇ ನೂತ, ನೇಯ್ದ ಒರಟು ಖಾದಿ ಬಟ್ಟೆಯನ್ನೇ ಹೆಮ್ಮೆಯಿಂದ ಧರಿಸತೊಡಗಿದರು. ಪರಕೀಯ ಬಟ್ಟೆ ವ್ಯಾಪಾರಿಗಳು ತಮ್ಮ ಮಳಿಗೆಗಳನ್ನು ಮುಚ್ಚಿದರು. ಪರದೇಶದ ಬಟ್ಟೆ ವ್ಯಾಪಾರಕ್ಕೆ ಕೊಡಲಿಯೇಟು ಬಿತ್ತು. ಅದೇ ರೀತಿ ದೇಶಿಯ ಕೈಗಾರಿಕೆಗಳಾದ ಕಾಗದ ತಯಾರಿ, ಎಣ್ಣೆ, ಸಾಬೂನು ತಯಾರಿಯನ್ನೂ ಪ್ರೋತ್ಸಾಹಿಸಿದರು! ಇದರಿಂದ ಪರದೇಶದಿಂದ ತರಿಸಿ ಕೊಳ್ಳುವ ದಿನನಿತ್ಯದ ಜೀವನಾವಶ್ಯಕ ಸಾಮಾಗ್ರಿಗಳೂ ಕಡಿಮೆಯಾದುವು– ಗಾಂಧೀಜಿಯವರು ವ್ಯಾಪಾರೀ ಜೀವನಕ್ಕೆ ಹೊಸ ಹುರುಪನ್ನೇ ಕೊಟ್ಟು ಆದರ್ಶ ವ್ಯಕ್ತಿಗಳಾದರು!

ಗಾಂಧೀಜಿಯವರು ಶೂದ್ರರಲ್ಲಿ ಶೂದ್ರರಾಗಲು ಬಯಸಿದರು, ಈ ವೃತ್ತಿಯನ್ನು ಅವರು ತಮ್ಮ ಮನೆಯಿಂದಲೇ, ಆಶ್ರಮದಿಂದಲೇ ತೊಡಗಿದರು. ತಮ್ಮ ಆಶ್ರಮದಲ್ಲಿ ತಮ್ಮ ಬಟ್ಟೆ ಒಗೆಯುವ, ಕಸ ಗುಡಿಸುವ ಕಕ್ಕಸು ತೊಳೆಯುವ ಕೆಲಸಗಳನ್ನು ತಾವೇ ಮಾಡುತ್ತಿದ್ದರು. ತಮ್ಮ ಅನುಯಾಯಿಗಳಿಗೂ, ಮಿತ್ರರಿಗೂ ಈ ರೀತಿ ಮಾಡುವಂತೆ ಪ್ರಚೋ ದಿಸುತ್ತಿದ್ದರು. ದಿನ ನಿತ್ಯ ನೂಲದೆ ಉಣ್ಣುತ್ತಿರಲಿಲ್ಲ. ದಿಲ್ಲಿಯಲ್ಲಿ ಭಂಗಿ ಕೊಲೊನಿ ಮಧ್ಯದಲ್ಲಿ ಅವರು ವಾಸಿಸುತ್ತಿದ್ದರು. ದಾನಿ ಬೆಹನ್ ಎಂಬ ಹರಿಜನ ಮಹಿಳೆಯು ಅವರು ಉಣ್ಣುತ್ತಿದ್ದ ಆಹಾರವನ್ನು ಬೇಯಿಸು ತ್ತಿದ್ದಳು, ಲಕ್ಷ್ಮಿ ಎಂಬ ಅಸ್ಪೃಶ್ಯ ಮಗುವನ್ನು ತನ್ನ ದತ್ತ ಪುತ್ರಿಯಾಗಿ ಸಾಕಿದರು. ಹಿಂದೂ ಪತಿವ್ರತಾ ಮಹಿಳೆ — ಕಸ್ತೂರಿಬಾ ಇವನ್ನೆಲ್ಲಾ ಪ್ರಾರಂಭದಲ್ಲಿ ಪ್ರತಿಭಟಿಸಿದರೂ ಗಾಂಧೀಜಿ ವಿಚಲಿತರಾಗಲಿಲ್ಲ. ಮನೆ ಯಿಂದ ತೊಡಗಿದ ಹರಿಜನೋದ್ಧಾರ ಕಾರ್ಯ ಭಾರತವಿಡೀ ಹರಡಿತು. ಶೂದ್ರ ಹರಿಜನೋದ್ಧಾರಕ್ಕಾಗಿ ಆಮರಣ ಉಪವಾಸ ವ್ರತವನ್ನು ಕೈಕೊಳ್ಳ ಬೇಕಾಯ್ತು. ಭಾರತದ ಜನ ಸಂಖ್ಯೆಯ 1/5 ಅಂತ ಜನತೆಯನ್ನು ಅಸ್ಪೃಶ್ಯ ರೆಂದು ತೆಗಳುವ ಜನ ಸ್ವರಾಜ್ಯಪಡೆಯಲು ಅರ್ಹರಾಗಲಾರರೆಂದು ದೇಶ

ವನ್ನೇ ಎಚ್ಚರಿಸಿದರು! ಶೂದ್ರರಿಗಾಗಿ, ಹರಿಜನರಿಗಾಗಿ ಬಿಡಿಕಾಸನ್ನು ಬೇಡಿದರು. ಹೆಂಗಸು ಧರಿಸಿದ ಮಾಂಗಲ್ಯವನ್ನು ಬೇಡಿದರು, ಸುಮಂಗಲೆಯರ ಓಲೆಯನ್ನೂ ಬೇಡಿದರು, ಬಳೆಗಳನ್ನು ಬೇಡಿದರು. ತನ್ನ ಕೈಬರಹವನ್ನು ಕೊಡಬೇಕಾದರೆ ಹರಿಜನ ನಿಧಿಗೆ ಕಾಣಿಕೆ ಕೊಡಬೇಕೆಂದು ಕೇಳಿದರು. ದೀನರಲ್ಲಿ ದೀನರಾಗಿ ಶೂದ್ರರಲ್ಲಿ ಶೂದ್ರರಾಗಿ—ಮಡಿವಂತರಿಂದ ಜಾತಿ, ಮತ, ಧರ್ಮದ ಹೆಸರಲ್ಲಿ ಆಗುತ್ತಿದ್ದ ಅನ್ಯಾಯವನ್ನು ಖಂಡಿಸಿದರು. ಹುಟ್ಟಿನಿಂದ ಯಾರೂ ಹೊಲೆಯನಲ್ಲವೆಂದು ಸಾರಿದರು. ಅಸ್ಪೃಶ್ಯತೆಯು ಹಿಂದೂ ಸಮಾಜಕ್ಕೆ ಅಂಟಿದ ಬಂದಣಿಕೆ ಎಂದರು. ದೇವಾಲಯಗಳ ಬಾಗಿಲುಗಳು ಶೂದ್ರರಿಗಾಗಿ ತೆರೆದುವು. ಶಾಲಾ ಕಾಲೇಜುಗಳಲ್ಲಿ ಹರಿಜನ ಮಕ್ಕಳು ವಿದ್ಯಾವಂತರಾಗುವ ಸದವಕಾಶವನ್ನು ಕಲ್ಪಿಸಿದರು. ಸಮಾಜದ ಇತರರೊಡನೆ ಬೆರೆತು ಬಾಳುವ ಸಂದರ್ಭ ಗಾಂಧೀಜಿ ಶೂದ್ರ ಜನತೆಗೆ ಒದಗಿಸಿ ಕೊಟ್ಟರು. ದಕ್ಷಿಣ ಆಫ್ರಿಕದಲ್ಲಿ ಕರಾರಿನ ಕೂಲಿಯ ವೇಷ ತೊಟ್ಟರು. ಭಾರತೀಯ ಕೂಲಿಯ ಪಾರತಂತ್ರ್ಯವನ್ನು ಹೊಡೆದೋಡಿಸಿದರು. ಭಾರತದಲ್ಲಿ ಅರೆ ಫಕೀರನ ವೇಷ ಧರಿಸಿದರು, ರೈತನ, ನೇಯ್ಗೆಯವನ ಉದ್ಧಾರ ಸಾಧಿಸಿದರು.

ಈ ರೀತಿ ಗಾಂಧೀಜಿಯವರು ಬ್ರಾಹ್ಮಣರ ಪವಿತ್ರತೆ, ಕ್ಷತ್ರಿಯರ ಮುನ್ನಡೆವ ಹುಮ್ಮಸ್ಸು, ವೈಶ್ಯರ ವ್ಯಾವಹಾರಿಕ ವಿಚಾರ ಮತ್ತು ಶೂದ್ರರ ದೇಹ ದಂಡಿಸಿ ಉಣ್ಣುವ ಗುಣಗಳ ಸಂಗಮವಾಗಿದ್ದರು, ಆದರ್ಶ ಭಾರತೀಯರಾಗಿದ್ದರು! ಇಂದು ನಾವು ಅವರ ಹಿರಿಯ ವ್ಯಕ್ತಿತ್ವದ ನೆನಪಿಗಾಗಿ ತಲೆ ಎತ್ತಿ ನೋಡುವ ಉನ್ನತ ಸ್ತೂಪಗಳನ್ನು ನೆಡಬೇಕು, ನೆರಳನ್ನೀಯುವ, ಹಣ್ಣನ್ನೀಯುವ ಮರಗಳನ್ನು ನೆಡಬೇಕು, ಅವರ ಸದಾ ನಗುತ್ತಿರುವ ಸಂತುಷ್ಟ ಜೀವನದ ಪ್ರತೀಕವಾದ ಶಿಲೆಯ, ಲೋಹಗಳ ಮೂರ್ತಿಗಳನ್ನು ಅಲ್ಲಲ್ಲಿ ನೆಡಬೇಕು. ಈ ನೆನಪುಗಳು ಗಾಂಧೀಜಿಯವರ ಜೀವನವನ್ನು ಮರೆಯಿಸದಂತೆ ಮಾಡಬೇಕು. ನಮ್ಮ ಮುಂದಿನ ಪೀಳಿಗೆಗೆ ಒಂದು ಅತ್ಯುತ್ತಮ ಆದರ್ಶ ಇದರಿಂದಾಗಿ ದೊರಕುವಂತಾಗಬೇಕು. ಎಲ್ಲದಕ್ಕಿಂತ ಅಧಿಕವಾಗಿ ಗಾಂಧೀಜಿಯವರ ಜೀವನ ಯಾತ್ರೆಯ, ವಿಜಯ ಯಾತ್ರೆಯ ವಿಚಾರಗಳನ್ನು ಭಾರತೀಯರು ಮಾತ್ರವಲ್ಲ ವಿಶ್ವವೇ ಅಧ್ಯಯನ ಮಾಡು

ತ್ತಿರಬೇಕು. ಗಾಂಧೀಜಿಯವರ ಬಲಿದಾನ. ವಿಶ್ವಪ್ರೇಮ, ಅವರು ಪೂಜಿಸುತ್ತಿದ್ದ ಸತ್ಯ ಅಹಿಂಸೆಗಳ ನಿಜರೂಪವನ್ನು ನಾವು ದಿನ ನಿತ್ಯ ನಮ್ಮ ಜೀವನದಲ್ಲಿ ರೂಪಿಸಲು ಪ್ರಯತ್ನಿಸುವಂತಾಗಬೇಕು. ಅಂದೇ ವಿಶ್ವ ಕುಟುಂಬವನ್ನು ಕಟ್ಟುವ ಕನಸು ನೆನಸಾದೀತು. ಸತ್ಯದ ಎದುರು ಅಸತ್ಯ ಕುಸಿದು ಬಿದ್ದೀತು, ಅಧರ್ಮದ ಕತ್ತಲೆಯ ಸಾಮ್ರಾಜ್ಯದಲ್ಲಿ ಧರ್ಮದ ಬೆಳಕು ಮೂಡೀತು!

*K. Darmaraj*
**(Friday 1969)**

# ಜೀವನ ಶಿಕ್ಷಣ-ಕಾಯಕದ ಮೂಲಕ ಶಿಕ್ಷಣ

## ಕಾಯಕವೇ ಕೈಲಾಸ

"ಕಾಯಕವೇ ಕೈಲಾಸ"ವೆಂಬ ನಿತ್ಯಸತ್ಯದ ಸಮಾಜ ನೀತಿಯನ್ನು ನಮ್ಮ ಪೂರ್ವಜರು ಭಾರತೀಯ ಸಮಾಜದ ಮುಂದಿಟ್ಟಿರುತ್ತಾರೆ. ಈ ಉದಾತ್ತವಾದ ಮತ್ತು ಸತ್ಯವಾದ ಸಮಾಜ ನೀತಿಯ ಸಿದ್ಧಿಗಾಗಿ ಕಾಯಕದ ಮೂಲಕ ಶಿಕ್ಷಣವನ್ನೀಯುವ ವರ್ಧಾ ಶಿಕ್ಷಣ ನೀತಿಯನ್ನು ಗಾಂಧೀಜಿಯವರು ದೇಶದ ಮುಂದಿಟ್ಟಿರುವರು. ಇದಕ್ಕಿಂತ ಉದಾತ್ತವಾದ ಸಾಧುವಾದ ಮತ್ತು ಸಮಯೋಚಿತವಾದ ಮಗುದೊಂದು ಶಿಕ್ಷಣ ಪದ್ಧತಿಯನ್ನು ದೇಶದ ಅಥವಾ ಪರದೇಶದ ಯಾವ ಶಿಕ್ಷಣ ತಜ್ಞನೂ ಭಾರತದಲ್ಲಿ ಕಾರ್ಯರೂಪಕ್ಕೆ ತಂದು ಅದರ ಸಫಲತೆಯನ್ನು ಸಮಾಜದ ಮುಂದಿಟ್ಟಿಲ್ಲ. ಇಂದು ಪ್ರಚಲಿತವಾಗಿರುವ ನಮ್ಮ ವಿದ್ಯಾಭ್ಯಾಸ ಜೀವನಕ್ಕೂ ವಾತಾವರಣಕ್ಕೂ ಹೊಂದಿಕೊಳ್ಳದ ವಿಷಯವಾಗಿ ಪರಿಣಮಿಸಿದೆ. ಇಂತಹ ಕೃತ್ರಿಮ ವಿದ್ಯಾಭ್ಯಾಸವು ವಿದ್ಯಾರ್ಥಿಯ ಮೆಚ್ಚುಗೆಯನ್ನು ಪಡೆಯುತ್ತಿಲ್ಲ. ಇದರಿಂದಾಗಿ ಮಕ್ಕಳಲ್ಲಿ ಬೌದ್ಧಿಕ ಅಜೀರ್ಣ ತಲೆಹಾಕಿದೆ, ತಲೆಶೂಲೆಯೂ ಮೂಡಿದೆ. ಮಕ್ಕಳ ತಲೆ ಶೂಲೆ, ಮಕ್ಕಳ ಹೆತ್ತವರಿಗೂ ತಗುಲಿದೆ–ಅಲ್ಲಿಂದ ಅದು ರಾಷ್ಟ್ರಕ್ಕೆ ಹಬ್ಬುತ್ತದೆ. ಇಂತಹ ವಿನಾಶಕಾರಿ ವಿದ್ಯೆಯನ್ನು ಅಧಿಕಾರ ಸ್ಥಾನದಲ್ಲಿದ್ದ ಮುಂದಾಳುಗಳೂ ಶಪಿಸುತ್ತಿದ್ದಾರೆ. ಆದರೆ ಅದು ಹಾಗೆಯೇ ನಡೆಯುತ್ತಿದೆ. ಒಂದನೇ ತರಗತಿಗೆ ಸೇರಿಸಲ್ಪಟ್ಟ 6 ವರ್ಷದ ಒಂದು ಮಗುವು ಅನೇಕ ವರ್ಷಗಳ ಯಾತ್ರೆ ಮಾಡುತ್ತಾ ಯಸ್.ಯಸ್.ಯಲ್.ಸಿ. ತರಗತಿಗೆ ತಲಪುತ್ತಾನೆ. ಅಲ್ಲಿಂದ ಮುಂದೇನು ಮಾಡಬೇಕೆಂದು ತಿಳಿಯದೆ, ತಿಳಿದರೂ ಧೈರ್ಯಸಾಲದೆ ಕೋಲೇಜು ಪ್ರವೇಶ ಪಡೆಯುತ್ತಾನೆ. ಅಲ್ಲಿ 4–5 ವರ್ಷ ಕಳೆಯುತ್ತಲೇ 16–17 ವರ್ಷದ ಯುವಕನು ಹೊರ ಬರುತ್ತಾನೆ. ಆದರೆ ಸಮಾಜದಲ್ಲಿ ಅವನಿಗೆ ಕಾದಿರುವುದೇನು? ನಿರಾಶೆ, ನಿರಾಶೆ. ರೈತನ ಮಗನು ರೈತನಾಗಲಾರದೆ ಕೈಗಾರಿಕೆಯವನ ಮಗನು

ಕೈಗಾರಿಕೆಯಲ್ಲಿ ಮನಸ್ಸು ಮಾಡದವನಾಗಿ ಎಲ್ಲಿಯೂ ಬೇಡದವನಾಗಿ ತಿರುಗುತ್ತಿರುತ್ತಾನೆ.

ನೌಕರಿ, ಚಾಕರಿ ಎಂದು ಹಳ್ಳಿಯನ್ನು ಬಿಟ್ಟು ಪೇಟೆಯತ್ತ ಪಯಣ ಬೆಳೆಸುತ್ತಾನೆ. ಅಲ್ಲಿಯೂ ಪ್ರವೇಶ ದೊರೆಯದಿದ್ದರೆ ಪೇಟೆಯ ಕೆಟ್ಟ ಚಾಳಿಯನ್ನು ಅಂಟಿಸಿಕೊಂಡು ಭಗ್ನ ಹೃದಯಿಯಾಗಿ ಹಿಂತಿರುಗುವ ಈ ಕರುಣಾ ಜನಕ ಜೀವನ ಯಾವ ಸಮಾಜಕ್ಕೆ ಭೂಷಣವೆನಿಸೀತು? ಭಗ್ನ ಹೃದಯಿಯಾದ 'ವಿದ್ಯಾವಂತ' ಯುವಕ ಆ ಸೇನೆ, ಈ ಸೇನೆಗಳ 'ಘೋಷಣೆ' ಗಳಿಗೆ ಬಲಿಯಾಗುತ್ತಾನೆ. ಘೇರಾವೋ ಮುಷ್ಕರಗಳೇ ಮುಂದಿನ ಅವನ ದಾರಿಯಾದರೆ ಯಾರೂ ಆಶ್ಚರ್ಯಪಡಬೇಕೆಂದಿಲ್ಲ. ಹೂವಾಗಿ ಅರಳಿ ಸಮಾಜವನ್ನು ಸೇವಿಸಬೇಕಾಗಿದ್ದ ಯುವ ಜನತೆ ಸಮಾಜದ ಕಾಲಡಿಯ ನೆಗ್ಗಿನ ಮುಳ್ಳಾಗಿ ಅಲ್ಲಲ್ಲಿ ನಮ್ಮನ್ನು ಚುಚ್ಚಿದರೆ ನಾವು ನಿದ್ದೆ ಕಣ್ಣುಬಿಟ್ಟು ನೋಡುತ್ತೇವೆಯೋ ಹೊರತು ಈ ಸಾಮಾಜಿಕ ಅನ್ಯಾಯವನ್ನು ತಪ್ಪಿಸಲು ಮನಸ್ಸು ಮಾಡುವುದಿಲ್ಲ. ನಮ್ಮ ಹಟಮಾರಿತನ, ಪರದೇಶೀ ಭಾವನೆ ಗಳು, ಶುಷ್ಕ ವೇದಾಂತಗಳು ನಮ್ಮ ಕಣ್ಣುಗಳನ್ನು ಕುರುಡಾಗಿಸಿವೆ.

ಇಂತಹ ದಾರುಣ ಪರಿಸ್ಥಿತಿಯನ್ನು ಗಾಂಧೀಜಿಯ ದೂರದೃಷ್ಟಿ ಬಹು ಹಿಂದೆಯೇ ಕಂಡಿತ್ತು. ಆದುದರಿಂದಲೇ ಅವರು ಧೈರ್ಯವಾಗಿ ಭಾರತೀಯ ಮಕ್ಕಳ ಮೇಲಿನ ಮಮತೆಯಿಂದ ಜೀವನ ಶಿಕ್ಷಣ ಅಥವಾ ವಾರ್ಧಾ ಶಿಕ್ಷಣ ಕ್ರಮವನ್ನು ಜಾರಿಗೆ ತಂದರು. ಇಂತಹ ಶಿಕ್ಷಣದ ಮೂಲಕ ಮಗುವಿನಲ್ಲಿ ಪ್ರಾರಂಭದಿಂದಲೇ ಸ್ವಾವಲಂಬನ ಜೀವನ ನಡೆಸುವ ಅಭ್ಯಾಸ ವನ್ನು ಕಲಿಸುತ್ತಿದ್ದರು. ಬೆಳೆಯುತ್ತಿರುವ ಮಗುವಿನ ಕೈಗಳ, ಬುದ್ಧಿಯ ಮತ್ತು ಆತ್ಮದ ಕೃಷಿಯೇ ಗಾಂಧೀಜಿಯ ಶಿಕ್ಷಣ ನೀತಿಯ ಅಡಿಗಲ್ಲು. ಸಮರ್ಥ ಸೇವಕನಾಗಿ ಬಾಳುವ ವಿದ್ಯೆ. ಆದರೆ ಇಂದಿನ ನಮ್ಮ ವಿದ್ಯಾರ್ಥಿ 'ಸಾಹೇಬ'ನಾಗಲು ಹವಣಿಸುತಿರುತ್ತಾನೆ. 'ವಿದ್ಯಾವಂತ'ರೆಲ್ಲರೂ ಸಾಹೇಬ ರಾಗಿ ಪೋಶಾಕು ಧರಿಸಿ ಸಿಂಹಾಸನದಲ್ಲಿ ಕುಳಿತರೆ—ಸೇವೆಮಾಡುವ ಕೆಲಸ ಅವಿದ್ಯಾವಂತರ ಪಾಲಿನದಾಯ್ತು. ಇಂತಹ ಮೈಗಳ್ಳ ಭಾವನೆಯ ವಿದ್ಯಾಭ್ಯಾಸದಿಂದಲೇ ದೇಶಕ್ಕೆ ಅನ್ನ, ಬಟ್ಟೆಯನ್ನು ಕೊಡುವ ರೈತನು ಇಂತಹ ಸಾಹೇಬರುಗಳನ್ನು ಸಾಕುವ, ಸೇವಿಸುವ ಸ್ಥಿತಿಗೆ ಬಂದಿರುತ್ತಾನೆ.

ರೈತನ ಸೇವಕರಾಗಿ ಅವನ ಸೇವೆ ಮಾಡಬೇಕಾಗಿದ್ದ ಸೇವಕರು ವಿಧಾನಸಭಾ ಕಚೇರಿಗಳಲ್ಲಿ, ಜಿಲ್ಲಾ ಕಚೇರಿಗಳಲ್ಲಿ ತಾಲೂಕು ಕೇಂದ್ರಗಳಲ್ಲಿ ತಾವೇ ಬ್ರಹ್ಮನ ಪುನಾರವತಾರವಾಗಿ ಬಾಳುತ್ತಿದ್ದಾರೆ. ತಾವೇ ರೈತನಿಗೆ ಭೂಮಿ ಕೊಡುವ, ಅನ್ನ ಕೊಡುವ ದಾತಾರರು, ತಾವೇ ಸರಕಾರವೆಂಬ ಭಾವನೆಯು ಬೇರೂರಿದೆ. ಯಾವ ಪ್ರಜಾಪ್ರಭುತ್ವಕ್ಕೂ ಇಂತಹ ಕ್ರಮಗಳು ಯೋಗ್ಯ ವೆನಿಸಲಾರವು.

ಗಾಂಧೀಜಿಯ ಸತ್ಯಾಗ್ರಹದ ತವರೂರು ದಕ್ಷಿಣ ಆಫ್ರಿಕವಾದಂತೆಯೇ ಅವರ ಶೈಕ್ಷಣಿಕ ಪ್ರಯೋಗಗಳೂ ದಕ್ಷಿಣ ಆಫ್ರಿಕದಿಂದಲೇ ತೊಡಗಿರುತ್ತವೆ. ಅವರ ಫಿನಿಕ್ಸ್‌ನಲ್ಲಿದ್ದ ಟಾಲ್‌ಸ್ಟಾಯ್ ಆಶ್ರಮದಲ್ಲಿ ತಮ್ಮೊಂದಿಗೇ ವಾಸಿಸುತ್ತಿದ್ದ ಸತ್ಯಾಗ್ರಹಿಗಳ ಕೆಲವು ಮಕ್ಕಳಿದ್ದರು—ಅವರಲ್ಲಿ ಕೆಲವರು ತಮಿಳರು, ಹಿಂದುಗಳು, ಮುಸ್ಲಿಮರೂ ಇದ್ದರು. ಗಾಂಧೀಜಿಯವರ ಮೂವರು ಮಕ್ಕಳೂ, ಅವರೊಂದಿಗಿದ್ದರು. ಆಶ್ರಮದಲ್ಲಿ ಸಂಬಳದ ಉಪಾಧ್ಯಾಯರು ದೊರೆಯದ ಕಾರಣ ಗಾಂಧೀಜಿಯೇ 1911ರಲ್ಲಿ ಉಪಾಧ್ಯಾಯರಾಗಿ ಮಕ್ಕಳಿಗೆ ವಿದ್ಯೆ ಕಲಿಸಲು ಪ್ರಾರಂಭಿಸಿದರು, ಮಕ್ಕಳ ಮಾತೃಭಾಷೆಗಳಲ್ಲಿ ಶಿಕ್ಷಣದ ಪ್ರಾರಂಭವಾಯ್ತು. ಮಕ್ಕಳಿಗೆ ಅಕ್ಷರ ಜ್ಞಾನದೊಂದಿಗೆ ಉತ್ತಮ ಚಾರಿತ್ರ್ಯವನ್ನೇ ಬೆಳೆಸುವ ಪಾಠವನ್ನೇ ಕಲಿಸಿ ಕೊಡಲಾಯ್ತು. ಆಶ್ರಮದಲ್ಲಿ ಅಡಿಗೆಯ ಕೆಲಸ, ಕೃಷಿಯ ಕೆಲಸಗಳ ಮೂಲಕ ಮಕ್ಕಳಿಗೆ ಸಾಕಷ್ಟು ದೇಹಶ್ರಮದ ಕೆಲಸವೂ ದೊರೆಯುವಂತೆ ಜಾಗ್ರತೆ ವಹಿಸಲಾಯ್ತು. ಪ್ರತಿ ಮಗುವಿಗೂ ಉಪಯುಕ್ತ ಕಸುಬನ್ನು ಕಲಿಸುವ ಉದ್ದೇಶದಿಂದ ಪಾದರಕ್ಷೆ ಹೊಲಿಯುವ ಮತ್ತು ಮರದ ಕೆಲಸ ಗಳನ್ನು ಹೇಳಿ ಕೊಡಲಾಯ್ತು. ಗಾಂಧೀಜಿಯವರೂ ಅವರ ಮಿತ್ರ ಕಲ್ಲೆನ್ ಬಾಕ್‌ರವರೂ ಮಕ್ಕಳೊಂದಿಗೆ ಕೂಡಿಯೇ ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದುದರಿಂದ ಮಕ್ಕಳಿಗೆ ತಮ್ಮ ದೈಹಿಕ ಹಾಗೂ ಮಾನಸಿಕ ಶಿಕ್ಷಣ ಮೆಚ್ಚಿಗೆಯಾಗುತಿತ್ತು ದೈಹಿಕ ಮತ್ತು ಮಾನಸಿಕ ಶಿಕ್ಷಣದೊಂದಿಗೆ ಮಕ್ಕಳಿಗೆ ಆತ್ಮಜ್ಞಾನದ ಮೂಲಪಾಠಗಳನ್ನು ಹೇಳಿ ಕೊಡಲಾಗುತಿತ್ತು. ವಿದ್ಯಾರ್ಥಿ ಗಳಲ್ಲಿ ಶಿಸ್ತು, ಸಂಯಮ, ಆತ್ಮ ಜ್ಞಾನವನ್ನು ಬೆಳೆಸಿಕೊಳ್ಳುವ ಕಾರ್ಯದಲ್ಲಿ ಗಾಂಧೀಜಿಯವರೂ ಅವರ ಮಿತ್ರರೂ ತಮ್ಮ ಆತ್ಮಜ್ಞಾನವನ್ನು

ಅಧಿಕವಾಗಿ ಸಾಧಿಸಿಕೊಂಡು ವಿದ್ಯಾರ್ಥಿಗಳಿಗೆ ಆದರ್ಶ ಉಪಾಧ್ಯಾಯ ರಾಗಬೇಕಿತ್ತು. ಮಕ್ಕಳಿಗೆ ಉಪಾಧ್ಯಾಯರೇ, ಪ್ರಪ್ರಥಮ ಪಠ್ಯ ಪುಸ್ತಕಗಳಂತಿದ್ದರು. ವಿದ್ಯಾರ್ಥಿಗಳು ಉಪಾಧ್ಯಾಯರ ಬಾಯಿಂದ ಬಂದ ಹಲವಾರು ವಿಚಾರಗಳನ್ನು ಗಮನವಿಟ್ಟು ಕೇಳಿಕೊಂಡು ಗ್ರಹಿಸಿ ಕೊಳ್ಳುತ್ತಿದ್ದರು. ಇದರಿಂದ ಮಕ್ಕಳಿಗೆ ಶಿಕ್ಷಣವು ಹೊರೆಯೆಂದಣಿಸದೆ ಸದಾ ಕುಟುಂಬ ಜೀವನದಂತಿತ್ತು, ಶಿಸ್ತುಗೇಡಿ ವಿದ್ಯಾರ್ಥಿಗಳನ್ನು ಗಾಂಧೀಜಿ ತನ್ನದೇ ಆದ ಕ್ರಮಗಳಿಂದ ಸರಿದಾರಿಗೆ ಹಚ್ಚುತ್ತಿದ್ದರು. ವಿದ್ಯಾರ್ಥಿಯ ತಪ್ಪಿಗೆ ಉಪಾಧ್ಯಾಯನು ಕಾರಣನೆಂದು ನಂಬಿದ್ದ ಗಾಂಧೀಜಿ ತನ್ನ ಶಿಷ್ಯರ ಸಂಯಮವನ್ನು ತಿದ್ದಲು ಒಮ್ಮೆ ಏಳು ದಿನಗಳ ಮತ್ತೊಮ್ಮೆ ಹದಿನಾಲ್ಕು ದಿನಗಳ ಉಪವಾಸ ವ್ರತ ಮಾಡಿ ವಿದ್ಯಾರ್ಥಿಗಳ ಕಣ್ಣು ತೆರೆಯಿಸಿದ್ದ ರಿಂದ ತಪ್ಪಿತಸ್ಥ ವಿದ್ಯಾರ್ಥಿಗಳ ಪ್ರೇಮ ಮತ್ತಷ್ಟು ಹೆಚ್ಚಾಯಿತು.

ಈ ರೀತಿ ಉಪಾಧ್ಯಾಯನಾದವನು ತನ್ನ ವಿದ್ಯಾರ್ಥಿಗಳನ್ನು ಅರಿತು ಕೊಂಡು ಅವರ ಸಮಸ್ಯೆಗಳನ್ನು ತಿಳಿದುಕೊಂಡು ಅವನ್ನು ಪರಿಹರಿಸಲು ಪ್ರೇಮದಿಂದ ಸಹರಿಸಬೇಕೆಂಬ ಉದಾತ್ತ ಶಿಕ್ಷಣ ಪದ್ಧತಿಯನ್ನು ಗಾಂಧೀಜಿ ಪ್ರಯೋಗಗಳ ಮೂಲಕ ಯಶಸ್ವಿಯಾಗಿ ಕಾರ್ಯಗತ ಮಾಡಿ ತೋರಿದರು. ಆದರೆ ಇಂದಿನ ನಮ್ಮ ಶಿಕ್ಷಣ ಕ್ರಮ ತೀರಾ ವಿರುದ್ಧವಾಗಿದೆ. ದೈಹಿಕ ಶ್ರಮ ವನ್ನು ವಿದ್ಯಾರ್ಥಿಗಳೂ ಉಪಾಧ್ಯಾಯರು ತಿರಸ್ಕರಿಸುತ್ತಾರೆ. ಮಾನಸಿಕ ಬೆಳವಣಿಗೆಗೆ ಸಾಕಷ್ಟು ಸಮಯವೇ ಸಿಕ್ಕುತ್ತಿಲ್ಲ. ಆತ್ಮ ಶಿಕ್ಷಣದ ಗಂಧ ಗಾಳಿಯೋ ನಮ್ಮ ಶಿಕ್ಷಣ ಪದ್ಧತಿಯಲ್ಲಿಲ್ಲ. ಇಂತಹ ವಿದ್ಯಾರ್ಥಿಗಳು ಬೆಳೆದು ಬಂದು ನಮ್ಮ ಮುಂದಿನ ಉಪಾಧ್ಯಾಯರು, ರಾಜಕೀಯ ಮುಂದಾಳುಗಳು, ತಾಂತ್ರಿಕತಜ್ಞರು, ಅಧಿಕಾರಿಗಳಾಗಿ ಸಮಾಜದ ಸೇವಕರೆಂದೆನಿಸಿಕೊಳ್ಳುತ್ತಾರೆ. ದೇಹಶ್ರಮವನ್ನು ಕಡೆಗಣಿಸುವ, ಕೀಳೆನಿಸುವ ಮನೋಭಾವ ಬರುತ್ತದೆ. ವ್ಯವಸಾಯ ಅಧಿಕಾರಿಗಳು ಶಿರದಿಂದ ನಖದ ತನಕ ಪೋಷಾಕು ಧರಿಸಿ ರೈತನ ಕೆಲಸದ ಮೇಲ್ವಿಚಾರಣೆ ನೋಡಲು ಹೋಗುತ್ತಾರೆ. ರೈತನ ಗದ್ದೆಗೆ ಇಳಿದು ಮಣ್ಣಿನ ಹದನೋಡಲು ಮತ್ತೊಬ್ಬ ಅವಿದ್ಯಾವಂತ ಅಥವಾ ಅಲ್ಪ ವಿದ್ಯಾ ವಂತನಾದ ಸೇವಕನು ಬೇಕಾಗುತ್ತಾನೆ. ಈ ರೀತಿಯ ಮೈಗಳ್ಳತನ ನಮ್ಮ ಹೆಚ್ಚಿನ ವಿವಿಧ ಅಧಿಕಾರಿಗಳಲ್ಲಿ ಮೈಗೂಡಿದೆ. ಅದೇ ರೀತಿ ಆತ್ಮ ವಿದ್ಯೆ

ಇಲ್ಲದ ತನ್ನ ಆತ್ಮದ ಹಿರಿತನವನ್ನು ಕುರಿತು ಯೋಚಿಸದ ತಜ್ಞರು, ರಾಜಕೀಯ ಪುಢಾರಿಗಳು ಅನ್ಯರ ಆತ್ಮದ ಬೆಲೆಯನ್ನೇ ತಿಳಿಯದಾಗಿದ್ದಾರೆ. ತಮ್ಮ ತಾಂತ್ರಿಕ ಜ್ಞಾನದ ಸಹಾಯದಿಂದ ವಿನಾಶಕಾರೀ ಹೈಡ್ರೋಜನ್ ಬೋಂಬ್, ಆಟಂಬಾಂಬುಗಳನ್ನು ತಯಾರಿಸಿ ತಮ್ಮ ಅಣ್ಣ ತಮ್ಮಂದಿರ ಪ್ರಾಣಗಳ ಮೇಲೆ ಪ್ರಯೋಗ ನಡೆಸುತ್ತಿರುವ ಪಾಶವೀ ಗುಣಗಳನ್ನು ಬೆಳೆಸುತ್ತಿದ್ದಾರೆ. ಈ ರೀತಿಯ ಸಾಮಾಜಿಕ ತಿರುವು ಮುರುವುಗಳು ಸಾಮಾನ್ಯವಾಗಿ ನಮ್ಮ ಇಂದಿನ ಆಧುನಿಕ ಶಿಕ್ಷಣಗಳ ಫಲಗಳಾಗಿವೆ. ಮಾನವನನ್ನು ಮಾನವನನ್ನಾಗಿ ಬೆಳೆಸುವ ಬದಲು ಮಾನವನನ್ನು ದೇವತ್ವದತ್ತ ಒಯ್ಯುವ ಬದಲು ನಮ್ಮ ಶಿಕ್ಷಣ ಕ್ರಮವು ಮಾನವನನ್ನು ಮೃಗವನ್ನಾಗಿ ಮಾಡುತ್ತದೆ. ಎಲ್ಲಿ ದೇವತೆಗಳ ದೇವ ನೃತ್ಯ ನಡೆಯಬೇಕಿತ್ತೋ ಅಲ್ಲೆಲ್ಲಾ ದೆವ್ವಗಳು ಕುಣಿಯುತ್ತಿವೆ. ದೇವಗಾನವು ಮೊಳಗಬೇಕಾದಲ್ಲಿ ಸ್ಮಶಾನದ ಪೈಶಾಚಿಕ ಕೂಗುಗಳು ಕೇಳುತ್ತಿವೆ. ಶಿಕ್ಷಣದ ಈ ಸಮಾಜಘಾತುಕ ಪರಿಸ್ಥಿತಿಯನ್ನು ಕಂಡೇ ಗಾಂಧೀಜಿಯಂತಹ ಮುಂದಾಳುಗಳು ತಮ್ಮ ಸೇವೆಯನ್ನು ತಾಯ್ನಾಡಿಗೆ ಸಲ್ಲಿಸುವ ಉದ್ದೇಶದಿಂದ ಮತ್ತು ಜನತೆಗೆ ಈ ಕುರಿತು ಉಪಯುಕ್ತ ಶಿಕ್ಷಣ ಮತ್ತು ತರಬೇತಿಯನ್ನು ಕೊಡುವ ಉದ್ದೇಶದಿಂದ ಪರಕೀಯ ಆಳರಸರ ಅಂಕಿತದಲ್ಲಿ ಪರದೇಶಿ ಭಾವನೆಯನ್ನು ತಳೆದಿದ್ದ ಅಂದಿನ ಶಿಕ್ಷಣ ಸಂಸ್ಥೆಗಳನ್ನು ಬಿಟ್ಟು ತಮ್ಮದೇ ಆದ ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕಾಯ್ತು. ಗಾಂಧೀಜಿ ತಮ್ಮ ಆಶ್ರಮಗಳ ಮೂಲಕ ಈ ಕೆಲಸವನ್ನು ಮಾಡುತ್ತಿದ್ದರು. ಗಾಂಧೀಜಿಯ ಹಲವಾರು ಪುರುಷ ಹಾಗೂ ಸ್ತ್ರೀ ಅನುಯಾಯಿಗಳು ಗ್ರಾಮಗಳಿಗೆ ತೆರಳಿ ಅಲ್ಲಿ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಆತ್ಮ ಜ್ಞಾನವನ್ನು ಹೇಳಿಕೊಡುತ್ತಿದ್ದರು. ಆರೋಗ್ಯ, ಜನಸೇವೆಯ ಕೆಲಸಗಳನ್ನು ಮಾಡುತ್ತಿದ್ದರು. ಮಕ್ಕಳ ಶಿಕ್ಷಣದೊಂದಿಗೆ ಮಕ್ಕಳ ಹೆತ್ತವರಿಗೂ ಅವರವರ ಕಸುಬುಗಳಲ್ಲಿ, ಆರೋಗ್ಯದ ವಿಚಾರ, ಪಾನನಿಷೇಧ, ಅಸ್ಪೃಶ್ಯತೆ, ಖಾದಿ ಮತ್ತೀಯ ಐಕ್ಯದ ಕುರಿತು ಶಿಕ್ಷಣವೀಯುತ್ತಿದ್ದರು. ಜನತೆಯ ಮೇಲಿನ ಪ್ರೇಮದಿಂದ ಈ ರೀತಿಯ ಶಿಕ್ಷಣವನ್ನೀಯಲಾಗುತ್ತಿತ್ತು. ಅದೇ ರೀತಿ ವಿಶ್ವಕವಿ ರವೀಂದ್ರನಾಥ ಠಾಗೋರರು ಬಂಗಾಳದಲ್ಲಿ ಶಿಕ್ಷಣ ಕ್ರಮದಲ್ಲಿ ಕ್ರಾಂತಿಯನ್ನೇ ಸಾಧಿಸಿದ್ದರು. ಮಗುವಿನಲ್ಲಿ ಅಡಗಿರುವ ಶಕ್ತಿಯನ್ನು ಹೊರ

ಗಳೆಯಲು ಅವರು ನೃತ್ಯ, ನಾಟಕ, ಚಿತ್ರಕಲೆ, ಸಂಗೀತವೇ ಮೊದಲಾದ ಕಲೆಗಳನ್ನು ಆರಿಸಿಕೊಂಡು ತಮ್ಮದೇ ಆದ ಶಿಕ್ಷಣಪದ್ಧತಿಯನ್ನು ಪ್ರಾರಂಭಿಸಿದರು. ಭಾರತೀಯ ಸಂಸ್ಕೃತಿಯ ವ್ಯಾಪಕವಾದ ಪರಿಚಯವನ್ನು ಭಾರತೀಯ ವಿದ್ಯಾರ್ಥಿಗಳಿಗೂ ಪರದೇಶದ ವಿದ್ಯಾರ್ಥಿಗಳಿಗೂ ಮಾಡಿಕೊಡುವ ಮಹತ್ತರವಾದ ಉದ್ದೇಶವನ್ನಿಟ್ಟುಕೊಂಡು ಕವಿರವೀಂದ್ರರು 1921ರಲ್ಲಿ ತಮ್ಮ "ವಿಶ್ವಭಾರತಿ"ಯನ್ನು ಸ್ಥಾಪಿಸಿದರು. ಅಲ್ಲಿ ಮಾತೃಭಾಷೆಯಲ್ಲೇ ಶಿಕ್ಷಣವನ್ನೀಯಲಾಗುತ್ತಿತ್ತು. ಇಡೀ ವಿದ್ಯಾಲಯವು ಒಂದೇ ಕುಟುಂಬದಂತೆ ಕೆಲಸ ಮಾಡುತ್ತಿತ್ತು. ಅಲ್ಲಿಯ ಉಪಾಧ್ಯಾಯರನ್ನು ಕುಟುಂಬಿಕ ಹೆಸರುಗಳಾದ ಮಾವ, ಚಿಕ್ಕಪ್ಪ, ಅಣ್ಣ ಎಂದೇ ಕರೆಯಲಾಗುತಿತ್ತು. ಆದರೆ ನಮ್ಮ ಆಧುನಿಕ ಶಿಕ್ಷಣವು ಪರದೇಶೀ ನಾಗರಿಕತೆಯನ್ನು ಅನುಸರಿಸುತ್ತದೆ. ಈ ರೀತಿಯ ಪರದೇಶಿ ಮನೋಭಾವವು ಭಾರತೀಯ ವ್ಯಕ್ತಿತ್ವಕ್ಕೆ ತಗುಲಿದ ಬಂದಣಿಗೆಯಂತಿದೆ. ಇಂಗ್ಲೆಂಡಿನ ವಿದ್ಯಾರ್ಥಿ ಇಂಗ್ಲಿಷ್ ಭಾಷೆಯಲ್ಲಿ ಮೋಹತಾಳುತ್ತಾನೆ; ತನ್ನ ಜನರ ಕುರಿತು ಹೆಮ್ಮೆ ಪಡುತ್ತಾನೆ.

ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಶೆಲ್ಲಿ ಕವಿಗಳನ್ನು ಪೂಜಿಸುತ್ತಾನೆ. ತನ್ನನ್ನಾಳುವ ರಾಜನಿಗೆ, ತನ್ನ ದೇಶದ ಯೂನಿಯನ್ ಜಾಕ್ ಧ್ವಜಕ್ಕೆ ಪ್ರಾಣಕ್ಕಿಂತ ಹೆಚ್ಚಿನ ಬೆಲೆ ಕೊಡುತ್ತಾನೆ. ಅದೇ ರೀತಿ ಅಮೇರಿಕದ ವಿದ್ಯಾರ್ಥಿ ಅಮೇರಿಕದ ಕಲ್ಲುಮಣ್ಣನ್ನೂ ಮರವನ್ನೂ ಪ್ರೀತಿಸುತ್ತಾನೆ. ಜಪಾನಿ ವಿದ್ಯಾರ್ಥಿಯು ತಾನು ಜಪಾನು ದ್ವೀಪದವನೆಂದು ಕರೆಸಿಕೊಳ್ಳಲು ಹೆಮ್ಮೆ ಪಡುತ್ತಾನೆ. ಆದರೆ ನಮ್ಮ ಅದೆಷ್ಟು ಮಂದಿ ವಿದ್ಯಾರ್ಥಿಗಳು ಸಂಸ್ಕೃತ, ಪ್ರಾಕೃತ ಹಿಂದೀ ಭಾಷೆಗಳಲ್ಲಿ ಅಭಿಮಾನ ತಾಳಿದ್ದಾರೆ. ಅದೆಷ್ಟು ಮಂದಿ ಕಾಳಿದಾಸ, ಭವಭೂತಿ, ಪಂಪ ರನ್ನರ ಹೆಸರು ಕೇಳಿಸಿಕೊಂಡಿದ್ದಾರೆ. ಅದೆಷ್ಟು ಮಂದಿ ವಿದ್ಯಾರ್ಥಿಗಳು ನಮ್ಮ ರಾಷ್ಟ್ರಧ್ವಜ, ರಾಷ್ಟ್ರಗೀತೆಗಳಿಗೆ ಮರ್ಯಾದೆ ಕೊಡುತ್ತಾರೆ. ಅದೆಷ್ಟುಮಂದಿ ವಿದ್ಯಾರ್ಥಿಗಳು ನಮ್ಮ ಪುಣ್ಯ ಪುರುಷರ ಕುರಿತು ಓದಲು, ಕೇಳಲು, ಉತ್ಸುಕರಾಗಿದ್ದಾರೆ? ಇದೆಲ್ಲಾ ನಮ್ಮ ಮುಂದಾಳುಗಳು, ಶಿಕ್ಷಣ ತಜ್ಞರು ಕೇಳಿಕೊಂಡು ಉತ್ತರಿಸಬೇಕಾದ ಪ್ರಶ್ನೆಗಳು. ನಮ್ಮ ನೆಲದ ಸಂಸ್ಕೃತಿಯಲ್ಲಿ, ನಮ್ಮ ಪುರಾಣ ಪುರುಷರ, ಚಾರಿತ್ರಿಕ ವ್ಯಕ್ತಿಗಳ ಕುರಿತು ಸರಿಯಾದ ಜ್ಞಾನ ಮತ್ತು ಅಭಿಮಾನ ಕುದು

ಲಿಸದ ವಿದ್ಯೆಯು ವಿದ್ಯೆಯಲ್ಲ. ದೇಶಕ್ಕೆ, ರಾಷ್ಟ್ರಧ್ವಜಕ್ಕೆ, ರಾಷ್ಟ್ರಗೀತೆಗಳಿಗೆ ನಿಷ್ಠೆಯನ್ನು ಮೂಡಿಸದ ವಿದ್ಯೆಯು ವಿದ್ಯೆಯೆನಿಸಲಾರದು. ರಾಷ್ಟ್ರನಿಷ್ಠೆಯನ್ನು ಒಡೆದು ಪರದೇಶೀ ನಿಷ್ಠೆಯ ಬೀಜಬಿತ್ತುವ ಸಮಾಜದ್ರೋಹ ಕೆಲಸಗಳನ್ನು ವಿದ್ಯಾರ್ಥಿಗಳ ಹೆತ್ತವರೂ, ಗುರುಗಳೂ ಮನಸ್ಸಿನಲ್ಲಿಯೂ ಎಣಿಸಬಾರದು ಮತ್ತು ಈ ದೆಸೆಯಲ್ಲಿ ವಿದ್ಯಾರ್ಥಿಗಳಿಗೆ ಆದರ್ಶರಾಗಿರುವುದು ಅಗತ್ಯ. ಗಾಂಧೀಜಿಯವರ ಅಭಿಮತದಂತೆ ವಿದ್ಯಾರ್ಥಿಗಳಲ್ಲಿ ಹುಟ್ಟುವ ಒಡಕು ಭಾವನೆಗಳಿಗೆ ಹೆತ್ತವರೂ ಉಪಾಧ್ಯಾಯರೂ ಕಾರಣರಾಗಿರುವುದರಿಂದ - ಅವರು ತಮ್ಮನ್ನು ತಾವೇ ತಿದ್ದಿಕೊಳ್ಳುವುದು ಅವರ ವಯಕ್ತಿಕ ದೃಷ್ಟಿಯಿಂದಲೂ ದೇಶದ ದೃಷ್ಟಿಯಿಂದಲೂ ಅಗತ್ಯ. ವಿದ್ಯಾರ್ಥಿಗಳಲ್ಲಿ ತನ್ನ ಸಮಾಜದ ಕುರಿತು, ರಾಷ್ಟ್ರದ ಕುರಿತು, ಸಂಸ್ಕೃತಿಯ ಕುರಿತು ಅಭಿಮಾನ ಹುಟ್ಟಿಸುವುದು ಅಗತ್ಯ. ಇದು ನಮ್ಮ ಉಪಾಧ್ಯಾಯರೂ, ಪಠ್ಯಪುಸ್ತಕಗಳೂ ಸಾಧಿಸಬೇಕಾದ ಕಾರ್ಯಗಳು. ಉಪಾಧ್ಯಾಯರು ಈ ದೆಸೆಯಲ್ಲಿ ತಾವೂ ಅಭಿಮಾನ ತಾಳಿ-ವಿದ್ಯಾರ್ಥಿಗಳಿಗೆ ಆದರ್ಶರಾಗಿರುವುದು ಅಗತ್ಯ. ವಿದ್ಯಾರ್ಥಿಗಳ ಮನಮುಟ್ಟುವಂತೆ ನಮ್ಮ ಪೂಜನೀಯ ಪುರಾಣ ಪುರುಷರ, ಚಾರಿತ್ರಿಕ ಪುರುಷರ ಸಾಹಸದ ತ್ಯಾಗಗಳ ಕೆಲಸಕಾರ್ಯಗಳನ್ನು ಮೌಕಿಕವಾಗಿ ವಿವರಿಸುವುದರಿಂದ ವಿದ್ಯಾರ್ಥಿಯ ಮನಸ್ಸಿನ ಮೇಲೆ ಅಗಾಧವಾದ ರೀತಿಯ ಪರಿಣಾಮವಾಗಲು ಸಾಧ್ಯವಿದೆ, ಸುಂದರವಾದ, ಆಕರ್ಷಕವಾದ ಚಿತ್ರಗಳ ಮೂಲಕ, ಬರಹಗಳ ಮೂಲಕ ಪಠ್ಯಪುಸ್ತಕಗಳನ್ನು ರೂಪಿಸುವುದು ಅಗತ್ಯ. ನಮ್ಮ ಚರಿತ್ರೆಗಳನ್ನೂ ವಿದ್ಯಾರ್ಥಿಗೆ ಮನದಟ್ಟಾಗುವ ರೀತಿಯಲ್ಲಿ ಬರೆದು ಪ್ರಕಟಿಸುವುದು ಅಗತ್ಯ. ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಹಿಮಾಲಯದ ತನಕ ಅಲ್ಲಲ್ಲಿ ಹರಡಿರುವ ತೀರ್ಥಕ್ಷೇತ್ರಗಳನ್ನು, ಪುಣ್ಯ ಪುರುಷರ ನೆನಹು ಸ್ತಂಭಗಳ ದರ್ಶನಗಳಿಗಾಗಿ ವರ್ಷಗಳ ಪರ್ಯಂತರ ಕಾಲ್ನಡಿಗೆಯಲ್ಲೇ ಸಾವಿರಾರು ಭಕ್ತವೃಂದ ದೇಶವಿಡೀ ಯಾವುದೇ ಭೇಧಭಾವವಿಲ್ಲದೆ ಅಲ್ಲೇ ದಾಡುತ್ತಿದ್ದರು. ಇದು ಪುರಾಣ ಕಾಲದಿಂದಲೂ ನಡೆದು ಬಂದ ರೀತಿ. ಗಂಗಾ ಗೋದಾವರಿ ನದಿಗಳನ್ನು ಒಂದೇ ಉಸಿರಿನಲ್ಲಿ ಸ್ತುತಿಸುವ ಭಾರತೀಯರಲ್ಲಿ ಬಿರುಕು ಹುಟ್ಟಿಸುವ ಕುಹಕ ಊಹಾಪೋಹದ ಚರಿತ್ರೆಗಳ ವಿಷಬೀಜವನ್ನೇಕೆ ಬಿತ್ತಬೇಕು.? ಮಾನವನ ಮೃಗಜೀವನದ ಕರಾಳ ಕೃತ್ಯಗಳು

ಮೊದಲಿನಿಂದಲೇ ನಡೆದು ಬಂದಿದೆ. ರಾಮಾಯಣ ಕಾಲದ ರಕ್ಕಸರೂ ನಾಚಲು ಹೇಸುವಂತಹ, ನಾಚುವಂತಹ ನಾರಕೀಯ ಕೆಲಸಗಳನ್ನು ಮಾಡಿ ನಮ್ಮವರನೇಕರು ದೊಡ್ಡ ಮುಂದಾಳುಗಳೆನಿಸಿಕೊಂಡಿದ್ದಾರೆ. ತಮ್ಮ ತಾಯಿ, ತಂಗಿಯರ ಮಾನ, ಪ್ರಾಣಗಳ ಮೇಲೆ ರಾಜಕೀಯವಾಡಿದ ಮೃಗಗಳ ಕೃತ್ಯಗಳನ್ನು ಚರಿತ್ರೆಯ ಹೆಸರಿನಲ್ಲಿ ಬರೆಯಬಾರದು, ಪ್ರಕಟಿಸಬಾರದು, ಓದಬಾರದು.

ಅಂತಹ ತಲೆಗಡುಕರ ಚಂಡಾಲ ಕೃತಿಗಳ ಕುರಿತು ನಾವೂ ಓದಬಾರದು. ನಮ್ಮ ಮಕ್ಕಳೂ ಓದಬಾರದು. ದೇಹದ ರೋಗಗ್ರಸ್ಥ ಭಾಗವನು ಕೊಯ್ದು ಬಿಸಾಡುವಂತೆ-ಹೇಯ ಕೃತ್ಯಗಳನ್ನು ಕಡೆಗಣಿಸಬೇಕು. ಉದಾತ್ತವಾದ, ಸಾಹಸಮಯ, ತ್ಯಾಗಮಯ, ಧಾರ್ಮಿಕ ಪುರುಷರ ಮತ್ತು ಅವರ ಕೃತಿಗಳ ಚರಿತ್ರೆಯನ್ನು ಬರೆದು ಪ್ರಕಟಿಸಬೇಕು. ಆ ಪುರುಷರು, ಅವರ ಕೃತಿಗಳು ನಮ್ಮ ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ಅದೇ ರೀತಿ ನಮ್ಮ ಶ್ರೇಷ್ಠ ಲೇಖಕರೂ, ವೃತ್ತ ಪತ್ರಿಕೆಗಳೂ ಸೈತಾನರ ಜೀವನಕ್ಕೆ ಹೆಚ್ಚಿನ ಗಮನವೀಯದೆ, ಸಾಧುಗಳ ಕೃತಿಗಳನ್ನು ವಿದ್ಯಾರ್ಥಿಗಳ ಮುಂದಿಡಬೇಕು. ನಮ್ಮ ಚಲಚಿತ್ರಗಳೂ, ರೇಡಿಯೋ ಮೊದಲಾದ ಸಾಧನಗಳು ಈ ದೆಸೆಯಲ್ಲಿ ಉಪಯುಕ್ತವಾದ. ವ್ಯಾಪಕವಾದ ಸೇವೆಯನ್ನು ದೇಶದ ಮುಂದಿನ ಜನಾಂಗಕ್ಕಾಗಿ ಮಾಡಬೇಕಾಗಿದೆ. ಭಾರತದ ಜನಸಂಖ್ಯೆಯ ಐದನೇ ಒಂದು ಪಾಲು 6ರಿಂದ 14ವರ್ಷ ವಯಸ್ಸಿನ ಸುಮಾರು ಹತ್ತು ಕೋಟಿ ಪ್ರಾಯದ ಮಕ್ಕಳಿದ್ದಾರೆಂದು ಗಣನೆಗೆ ತೆಗೆದುಕೊಳ್ಳಬಹುದು. ಈ ಹತ್ತುಕೋಟಿಯಲ್ಲಿ ಸುಮಾರು ನೂರಕ್ಕೆ ಮೂವತ್ತರಷ್ಟು ಮಕ್ಕಳು ಇನ್ನೂ ಶಾಲೆಯ ಮೆಟ್ಟಲನ್ನು ಹತ್ತಿರುವುದಿಲ್ಲ. ಅಂದರೆ ಸಮಾರು 3 ಕೋಟಿಯಷ್ಟು ಶಾಲಾ ಪ್ರಾಯದ ಮಕ್ಕಳು ಅವಿದ್ಯಾವಂತರಾಗಿ ಮುಂದುವರಿಯುತ್ತಾರೆ. ಅವರು ಅವಿದ್ಯಾವಂತ ರೈತರಾಗಿ, ತಾಯಿಯಂದಿರಾಗಿ, ರಾಜಕೀಯ ಮುಂದಾಳುಗಳಾಗಿ ಕೆಲಸಗಾರರಾಗಿ ದೇಶದಲ್ಲಿ ಜೀವಿಸಿರುತ್ತಾರೆ. 10 ಕೋಟಿ ಶಾಲಾ ಪ್ರಾಯದ ಮಕ್ಕಳಲ್ಲಿ ಸುಮಾರು ಅರ್ಧದಷ್ಟು ಹೆಣ್ಣುಮಕ್ಕಳಾಗಿದ್ದಾರೆ. 10 ಕೋಟಿ ಮಕ್ಕಳಲ್ಲಿ ನೂರಕ್ಕೆ ಎಂಭತ್ತರಷ್ಟು ಗ್ರಾಮಾಂತರ ಪ್ರದೇಶದ ಮಕ್ಕಳಾಗಿರುತ್ತಾರೆ. ಇವರಲ್ಲಿ ಪ್ರತಿಯೊಬ್ಬ ಮಗುವಿನ ವಿದ್ಯಾಭ್ಯಾಸಕ್ಕಾಗಿ ಎರಡು ಜನ ಭಾರತೀಯರ

ವಾರ್ಷಿಕ ವರಮಾನದಷ್ಟು ಅಂದರೆ ರೂ. 500-600ರಷ್ಟು ಖರ್ಚು ತಗಲು ತ್ತದೆ. ಇಷ್ಟು ಖರ್ಚಾದರೂ ವಿದ್ಯಾಭ್ಯಾಸವನ್ನು ಮಧ್ಯದಲ್ಲೇ ಬಿಟ್ಟು ಬಿಡು ವುದರಿಂದ ಹೆಚ್ಚಿನ ನಷ್ಟವು ಸಂಭವಿಸುತ್ತದೆ.

ತಜ್ಞರ ಲೆಕ್ಕದಂತೆ ಒಂದನೇ ತರಗತಿಗೆ ಸೇರಿಸಲಾದ ಪ್ರತಿ ನೂರು ಮಕ್ಕಳಲ್ಲಿ ಐದನೇ ವರ್ಷ ಐದನೇ ತರಗತಿ ತಲಪುವ ಮಕ್ಕಳು ಬರೇ 40 ಮಂದಿ. ಉಳಿದ 60 ಮಂದಿ ಮಕ್ಕಳು ಅವಿದ್ಯಾವಂತರಾಗಿ ಮುಂದುವರಿಯುತ್ತಾರೆ. ಅವರ ವಿದ್ಯಾಭ್ಯಾಸಕ್ಕಾಗಿ ಮಾಡಲಾದ ಖರ್ಚು ವ್ಯರ್ಥವಾಗುತ್ತದೆ. ಅದೇ ರೀತಿ ಒಂದನೇ ತರಗತಿಗೆ ಸೇರಿಸಲಾಗುವ ಪ್ರತಿ ನೂರು ಮಕ್ಕಳಲ್ಲಿ ಬರೇ 20 ಮಂದಿ ಮಾತ್ರ 8ನೇ ವರ್ಷದಲ್ಲಿ 8ನೇ ತರಗತಿ ತಲುಪುತ್ತಾರೆ. ಉಳಿದ ವಿದ್ಯಾರ್ಥಿಗಳ ಜೀವನವೂ ನಷ್ಟವಾಯಿತು–ಅವರ ವಿದ್ಯೆಯ ಖರ್ಚು ವ್ಯರ್ಥವಾಯಿತು. ಈ ರೀತಿಯ ದುಸ್ಥಿತಿಗೆ ಹೆತ್ತವರಲ್ಲಿ ನೂರಕ್ಕೆ ಎಂಭತಕ್ಕೂ ಹೆಚ್ಚು ಮಂದಿ ಅವಿದ್ಯಾವಂತರಾಗಿರು ವುದೂ, ಅವರ ಬಡತನವೂ ಕಾರಣವಾಗಿದೆ. ಇದರಿಂದಾಗಿ ರಾಷ್ಟ್ರಕ್ಕಾಗುವ ನಷ್ಟವು ಅಪಾರವಾದುದು. ಆದರೆ ಇಷ್ಟೆಲ್ಲ ಕಷ್ಟ, ನಷ್ಟಗಳಿಂದಾದರೂ ವಿದ್ಯೆಪಡೆದ ವಿದ್ಯಾರ್ಥಿಯು ಅವನ ಕುಟುಂಬಕ್ಕೆ, ಅವನ ಸಮಾಜಕ್ಕೆ ಉಪಯುಕ್ತ ವ್ಯಕ್ತಿಯಾಗುತ್ತಾನೆಯೇ ಯೆಂಬುದು ದೊಡ್ಡ ಪ್ರಶ್ನೆ. ವಿದ್ಯೆ ಪಡೆದ ಯುವಕನು ತನ್ನ ತಂದೆಯ ಕಸುಬಾದ ಬೇಸಾಯದಲ್ಲಿ ಯಾವ ರೀತಿಯ ವಿದ್ಯೆಯನ್ನೂ ತನ್ನ ವಿದ್ಯಾರ್ಥಿ ಜೀವನದಲ್ಲಿ ಪಡೆಯುತ್ತಿಲ್ಲ. ಅದರ ಬದಲು—ವಿದ್ಯೆಯನ್ನು ಪಡೆದ ಯುವಕನಿಗೆ ತನ್ನ ಕುಲಕಸುಬಾದ ಬೇಸಾಯವೇ ಮೊದಲಾದ ದೇಹಶ್ರಮದ ಕೆಲಸದಲ್ಲಿ ತಿರಸ್ಕಾರ ಭಾವನೆಯೇ ಮೂಡುತ್ತದೆ. ಅವನ ವಿದ್ಯಾವಂತ 'ಠಕ್ಕು' ವೇಷವೂ ಅವನನ್ನು ದೇಹ ಶ್ರಮದ ಕೆಲಸ ಮಾಡದಂತೆ ತಡೆಯೊಡ್ಡುತ್ತದೆ. ಅವನು ಬೇಸಾಯ ಮಾಡಬೇಕೆಂದಿದ್ದರೂ, ಅವಿದ್ಯಾವಂತರಾದ ತನ್ನ ತಂದೆತಾಯಿ, ಕೂಲಿ ಯಾಳುಗಳಿಂದಲೇ ಬೇಸಾಯ ವಿದ್ಯೆಯನ್ನು ಕಲಿಯಬೇಕಾಗಿದೆ. ಈ ರೀತಿ ಯಾಗಿ ಜೀವನಕ್ಕೂ ವಿದ್ಯಾಭ್ಯಾಸಕ್ಕೂ ತಾಳಮೇಳವಿಲ್ಲದಂತಾಗಿದೆ. ವಿದ್ಯಾ ಭ್ಯಾಸಕ್ಕಾಗಿ ನಾವು ಪ್ರತಿವರ್ಷ 110–120 ಕೋಟಿ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದರೂ ರಾಷ್ಟ್ರಕ್ಕೆ ಅನ್ನ, ಬಟ್ಟೆಗಳನ್ನು ಒದಗಿಸಿ ಕೊಡುವ

ಈ ದೊಡ್ಡ ಕೆಲಸವನ್ನು ಅವಿದ್ಯಾವಂತ ರೈತನೇ ಮಾಡಬೇಕಾಗಿದೆ.

ಈ ರೀತಿಯ ವಿದ್ಯಾಭ್ಯಾಸದಿಂದಾಗಿ ಭಾರತದ ಜೀವನ ಸ್ಥಗಿತವಾಗಿದೆ. ನಮ್ಮ ಉತ್ಪಾದನಾ ಸಾಮರ್ಥ್ಯ ಕುಂಠಿತವಾಗಿದೆ.

ಗ್ರಾಮಾಂತರ ಪ್ರದೇಶದಿಂದ ವಿದ್ಯಾವಂತ ಯುವಕರು ದೇಹ ಶ್ರಮಕ್ಕೆ ಅಂಜಿ, ಅಳುಕಿ, ಸುಖ ಜೀವನಕ್ಕಾಗಿ ಪಟ್ಟಣವನ್ನು ಸೇರುತ್ತಿದ್ದಾರೆ. ಪಟ್ಟಣದಲ್ಲಿ ಅದೆಷ್ಟು ಮಂದಿಗೆ ನೌಕರಿ, ಚಾಕರಿ ದೊರಕಲು ಸಾಧ್ಯ? ಉಳಿದ ವಿದ್ಯಾವಂತರೆನಿಸಿಕೊಂಡ ಯುವ ಜನತೆ ಮಾಡಲು ಕೆಲಸವಿಲ್ಲದೆ, ಭಗ್ನ ಹೃದಯಿಗಳಾಗಿ ಅಲೆಯುತ್ತಿರುತ್ತಾರೆ. ಸುಮ್ಮನಿರಲಾರದೆ, ಮುಷ್ಕರ, ಸೇನೆಗಳು, ಘೋರಾವೊಗಳಲ್ಲಿ ಭಾಗಿಗಳಾಗಿ ಸಮಾಜ ಜೀವನವನ್ನೇ ಅಸ್ತವ್ಯಸ್ತಗೊಳಿಸುತ್ತಾರೆ. ಕಷ್ಟದ ದುಡಿತದಿಂದ ಕಟ್ಟಿದ ಕಟ್ಟಡಗಳನ್ನು, ರೈಲುಗಳನ್ನು ಸುಡುತ್ತಿದ್ದಾರೆ. ಮಾರ್ಗಗಳನ್ನು ಕಡಿಯುತ್ತಿದ್ದಾರೆ, ಶಾಲಾ, ಕೋಲೇಜುಗಳನ್ನು ಸುಡುತ್ತಿದ್ದಾರೆ. ಈ ರೀತಿಯ ಅಶಾಂತಿ ಕಾರ್ಯಗಳು ಅತೃಪ್ತ ಜನತೆಯಿಂದ ನಡೆಯುತ್ತಿರುತ್ತವೆ. ಇದನ್ನೆಲ್ಲಾ ತಪ್ಪಿಸಲು ನಮ್ಮ ಮುಂದಿರುವ ರಾಜಮಾರ್ಗವೆಂದರೆ ಗಾಂಧೀಜಿ ರೂಪಿಸಿದ ಜೀವನ ಶಿಕ್ಷಣ ಮಾತ್ರ.

ಪ್ರತಿ ನೂರು ಮಂದಿ ವಿದ್ಯಾವಂತರಲ್ಲಿ 2–3 ಮಂದಿ ಡಾಕ್ಟರಾಗುವುದರಲ್ಲಿ ಸಫಲರಾಗಬಹುದು, 3–4 ಮಂದಿ ಇಂಜಿನಿಯರ್‌ರಾಗಬಹುದು, 7–8 ಮಂದಿ ಉಪಾಧ್ಯಾಯರಾಗಬಹುದು, 8–10 ಮಂದಿ ನೌಕರರಾಗಬಹುದು. ಉಳಿದ 75 ಮಂದಿಯ ಜೀವನ ಭಗ್ನ ಹೃದಯ ಜೀವನ! ಎಷ್ಟೊಂದು ರೀತಿಯ ಜನಸಂಪತ್ತು, ಧನ ಸಂಪತ್ತಿನ ಅಪವ್ಯಯ! ದೊಡ್ಡದೆಂದು ಬೆಟ್ಟವನ್ನು ಕಡಿದು ಇಲಿಯೊಂದನ್ನು ಹೊರ ತೆಗೆದಂತೆ ನಮ್ಮ ವಿದ್ಯಾಭ್ಯಾಸದ ಕತೆಯಾಗಿದೆ.

ಜೀವನ ಶಿಕ್ಷಣದ ಮೂಲಕ ಮಗುವಿನ ಜೀವನದ ಮೊದಲಿನಿಂದಲೇ ಸ್ವಾವಲಂಬನದ ಬೀಜ ಬಿತ್ತಿದಂತಾಗುತ್ತದೆ. ಈ ಶಿಕ್ಷಣದ ಮೂಲಕ ವಿದ್ಯಾರ್ಥಿಯು ತನ್ನ ಕೈಗಳ ಸಂಪೂರ್ಣ ಉಪಯೋಗಗಳನ್ನು ಕಲಿತುಕೊಳ್ಳುತ್ತಾನೆ, ಮಾತ್ರವಲ್ಲ ಅವುಗಳನ್ನು ಉಪಯೋಗಿಸುವಲ್ಲಿ ಹೆಚ್ಚಿನ ಸುಧಾರಿತ ಮಾಹಿತಿಗಳನ್ನು ಮಾನಸಿಕ ವಿದ್ಯೆಯ ಮೂಲಕ ಗಳಿಸಿಕೊಳ್ಳುತ್ತಾನೆ.

ಮನಸ್ಸನ್ನೂ, ತನ್ನ ಕೈಕಾಲುಗಳನ್ನು ಅವುಗಳ ಸಂಪೂರ್ಣ ಶಕ್ತಿಯಿಂದ ದುಡಿಸಲು ಅನುಕೂಲವಾಗುವಂತೆ ಅವನು ತನ್ನ ಆತ್ಮ ಜ್ಞಾನವನ್ನು ಬೆಳೆಸುತ್ತಾನೆ. ಈ ರೀತಿ ದೈಹಿಕ, ಬೌದ್ಧಿಕ ಮತ್ತು ಆತ್ಮದ ಶಿಕ್ಷಣವನ್ನು ಏಕಕಾಲದಲ್ಲಿ ಗಳಿಸಿದಂತಾಗುತ್ತದೆ. ರೈತನ ಮಗು ಉತ್ತಮ ರೈತನಾಗುವ, ವಿದ್ಯೆಯನ್ನು ಪಡೆಯುತ್ತಾನೆ. ಕಮ್ಮಾರನ ಮಗು ಉತ್ತಮ ತಾಂತ್ರಿಕ ತಜ್ಞನಾಗಬಹುದು. ಹೆಣ್ಣು ಮಗು ಉತ್ತಮ ತಾಯಿಯಾಗುವ, ತನ್ನ ಕುಟುಂಬವನ್ನು ಸರಿದೂಗಿಸಿಕೊಂಡು ಹೋಗುವಂತಹ ಶಿಕ್ಷಣವನ್ನು ಪಡೆಯುತ್ತಾಳೆ. ಈ ರೀತಿ ಗಾಂಧೀಜಿಯ ಜೀವನ ಶಿಕ್ಷಣ ಕ್ರಮದಿಂದ ಜೀವನವು ಹುಲುಸಾಗುತ್ತದೆ. ಸಮಾಜವು ಪೈಗಳ್ಳ ಸಾಹೇಬರುಗಳ ಸಮೂಹವಾಗುವ ಬದಲು ದೇಹಶ್ರಮದಲ್ಲಿ ಆಸಕ್ತರಾಗಿರುವ ಸಮಾಜ ಸೇವಕರ ಹಿತಮಿತವಾದ ತುಂಬು ಚಟುವಟಿಕೆಗಳ ಕಾರ್ಯರಂಗವಾಗುತ್ತದೆ. ಅಂತಹ ದುಡಿಮೆಗಾರರ ಸಮಾಜದಲ್ಲಿ ಯಾವ ಕಸುಬೂ ಕೀಳೂ ಅಲ್ಲ, ಮೇಲೂ ಅಲ್ಲ. ಸಮಾಜದ ಸುಗಮ ಜೀವನಕ್ಕೆ ಎಲ್ಲಾ ಕಸುಬುಗಳೂ ಅಗತ್ಯ. ಆ ಕಸುಬುಗಳಲ್ಲಿ ಮೇಲ್ಮೆಯನ್ನು ಸಾಧಿಸಿ ಸಮಾಜದ ಜೀವನವನ್ನು ಶ್ರೀಮಂತವಾಗಿ ಮಾಡುವ ಕಲೆಯನ್ನು ಸಾಧಿಸಿದಂತಾಗುತ್ತದೆ. ಮಾನವನನ್ನು ಮಾನವನಾಗಿ ಮಾಡುವ, ಮಾನವನನ್ನು ದೇವತ್ವಕ್ಕೆ ಏರಿಸುವ ವಿದ್ಯಾಭ್ಯಾಸ ಕ್ರಮವನ್ನು ಇಂದು ನಾಳೆನ್ನದೆ ಕಾರ್ಯರೂಪಕ್ಕಿಳಿಸುವುದು ಅಗತ್ಯ. ಕಾಯಕದ ಮೂಲಕವೇ ಶಿಕ್ಷಣವನ್ನಿತ್ತು "ಕಾಯಕದ ಮೂಲಕವೇ ಕೈಲಾಸ"ವನ್ನು ಸಾಧಿಸುವುದು ಭಾರತೀಯರ ಕರ್ತವ್ಯವಾಗಿದೆ. ಈ ಕರ್ತವ್ಯದ ನೆನಪನ್ನಿತ್ತ ರಾಷ್ಟ್ರಪಿತ ಗಾಂಧೀಜಿಗೆ ಭಾರತವಿಡೀ ಋಣಿಯಾಗಿರುವುದು ಅಗತ್ಯ.

ಜೀವನ ಶಿಕ್ಷಣದ ಮೂಲಕ ಜನತೆಯ ಜೀವನಕ್ಕೆ ಅಗತ್ಯವಾದ ಶಿಕ್ಷಣ ಗ್ರಾಮಾಂತರ ಪ್ರದೇಶದಲ್ಲೇ ದೊರೆಯುವಂತಾಗಬೇಕು. ಇದರಿಂದಾಗಿ ಹಳ್ಳಿಯ ಯುವಕರು ಶಿಕ್ಷಣಕ್ಕಾಗಿ, ನೌಕರಿಗಾಗಿ ಪಟ್ಟಣಸೇರುವಪ್ರಮೇಯ ತಪ್ಪುತ್ತದೆ. ಗ್ರಾಮಾಂತರ ಜನತೆಗೆ ಅಗತ್ಯವಾದ ನಮ್ಮ ವ್ಯವಸಾಯದ ಶಿಕ್ಷಣ ಕೇಂದ್ರಗಳನ್ನು, ತರಬೇತಿ ಕೇಂದ್ರಗಳನ್ನು ಪಟ್ಟಣಗಳ ಬಳಿಯಿರುವ ಕೃತಕ ಹಳ್ಳಿಗಳಲ್ಲಿ ತೆರೆಯಲೇಬಾರದು. ಅವನ್ನು ವ್ಯವಸಾಯವು ಪ್ರಗತಿಪರವಾಗಿ ನಡೆಯುತ್ತಿರುವ ಗ್ರಾಮಾಂತರ ಪ್ರದೇಶಗಳಲ್ಲೇ ಕಡ್ಡಾಯ

ವಾಗಿ ತೆರೆಯಬೇಕು. ಹೀಗಾದರೆ ಮಾತ್ರ ವ್ಯವಸಾಯದಲ್ಲಿ ಶಿಕ್ಷಣ ಪಡೆದ ಯುವಕರು ಹಳ್ಳಿಯ ಜೀವನದಲ್ಲಿ ಜಿಗುಪ್ಸೆಗೊಳ್ಳದೆ ಕೆಲಸ ಮಾಡಲು ಸಾಧ್ಯ. ಇದರಿಂದಾಗಿ ರೈತನೂ ಪ್ರತ್ಯಕ್ಷವಾಗಿ ಸುಧಾರಿತ ಕೃಷಿಕ್ರಮಗಳನ್ನು ಕಂಡು ಕೊಂಡು ತಜ್ಞರೊಡನೆ ಈ ಕುರಿತು ಚರ್ಚಿಸಬಹುದಾಗಿದೆ. ತಜ್ಞರ ಅನುಭವವೂ ಉತ್ತಮವಾಗಬಹುದಾಗಿದೆ. ಅದೇ ರೀತಿ ಸರಕಾರೀ ಸ್ವಾಮ್ಯ ದಲ್ಲಿ ತೆರೆಯಲಾಗುವ ಎಲ್ಲಾ ಕೈಗಾರಿಕಾ ಕೇಂದ್ರಗಳೂ ಹಳ್ಳಿಗಳಲ್ಲೇ ತೆರೆಯ ಲ್ಪಡಬೇಕು. ಹೀಗಾದರೆ ವಿದ್ಯಾವಂತರಿಗೆ ಸಂಪಾದನೆಯ ಮಾರ್ಗವೂ ದೊರಕುತ್ತದೆ.

# ಗಾಂಧೀಜಿ ಬಿಟ್ಟು ಹೋದ ಅನುಕರಣೀಯ ಆದರ್ಶಗಳು

## -ಯುವ ಜನಾಂಗಕ್ಕೆ ಸಮಂಜಸ ಮಾರ್ಗದರ್ಶನ-

ಗಾಂಧೀಜಿಯ ಜೀವನ ತೆರೆದಿಟ್ಟ ಪುಸ್ತಕದಂತಿದೆ. ಯಾರೂ ಅದನ್ನು ಓದಬಹುದು; ಅವರ ವಿಚಾರಗಳನ್ನು ತಮ್ಮ ಜೀವನಕ್ಕೂ ಅಳವಡಿಸಿಕೊಳ್ಳ ಬಹುದು. ಅವರು ಜೀವನದುದ್ದಕ್ಕೂ ಹಲವಾರು ಅನುಕರಣೀಯ ಆದರ್ಶ ಗಳನ್ನು ಬಿಟ್ಟು ಹೋಗಿರುತ್ತಾರೆ. ಬಾಪೂಜಿಯವರ ಜೀವನದಲ್ಲಿ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ, ಗುಣ ಧರ್ಮಗಳು ಹಿತವಾಗಿಯೂ, ಮಿತವಾ ಗಿಯೂ ಸಂಗಮವಾಗಿವೆ. ಬ್ರಾಹ್ಮಣ ಗುಣದಿಂದಾಗಿ ಅವರು ಸಂಗ್ರಹಿ ಸಿದ ಜ್ಞಾನ ಭಂಡಾರವು ಅತ್ಯಮೂಲ್ಯವಾದುದು; ಮತ್ತು ಪರಿಗ್ರಹಿಸಲು ಅನುಕೂಲವಾದುದು. ಧಾರ್ಮಿಕ,ಆರೋಗ್ಯ, ರಾಜಕೀಯ, ಸಾಮಾಜಿಕ, ಶೈಕ್ಷ ಣಿಕ, ಸಾಂಸ್ಕೃತಿಕ ಜ್ಞಾನ ಭಂಡಾರವು ಕನಸುಗಾರರ ಆಕಾಶ ಪುಷ್ಪಗಳಲ್ಲ ಇವೆ ಲ್ಲವೂಸಾಮಾನ್ಯ ಜನತೆಯು ತಮ್ಮ ಜೀವನವನ್ನು ಹಸನಾಗಿಸಲು ಉಪಯೋ ಗಿಸಬಹುದಾದ ಜ್ಞಾನಗಳ ಮೊತ್ತವಾಗಿದೆ. ಗಾಂಧೀಜಿಯ ಜ್ಞಾನದ ಗಣಿ ಯಲ್ಲಿ ಎಲ್ಲವೂ ಬಂಗಾರವೇ-ಅಲ್ಲಿ ವಿವಿಧ ಶಕ್ತಿಗಳು ಒಂದೇ ಶಕ್ತಿಯ ವಿವಿದ ರೂಪಗಳುಮಾತ್ರ-ಇವೆಲ್ಲಾ ಒಂದಕ್ಕೊಂದು ಪೂರಕಗಳು. ಇಂತಹ ಜ್ಞಾನದ ಸಂಪೂರ್ಣತೆಯನ್ನು ಕಂಡು ಕೊಂಡ ಗಾಂಧೀಜಿ ಸರ್ವಜ್ಞರಾಗಿದ್ದರು. ಸರ್ವ ಧರ್ಮ ಸಮನ್ವಯ ಭಾವನೆಯನ್ನು ಗಾಂಧೀಜಿಯಂತೆ ದಿನನಿತ್ಯ ಜೀವನದಲ್ಲಿ ಆಚರಿಸಿ ತೋರಿದವರು ವಿರಳ. ಅದೇ ರೀತಿ ಅವರ ಕ್ಷತ್ರಿಯ ಸಾಹಸಗುಣವು ರೋಮಂಚಕಾರಿಯಾಗಿದೆ. ದಕ್ಷಿಣ ಆಫ್ರಿಕದಲ್ಲಿ ಬಿಳಿಯರೊಡನೆ ಹೋರಾಟ, ಅಸಹಕಾರ ಚಳವಳ, ಉಪ್ಪಿನ ಸತ್ಯಾಗ್ರಹಗಳು—ಇವು ಕೆಲವೇ ಉದಾಹರ ಣೆಗಳು. ಅವರ "ಚಲೇ ಜಾವ್" ಅಥವಾ "quit India" ಸಿಂಹಗರ್ಜ ನೆಯು ಜಗತ್ತಿನ ಮಹಾ ಮಹಾ ದಂಡನಾಯಕರ ಎದೆಗಳನ್ನು ನಡುಗಿಸಿತು;

ಎಂದೆಂದೂ ಸೂರ್ಯ ಮುಳುಗದಂತಿದ್ದ ಸಾಮ್ರಾಜ್ಯ ಶಾಹಿಯ ಸಿಂಹಾಸನ ಸ್ಪಂದಿಸಿತು; ಅಖಂಡ ಸಾಮ್ರಾಜ್ಯದಲ್ಲಿ ಬಿರುಕು ತೋರಿತು. ಅದೇ ರೀತಿ ಅವರ ವೈಶ್ಯ ಗುಣ ಭಾರತದ ವ್ಯಾಪಾರ ಹಾಗು ಆರ್ಥಿಕ ನೀತಿಯ ಅಡಿಗಲ್ಲ ನ್ನಿಡಲು ಸಹಾಯವಾಯ್ತು. ಅವರಲ್ಲಡಗಿದ್ದ ಶೂದ್ರ ಗುಣಧರ್ಮವೇ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಕೀಲಿ ಕೈಯಾಯ್ತು. ಶರೀರ ಶ್ರಮದ ಕೆಲಸಗಳನ್ನು ಅವರು ಖಡ್ಡಾಯವಾಗಿ ಮಾಡುತ್ತಿದ್ದರು. ತಮ್ಮ ಅನುಯಾಯಿ ಗಳಿಂದಲೂ— ಬಡವ ಬಲ್ಲಿದನೆಂಬ ಭೇದವೆಣಿಸದೆ ಮಾಡಿಸುತ್ತಿದ್ದರು. ಶರೀರ ಶ್ರಮವು ಗಾಂಧೀಜಿಯವರ ಆಶ್ರಮದ ಏಕಾದಶ ವ್ರತಗಳಲ್ಲಿ ಪ್ರಾಮುಖ್ಯ ಸ್ಥಾನವನ್ನು ಪಡೆದಿತ್ತು. ತನ್ನ ಸೇವೆಯನ್ನು ಮಾಡಿಕೊಳ್ಳಲಾ ರದ ಅಥವಾ ತನ್ನ ಸೇವೆಯನ್ನೇ ಮಾಡಿಕೊಳ್ಳಲು ಹೇಸುವ ವ್ಯಕ್ತಿ ಅನ್ಯರ ಅಥವಾ ದೇಶದ ಸೇವೆಯನ್ನು ಮಾಡುವುದು ಬರೇ ಸೋಗು ಎಂದೆಣಿಸುತ್ತಿ ದ್ದರು. ಶರೀರ ಶ್ರಮದಿಂದ ರಾಜಾಜಿಯಂತಹ ಮೇಧಾವಿಗಳು, ನೆಹರೂ, ಸರದಾರ, ನೇತಾಜಿ, ಜಯಪ್ರಕಾಶ್ ವಿನೋಬಾರಂತಹ ಭಾರತ ಪುತ್ರರೂ ತಪ್ಪಿಸುವಂತಿರಲಿಲ್ಲ. ಈ ರೀತಿಯ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ಗುಣ ಧರ್ಮಗಳು ಗಾಂಧೀಜಿಯ ಜೀವನವನ್ನು ಸಮದೂಗಿಸಿವೆ. ಸಮಾಜದ ನಾನಾ ವ್ಯಕ್ತಿಗಳು ಹಲವಾರು ಪಾಠಗಳನ್ನು ಅವರಿಂದ ಕಲಿಯತಕ್ಕದ್ದಿದೆ. ತಂದೆ-ತಾಯಿಯಾಗಿ ಮಗನಾಗಿ, ಮಡದಿಯಾಗಿ, ರಾಜಕೀಯ ಮುತ್ಸದ್ದಿ ಯಾಗಿ, ಸಮಾಜ ಸೇವಕನಾಗಿ, ಸಮಾಜ ಸುಧಾರಕನಾಗಿ, ಆರ್ಥಿಕ ತಜ್ಞನಾಗಿ ಶಿಕ್ಷಣ ತಜ್ಞನಾಗಿ, ಶಿಸ್ತಿನ ಸೈನಿಕನಾಗಿ, ತ್ಯಾಗದ ಸನ್ಯಾಸಿಯಾಗಿ ಗಾಂಧೀಜಿಯ ಜೀವನದ ಹಲವಾರು ಘಟನೆಗಳನ್ನು ಅನುಸರಿಸ ಬಹುದಾಗಿದೆ. ಇಂತಹ ಆದರ್ಶ ಭಾರತೀಯರೊಬ್ಬರು ಬಾಳಿದುದನ್ನು ಕಣ್ಣಾರೆ ಕಾಣುವ ಭಾಗ್ಯ ಈ ತಲೆಮಾರಿನದು. ಅತಹ ಜೀವನದಲ್ಲಿ ನಿಷ್ಠೆ ಮತ್ತು ಆ ರೀತಿಯ ಜೀವನ ವನ್ನು ನಮ್ಮ ಇಂದಿನ ರಾಜಕೀಯ ಮುಂದಾಳುಗಳು, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮುಂದಾಳುಗಳೂ ಅನುಸರಿಸಿದರೆ ನಾವೂ ಗಾಂಧೀ ಮಾರ್ಗದಲ್ಲಿ ನಡೆದಂತಾಗುವುದು. ಇದರಿಂದಾಗಿ ಗಾಂಧೀಜಿಯವರನ್ನು ಕಣ್ಣಾರೆ ಕಾಣದ, ಅವರ ಕಾರ್ಯಗಳನ್ನು ಕೇಳಿ ತಿಳಿಯದ ನಮ್ಮ ಮುಂದಿನ ಜನಾಂಗಕ್ಕೆ ಮಾರ್ಗದರ್ಶನ ಮಾಡಿದಂತಾಗುತ್ತದೆ. ಹಾಗಾದರೆ ಬಾಪೂಜಿಯವರ

33612
12-12-69

ಜೀವನ ಪುಸ್ತಕದಿಂದ ಇಪ್ಪತ್ತೇಳು ಕೋಟಿ ಯುವ ಜನರು ಕಲಿಯತಕ್ಕ ಪ್ರಾಮುಖ್ಯ ಪಾಠಗಳಾವುವು?

1 ಧರ್ಮನಿಷ್ಠೆ—ಸತ್ಯ ಅಹಿಂಸೆ

2 ನಿರ್ಭಯತೆ ಮತ್ತು ನುಡಿದಂತೆ ನಡೆಯುವುದು. (ಪ್ರಾಮಾಣಿಕತೆ)

3 ಶರೀರ ಶ್ರಮ, ಸ್ವಾವಲಂಬನ, ಸರಳಜೀವನ,

4 ಶಿಸ್ತು ಮತ್ತು ಸಂಘಟನೆ

5 ತ್ಯಾಗ.

ಗಾಂಧೀಜಿಯವರ ಯಾವ ಕಾರ್ಯವನ್ನೇ ಎತ್ತಿಕೊಂಡರೂ ಅದಕ್ಕೆ ಧರ್ಮದ ಪರಿಮಳವಿತ್ತು. ಅವರ ಬಾಲ್ಯದಿಂದಲೇ ಈ ರೀತಿಯ ಜೀವನ ಕ್ರಮ ನಡೆದು ಬಂದಿದೆ. ಚಿಕ್ಕ ಬಾಲಕ ಗಾಂಧೀಜಿಗೆ ಗುರುಭಕ್ತಿ, ಪಿತೃಭಕ್ತಿ ರಕ್ತದಲ್ಲಿಯೇ ಸೇರಿಹೋಗಿತ್ತು. ಹದಿನೆಂಟರ ಹರೆಯದ ಯುವಕ ಗಾಂಧೀಜಿ ಇಂಗ್ಲೇಂಡಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೊರಟು ನಿಂತಾಗ ತಾಯಿ ಪುತ್ಲಿಭಾಯಿ ತುಂಬಾ ಹೆದರಿದಳು. ತನ್ನ ಮಗನು ಪರದೇಶದಲ್ಲಿ ಧರ್ಮಹೀನನಾಗಿ ಚಾರಿತ್ರ್ಯವನ್ನು ಕಳೆದುಕೊಂಡು ಹಿಂತಿರುಗುವುದನ್ನು ನೆನೆಸಿದ ತಾಯಿಯ ಹೃದಯ ಕೊರಗಿತು. ಆದರೆ ಗಾಂಧೀಜಿ ತಮ್ಮ ತಾಯಿಯ ಮತ್ತು ಗುರುಗಳ ಸಮ್ಮುಖದಲ್ಲಿ ಪರದೇಶದಲ್ಲಿ-ಹೆಂಡ, ಮಾಂಸ, ಸ್ತ್ರೀಯರನ್ನು ಮುಟ್ಟಲಾರೆನೆಂಬ ವ್ರತವನ್ನು ತೊಟ್ಟರು. ತನ್ನ ಐದು ವರ್ಷಗಳ ಪರದೇಶ ಜೀವನದಲ್ಲಿ ಸ್ಥಿತ ಪ್ರಜ್ಞನಂತೆ ನಡೆದುಕೊಂಡರು, ಪಾಶ್ಚಾತ್ಯ ನಾಗರಿಕತೆಯ ತವರೂರಾದ ಇಂಗ್ಲೇಂಡ್ ಗಾಂಧೀಜಿಯ ವ್ರತನಿಷ್ಠೆಯನ್ನು ಪ್ರಶ್ನಿಸದೆ ಬಿಟ್ಟಿಲ್ಲ. ಆದರೆ ಇಂತಹ ಪ್ರಶ್ನೆಗಳು ವ್ರತಗಳಲ್ಲಿ ಅವರ ನಿಷ್ಠೆಯನ್ನು ಮತ್ತಷ್ಟು ಬಲಪಡಿಸಿತು; ಆದರೆ ಗಾಂಧೀಜಿಯವರು ಕಣ್ಣುಮುಚ್ಚಿಕೊಂಡು ನಂಬುತ್ತಿರಲಿಲ್ಲ. ಮಧ್ಯ ಸೇವನೆಯ ವಿಚಾರವಾಗಿ ತರ್ಕಿಸಿದರು. ಕುಡುಕತನದ ಕುರುಡು ನಾಗರೀಕತೆಗೆ ಹೇಸಿದರು. ಈ ಅನುಭವದಿಂದಲೇ ಮುಂದೆ ಅವರು ಭಾರತದಲ್ಲಿ ವ್ಯಾಪಕವಾದ ರೀತಿಯಲ್ಲಿ ಪಾನನಿರೋಧ ಚಳುವಳಿಯನ್ನು ಹೂಡಿದರು. ಹಳ್ಳಿ ಹಳ್ಳಿ ತಿರುಗಾಡಿ - ಜನರನ್ನು, ಜನರ ಮುಂದಾಳುಗಳನ್ನು ಕುಡುಕತನದ ಮೃಗಜೀವನದಿಂದ ಮುಕ್ತರಾಗುವಂತೆ ಹೇಳಿದರು. ಕುಡಿದು ಮತ್ತವಾದ ಜನತೆ —ಬುದ್ಧಿಯನ್ನು— ಅಂಕಿತದಲ್ಲಿಟ್ಟು ಕೊಳ್ಳಲಾರದ

ಜನತೆ—ಸ್ವರಾಜ್ಯ ಸಂಗ್ರಾಮವನ್ನು ಹೂಡಲು ಅಸಮರ್ಥರೆಂದು ಬುದ್ಧಿ ಹೇಳಿದರು. ಅಂತಹ ಜನತೆ ಪಡೆದ ಸ್ವಾತಂತ್ರ್ಯವನ್ನು ದಕ್ಕಿಸಿ ಕೊಳ್ಳಲಾರ ದೆಂದು ಎಚ್ಚರಿಸಿದರು. ಅದೇ ರೀತಿ ಗಾಂಧೀಜಿಯವರು ಶಾಕಾಹಾರದ ಕುರಿತು ಓದಿದರು, ಚರ್ಚಿಸಿದರು, ಪ್ರಯೋಗಗಳನ್ನು ಮಾಡಿನೋಡಿದರು. ಶಾಕಾಹಾರದ ಕುರಿತು ಪ್ರಸಿದ್ಧ ಆಂಗ್ಲ ಲೇಖಕರು, ಮೇಧಾವಿಗಳು ಬರೆದ ಗ್ರಂಥಗಳನ್ನು ಅಭ್ಯಾಸ ಮಾಡಿದರು. ಆಹಾರದ ಕುರಿತು ಅನೇಕ ಪ್ರಯೋಗ ಗಳನ್ನು ತಮ್ಮ ಮೇಲೆಯೇ ಮಾಡಿಕೊಂಡರು. ಇಂಗ್ಲೇಂಡಿನ ಶಾಕಾಹಾರ ಸಮಿತಿಯ ಸಕ್ರಿಯ ಸದಸ್ಯರಾಗಿಯೂ ಸೇವೆಸಲ್ಲಿಸಿದರು. ಸ್ತ್ರೀಯರ ವಿಚಾರ ವಾಗಿ ಯುವಕ ಗಾಂಧೀಜಿ ಬಹು ಎಚ್ಚರದಿಂದಿದ್ದರು. ಮುಂದಿನ ಅವರ ಜೀವನದಲ್ಲಿ ಸ್ತ್ರೀಗೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದರು. ಭಾರತೀಯ ಜನ ಸಂಖ್ಯೆಯ ಅರ್ಧದಷ್ಟಿರುವ ಸ್ತ್ರೀ ಸಮಾಜದ ಅಭಿವೃದ್ಧಿಗಾಗಿ ಗಾಂಧೀಜಿ ತುಂಬಾ ದುಡಿದರು. ಸರೋಜಿನಿ ನಾಯ್ಡು, ವಿಜಯಲಕ್ಷ್ಮಿ ಪಂಡಿತ್, ಮೀರಾಬೆಹನ್, ಶ್ರೀಮತಿ ಇಂದಿರಾ ಗಾಂಧಿಯವರಂತಹ ಮಹಿಳಾ ಮಣಿ ಗಳನ್ನು ಪಕ್ಕಿ ಸಮಾಜದ ಮುಂದಿಟ್ಟರು. ಆದರೆ ನಮ್ಮ ಹೆಚ್ಚಿನ ಯೋಜನೆ ಗಳು ಭಾರತದ ಅರ್ಧಪಾಲು ಜನತೆಯನ್ನು ಮುಟ್ಟದಂತೆ ನಡೆಯುತ್ತಿರು ವುದು ಶೋಚನೀಯ ವಿಚಾರ. ಈರೀತಿಯ ತನ್ನ ತಾಯಿಯ ಮೂಲಕ,ಗುರು ಗಳ ಮೂಲಕ ಧರಿಸಿದ ವ್ರತಗಳು ಗಾಂಧೀಜಿಯ ಜೀವನದುದ್ದಕ್ಕೂ ದಾರಿ ದೀಪಗಳಾದುವು. ಜೀವನದಲ್ಲಿ ಸಂಕಟಗಳು ಬಂದಾಗ ಅವೇ ಅವರನ್ನು ಪಾರು ಮಾಡಿದುವು. ಈ ರೀತಿಯ ಆದರ್ಶ ತಂದೆ,ತಾಯಿ,ಗುರುಗಳುಯುವಜನಾಂಗ ಕ್ಕೆ ಆದರ್ಶ ವಿಚಾರಗಳನ್ನು ಅನುಸರಿಸುವಂತೆ ಸಂದರ್ಭಗಳನ್ನು ಒದಗಿಸುವುದು ಅಗತ್ಯ. ನಮ್ಮ ಶಿಕ್ಷಣ ಸಂಸ್ಥೆಗಳು, ಶೈಕ್ಷಣಿಕಪಾಠಗಳು ಭಾರತೀಯ ಆದರ್ಶ ತತ್ವಗಳನ್ನು ಬೆಳೆದು ಬರುತ್ತಿರುವ ಮಕ್ಕಳ ಮನಸ್ಸಿನಲ್ಲಿ ಮೂಡಿಸುವುದು ಅಗತ್ಯ.ಅವರು ಗುರುವಿನಮೂಲಕ ಪಡೆದ ಸತ್ಯಅಹಿಂಸೆಗಳು ಸಾಮಾನ್ಯ ಮನು ಷ್ಯನಂತಿದ್ದ ಗಾಂಧೀಜಿಯನ್ನು ಮಹಾತ್ಮನಾಗಿ ಮಾಡಿವೆ. ಶ್ರೀ ರಾಮ,ಶ್ರವಣ, ಸತ್ಯಹರಿಶ್ಚಂದ್ರರೇ ಅವರ ಮೆಚ್ಚಿನ ಪುರಾಣ ಪುರುಷರಾಗಿದ್ದರು. ಇಂತಹ ಪುರಾಣ ಪುರುಷರಜೀವನವನ್ನೇ ಗಾಂಧೀಜಿ ಅನುಸರಿಸಿದರು. ಶ್ರೀ ರಾಮನ ಸಾಹಸ ಗುಣ, ಸ್ನೇಹಗುಣಗಳೂ, ರಾಜಾ ಹರಿಶ್ಚಂದ್ರನ ಸತ್ಯ ಪೂಜನೆಯು

ಅವರನ್ನು "ಮಹಾತ್ಮ" ರನ್ನಾಗಿ ಮಾಡಿದ ಮಹಾಗುಣಗಳು. ಇಂತಹ ಜ್ವಾಜಲ್ಯಮಾನವಾದ ಪುಣ್ಯ ಪರಂಪರೆ ನಮ್ಮೆಲ್ಲರದು. ಅದನ್ನು ಹೆಕ್ಕಿ ತೋರಿಸುವ ಸದ್ಭಾವನೆಯು ನಮ್ಮ ಹೆತ್ತವರಲ್ಲಿಯೂ, ಶಿಕ್ಷಕರಲ್ಲಿಯೂ ಮೂಡುವುದು ಅಗತ್ಯ. ಇಂತಹ ಪೂರ್ವ ಪರಂಪರೆಯ ದರ್ಶನವನ್ನು ಪಡೆದು ಆ ದಾರಿಯಲ್ಲಿ ಮುನ್ನಡೆವ ಸಾಹಸ ಗುಣ ನಮ್ಮ ಯುವ ಜನಾಂಗದಲ್ಲಿರಬೇಕಾದರೆ ಇದಕ್ಕೆ ಯೋಗ್ಯ ಶಿಕ್ಷಣ, ಸರಿಯಾದ ತರಬೇತಿ ಅಗತ್ಯ. ನಮ್ಮ ಯುವಕರು ಆತ್ಮದ ಸೌಂದರ್ಯವನ್ನು ಕಲಿಯಬೇಕಲ್ಲದೆ ಆತ್ಮದ ಹೊದಿಕೆಯಾದ ಚರ್ಮದ ಸೌಂದರ್ಯಕ್ಕೆ ಮರುಳಾಗದಂತಹ ಶಿಕ್ಷಣ ಪಡೆಯ ಬೇಕು. ಚರ್ಮದ ಪೂಜೆ ಅಸಂಸ್ಕೃತ, ಆತ್ಮದ ಪೂಜೆಯೇ ಭಾರತೀಯ ಸಂಸ್ಕೃತಿಯ ಜೀವಾಳ.

ಆದರೆ ನಮ್ಮ ಯುವಕ ಜನಾಂಗದ ಆದರ್ಶ ವ್ಯಕ್ತಿಗಳಾರು? ಆದರ್ಶವಿಲ್ಲದಲ್ಲಿ ಅವರಾರನ್ನು ಅನುಸರಿಸಬೇಕು? ಇದೊಂದು ಗೊತ್ತುಗುರಿಯಿಲ್ಲದ ಪ್ರಯಾಣವಾಗಿದೆ. ಯುವ ಜನಾಂಗದೆದುರು ತಾತ್ಕಾಲಿಕ ಆದರ್ಶ ವ್ಯಕ್ತಿಗಳಿರಬಹುದು. ಆದರೆ ಇಂತಹ ವ್ಯಕ್ತಿಗಳ ಕುಂಠಿತ ಆದರ್ಶಗಳು ಸಮಾಜದೆದುರು ಮುಖಮುರಿದು ಕೊಂಡು ಬಿದ್ದು ಧೂಳಲ್ಲಿ ಹೊರಳಾಡುವಾಗ ಯುವ ಜನಾಂಗದ ಕನಸು ಭಂಗವಾಗುತ್ತದೆ. ಇಂತಹ ಸಮಯಸಾಧಕ ಆದರ್ಶಗಳು ಯುವಜನಾಂಗವನ್ನು ಮಂಕುಗೊಳಿಸುತ್ತವೆ. ಮೋಸಗೊಳಿಸುತ್ತವೆ. ಇದರ ಪರಿಣಾಮಗಳಾಗಿ ಜನಾಂಗ ತನ್ನ ಮುಂದಾಳುಗಳಲ್ಲಿ, ಆಡಳಿತದಲ್ಲಿ, ಶಿಕ್ಷಕರಲ್ಲಿ ಎಲ್ಲರಲ್ಲಿಯೂ ಶ್ರದ್ಧೆಯನ್ನು ಕಳಕೊಂಡು ಬಿರುಗಾಳಿಗೆ ಸಿಕ್ಕಿದ ದೋಣಿಯಂತೆ ಹೊಯ್ದಾಡುತ್ತಿರುತ್ತದೆ. ಇದೇ ರೀತಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ಜಗತ್ತಿನ ದೃಷ್ಟಿಯಲ್ಲಿ ರಾಜಕೀಯ ಚಳವಳಿಯಾಗಿದ್ದರೂ ಗಾಂಧೀಜಿಯವರ ದೃಷ್ಟಿಯಲ್ಲಿ ಅದೊಂದು ಧರ್ಮಯುದ್ಧವೇ ಆಗಿತ್ತು "ಕುರಿ" ಗಳೆಂದು ಪರಕೀಯ ಆಳರಸರಿಂದಲೂ, ನಮ್ಮವರೇ ಆದ ಕೆಲವು ಬುದ್ಧಿಜೀವಿ ಮುತ್ಸದ್ದಿಗಳಿಂದಲೂ ಕರೆಯಲ್ಪಡುತ್ತಿದ್ದ ಭಾರತೀಯ ರೈತರಲ್ಲಿ, ಕಾರ್ಮಿಕರಲ್ಲಿ, ಸ್ತ್ರೀಯರಲ್ಲಿ, ವಿದ್ಯಾರ್ಥಿಗಳಲ್ಲಿ, ಅಸ್ಪೃಶ್ಯರಲ್ಲಿ ಅವರ ಆತ್ಮಗುಣವನ್ನು ತೋರಿಸಿಕೊಟ್ಟು ಇಡೀ ದೇಶದ ಜನತೆಯಲ್ಲೇ ಆತ್ಮವಿಶ್ವಾಸದ ಧರ್ಮಕ್ರಾಂತಿಯನ್ನು ಎಬ್ಬಿಸುವ ಶಕ್ತಿಯು ಗಾಂಧೀಜಿಯಲ್ಲಿತ್ತು. ಸ್ವತಂತ್ರವಾಗಿ ಬಾಳುವುದು ಬರೇ ರಾಜಕೀಯ ಧರ್ಮ ಮಾತ್ರವಲ್ಲ— ಅದೊಂದು ಮನುಷ್ಯ ಧರ್ಮವಾಗಿತ್ತು ಗಾಂಧೀಜಿಗೆ. ಈ ರೀತಿ ಗಾಂಧೀ

ಜಯ ಹರಿಜನಕಾರ್ಯ, ಗ್ರಾಮ ಪುನರುದ್ಧಾರ, ಪಾನನಿಶೇಧ, ಖಾದಿ ಮೊದಲಾದ ಚಳವಳಿಗಳಿಗೆ ಧರ್ಮದ ಅಡಿಗಲ್ಲಿತ್ತು. ರಾಜಕೀಯಕ್ಕೆ ಗಾಂಧೀಜಿ ಧರ್ಮದ ಲೇಪನವನ್ನು ಹಚ್ಚುತ್ತಿದ್ದರು. ಆದರೆ ನಮ್ಮಲ್ಲಿ ಅನೇಕರು ರಾಜಕೀಯದ ಕೆಸರಿನ ಮಡುವಲ್ಲಿ ಧರ್ಮವನ್ನು ಎಳೆದು ಮುಳುಗಿಸುತ್ತಿದ್ದಾರೆ. ಪ್ರಾರ್ಥನೆಯಿಂದಲೇ ಅವರ ದಿನಚರಿ ಪ್ರಾರಂಭವಾಗುತ್ತಿತ್ತು. ಪ್ರಾರ್ಥನೆಯಿಂದಲೇ ಅವರದಿನವು ಮುಗಿಯುತ್ತಿತ್ತು. ರಾಮನಾಮವನ್ನು ಪಠಿಸುತ್ತಲೇ ಇಹಯಾತ್ರೆಯನ್ನು ಮುಗಿಸಿದುದು. ಅವರ ಧರ್ಮ ನಿಷ್ಠೆಯನ್ನೇ ಸೂಚಿಸುತ್ತದೆ. ಗಾಂಧೀಜಿತಮ್ಮ ಆತ್ಮ ಶಕ್ತಿಯನ್ನು ಕಂಡುಕೊಂಡು ದೇಶದಆತ್ಮಶಕ್ತಿಯನ್ನು ಕಂಡುಕೊಂಡು ಎಚ್ಚೆತ್ತ ಆತ್ಮಶಕ್ತಿಯ ಸಂಪೂರ್ಣ ಸಾಕ್ಷಾತ್ಕಾರ ಮಾಡಿಕೊಂಡರು.

ಗಾಂಧೀಜಿಯ ಜೀವನದ ಎರಡನೇ ಅನುಕರಣೀಯ ಗುಣ–ಅವರ ನಿರ್ಭಯತೆ; ಭಯವೆಂಬುದು ಅವರ ಜೀವನದಲ್ಲೇ ಕಂಡು ಬರುವುದಿಲ್ಲ. ಆತ್ಮಕ್ಕೆ ಸರಿಯೆಂದು ತೋರುವುದನ್ನು ನಿರ್ಭಯವಾಗಿ ನುಡಿಯುತ್ತಿದ್ದರು. ನುಡಿದುದನ್ನು ನಿರ್ಭಯವಾಗಿ ಆಚರಣೆಗೆ ತರುತ್ತಿದ್ದರು. ನುಡಿದಂತೆ ನಡೆವ ಈ ಹಿರಿಯ ಗುಣ ಯುವಜನಾಂಗಕ್ಕೂ ಎಲ್ಲರಿಗೂ ಅನುಕರಣೀಯವಾಗಿದೆ. ಗಾಂಧೀಜಿಯುವರಲ್ಲಿ ಹಿಮಾಲಯುವಂತಹ ಧೈರ್ಯವಿತ್ತು. ಆದುದರಿಂದಲೇ ನೂರಾರು ವರ್ಷಗಳಿಂದ ಕೊಳೆಯುತ್ತಿದ್ದ ನಿರ್ಜೀವ ಭಾರತವನ್ನು ತನ್ನ ಇಪ್ಪತ್ತು-ಇಪ್ಪತ್ತೊಂದು ವರ್ಷಗಳ ಸೇವೆಯ ಮೂಲಕ ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿದರು. ಜಗತ್ತಿನ ಮುಕ್ಕಾಲು ಭಾಗವನ್ನು ಆಳುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯ ಶಾಯಿಯನ್ನು "ಚಲೇ ಜಾವ್" ಎಂದು ಹೇಳಿ ದೇಶದಿಂದ ಹೊರಗಟ್ಟಬೇಕಾದರೆ ನೂರಾರು ಗಂಡೆದೆಗಳು ಸೇರಬೇಕು. ನಮ್ಮ ಓದು ಕಲಿಕೆ, ಅಭ್ಯಾಸ, ಚಾಕರಿ, ನೌಕರಿ, ಸಂಪಾದನೆ-ಇವೆಲ್ಲಾ ಆತ್ಮಶಕ್ತಿಯ ಹುಡುಕಾಟವೆಂಬ ಭಾವನೆಯನ್ನು ನಮ್ಮ ಶಿಕ್ಷಣ ಸಂಸ್ಥೆಗಳು ಯುವಕರಲ್ಲಿ ಬಿತ್ತುವುದು ಅಗತ್ಯ. ಆತ್ಮ ವಿಶ್ವಾಸವಿದ್ದ ಯುವಜನಾಂಗವು ತನ್ನ ಜನಾಂಗದ ಹಿತಕ್ಕಾಗಿ ಯಾವ ಸಾಹಸಕಾರ್ಯ ಮಾಡಲು ಹಿಂದಾಗದು. ತನ್ನಲ್ಲಿದ್ದ ನಿರ್ಭಯತೆಯನ್ನು ಗಾಂಧೀಜಿ ತನ್ನ ಅನುಯಾಯಿಗಳಲ್ಲೂ ತನ್ನ ಸುತ್ತುಮುತ್ತು ನೆರೆಯುತ್ತಿದ್ದ ಹೆಂಗಸರು, ಮಕ್ಕಳಲ್ಲಿಯೂ ಬಿತ್ತುತ್ತಿದ್ದರು. ಒಬ್ಬ

ಪೋಲೀಸು ಜವಾನನನ್ನು ಕಂಡು ಅಂಜುತ್ತಿದ್ದ ಭಾರತೀಯರು ತಂಡ ತಂಡವಾಗಿ ಬರಿಗೈಯಿಂದ ಬ್ರಿಟೀಷರ ಸರ್ವ ಶಸ್ತ್ರಸಜ್ಜಿತ ಸೇನೆಯನ್ನೇ ಎದುರಿಸುವ ಕೆಚ್ಚೆದೆಯನ್ನು ಪಡೆದರು. ಬ್ರಿಟೀಷರ ಜೈಲುಗಳು ಭಾರತೀಯರ ಸಂಗ್ರಾಮ ಸ್ವಾತಂತ್ರ್ಯದ ಜ್ಞಾನ ಕೇಂದ್ರಗಳಾದುವು. ಹಲವಾರು ಭಾರತೀಯರು ಕುರಾನ್,ಗೀತೆ,ಉಪನಿಷತ್ತುಗಳನ್ನು ಜೈಲಿನಲ್ಲಿರುವಾಗಲೇ ಓದಿಕೊಂಡರು. ಭಾರತದ ಅಪೂರ್ವ ಗ್ರಂಥಗಳು ಜೈಲಿನಿಂದಲೇ ಬರೆಯಲ್ಪಟ್ಟವು. ಗಾಂಧೀಜಿಯು ಸತ್ಯವೆಂದು ಕಂಡ ಯಾವ ವಿಚಾರವನ್ನಾದರೂ ಶತ್ರುಮಿತ್ರರೆಂಬಭೇದವೆಣಿಸದೆ ಕಾರ್ಯರೂಪಕ್ಕೆ ತರುತ್ತಿದ್ದರು. ಖಾದಿಯ ಚಳುವಳಿಯ ಸಮಯದಲ್ಲಿ ಗಾಂಧಿಯವರ ಕೇಳಿಕೆಯಂತೆ ಕೋಟಿಗಟ್ಟಲೆಕ್ರಯದ ವಿದೇಶೀ ಬಟ್ಟೆಗಳನ್ನು ಬೊಂಬಾಯಿಯ ಚೌಪಾಟ್ಟಿಯಲ್ಲಿ ಸುಟ್ಟಾಗ ಅವರ ಅತ್ಯಂತ ಮಿತ್ರರೂ ಅವರನ್ನು ಟೀಕಿಸಿದರು. ಜಗತ್ತಿನಲ್ಲಿ ಶ್ರೇಷ್ಟ ಭಾರತೀಯನೆಂಬ ಪ್ರಶಂಶೆಯನ್ನು ಪಡೆದಿದ್ದ ತನ್ನ ಆತ್ಮೀಯ ಮಿತ್ರರಾದ ಕವಿರವೀಂದ್ರರ ಟೀಕೆಯನ್ನು ಕಡೆಗಣಿಸಿ ಈ ಚಳುವಳಿಯನ್ನು ಮುಂದುವರಿಸಿದರು. ಅದೇ ರೀತಿ ಹಿಂದೂ, ಮುಸ್ಲಿಂಐಕ್ಯ, ಪಾನನಿರೋಧ, ಅಸ್ಪೃಶ್ಯತೆ ಮೊದಲಾದ ತನ್ನ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವಾಗ ತನ್ನ ಆತ್ಮೀಯ ಮಿತ್ರರನ್ನು ಎದುರಿಸಬೇಕಾದ ಪ್ರಮೇಯ ಬಂದರೂ ಗಾಂಧೀಜಿ ವಿಚಲಿತರಾಗಲಿಲ್ಲ. ಭಾರತೀಯ ಯುವ ಜನತೆಯ ಹೃದಯ ದೇವತೆಯಂತಿದ್ದ ನೇತಾಜಿಯಂತಹವರನ್ನೂ ಗಾಂಧೀಜಿ ಎದುರು ಹಾಕಿಕೊಳ್ಳಬೇಕಾಯಿತು. ಚರ್ಚಿಲರಂತಹ ಮಹಾ ಮೇಧಾವಿ ರಾಜಕಾರಣಿಯನ್ನು ಎದುರು ಹಾಕಿಕೊಳ್ಳುವ ಪ್ರಸಂಗ ಬಂದರೂ ದ್ವೇಷ ಭಾವನೆ ತಾಳದೆ ಗಾಂಧೀಜಿ ತನ್ನ ನಿರ್ಭಯವರ್ತನೆಯನ್ನು ಮುಂದುವರಿಸಿದರು. ಆದುದರಿಂದಲೇ ಅವರು ಅಜಾತಶತ್ರುವೆನಿಸಿದರು.

ಗಾಂಧೀಜಿಯವರ ಜೀವನದಿಂದ ಕಲಿಯಬಹುದಾದ ಮೂರನೇ ಹಾಗೂ ಅತೀ ಶ್ರೇಷ್ಠ ಪಾಠ ಶರೀರಶ್ರಮ,-ಗಾಂಧೀಜಿಯವರ ಏಕಾದಶ ವ್ರತಗಳಲ್ಲಿ ಒಂದೆಣಿಸಿದೆ. ಸಾಮಾನ್ಯವಾಗಿ ಶ್ರಮಪಟ್ಟು ಕೈಯಿಂದ ಕೆಲಸ ಮಾಡುವುದು "ನವನಾಗರಿಕತೆ"ಯ ದೃಷ್ಟಿಯಿಂದ ಕೀಳೆಂಬ ವಿಷಬೀಜ ಹೇಗೋ ಭಾರತೀಯರ ಜೀವನದಲ್ಲಿ ಬಿತ್ತಲ್ಪಟ್ಟಿತು. ಈ ರೀತಿಯ ಮ್ಯೆ

ಗಳ್ಳತನಕ್ಕೆ ಪುರಾಣದ ಪುರಾವೆಗಳನ್ನೂ, ಧರ್ಮದ ಬಣ್ಣವನ್ನೂ, ಬಳೆಯುವ ಹವ್ಯಾಸವೂ ನಡೆದು ಬಂದಿದೆ. ಆದರೆ ಭಾರತೀಯ ಯಾವ ಪುರಾಣವಾದರೂ ಶರೀರ ಶ್ರಮಕ್ಕೆ ಮಾನ್ಯತೆ ಕೊಟ್ಟಿರುತ್ತದೆ. ಪುರಾಣ ಕಾಲದ ರಾಜಕುಮಾರರು ದೇಹದಂಡಿಸಿ ದುಡಿದೇ ಕೀರ್ತಿಯ ಶಿಖರವೇರಿದ್ದರು. ಶ್ರೀ ರಾಮಚಂದ್ರನು ರಾಜ್ಯವನ್ನೇ ತ್ಯಜಿಸಿ ಅಡವಿಯಲ್ಲಿ ಬೇಟೆಯಾಡಿ ಯಜ್ಞಯಾಗಾದಿಗಳು ಸರಾಗವಾಗಿ ನಡೆಯುವಂತೆ ಮಾಡಿದನು. ಋಷಿಗಳೊಡನೆ ಗೆಡ್ಡೆಗೆಣಸುಗಳನ್ನೇ ತಿಂದು ಜೀವಿಸಿದ್ದನು. ಅದೇ ರೀತಿ ಶ್ರೀ ಕೃಷ್ಣನು ಗೋಪಾಲನೆ ಮಾಡಿದ್ದರೆ ಬಲರಾಮನು ಹಲಾಯುಧನಾಗಿದ್ದನು. ನಮ್ಮ ಋಷಿಗಳಾದರೋ ತಮ್ಮ ಹವನಗಳಿಗೆ ಬೇಕಾದ ಹವಿಸ್ಸುಗಳನ್ನು ತಾವೇ ಸಂಗ್ರಹಿಸುತ್ತಿದ್ದರು. ತಮ್ಮ ಅನ್ನದ ಕಾಳನ್ನು ತಾವೇ ಬೆಳೆಸುತ್ತಿದ್ದರು. ನಮ್ಮ ಚರಿತ್ರೆಯೂ ಮೈಗಳ್ಳ ಜೀವನವನ್ನು ಎಲ್ಲಿಯೂ ಎತ್ತಿತೋರುವುದಿಲ್ಲ. ಕೆಲವರು ಈ ಸೋಮಾರಿತನ ಪಾಶ್ಚಾತ್ಯ ಜನರ ಸಂಪರ್ಕದಿಂದ ಬಂತೆಂದು ಅಭಿಪ್ರಾಯ ಪಡುತ್ತಾರೆ. ಇದರಲ್ಲೂ ಹೆಚ್ಚಿನ ಸತ್ಯವಿಲ್ಲ. ಪಾಶ್ಚಾತ್ಯರು ತಮ್ಮ ಜೀವನದ ಪ್ರತಿ ಗಂಟೆಗೆ, ಮಿನಿಟಿಗೆ, ಸೆಕುಂಡಿಗೆ ಬೆಲೆ ಕೊಟ್ಟು ಗೇಯುವರು. ಪಾಶ್ಚಾತ್ಯ ಗಂಡಸರಾಗಲೀ, ಹೆಂಗಸರಾಗಲಿ, ಮಕ್ಕಳಾಗಲಿ, ಕೆಲಸದವರಾಗಲಿ, ಆಫೀಸರಾಗಲೀ, ರೈತರಾಗಲೀ ಶಿಲ್ಪಿಗಳಾಗಲೀ ಶಿಕ್ಷಕರಾಗಲೀ ನೌಕರರಾಗಲೀ, ಸಮಯದ ದುಂದುವೆಚ್ಚವನ್ನು ಎಂದೂ ಸಹಿಸರು. ಆದರೆ ಅದೆಷ್ಟು ಮಂದಿ ಭಾರತೀಯರು ಸ್ವಸಂತೋಷದಿಂದ ದಿನದಲ್ಲಿ ಆರು ಗಂಟೆಗಳಷ್ಟಾದರೂ ದುಡಿಯುತ್ತಾರೆ?. ನಮ್ಮಲ್ಲಿ ಹಲವಾರು ವಿದ್ಯಾವಂತರೆನಿಸಿಕೊಂಡವರು ಪಾಶ್ಚಾತ್ಯ ವೇಷಭೂಷಣಗಳಲ್ಲಿ ಅವರನ್ನು ಅನುಸರಿಸುತ್ತಿದ್ದೇವೆ. ಆದರೆ ಅವರ ಕಾರ್ಯ ಕುಶಲತೆ, ಕಾರ್ಯ ನಿಪುಣತೆ, ಎಡಬಿಡದೆ ಚಟುವಟಿಕೆಗಳನ್ನು ಅನುಸರಿಸುವುದನ್ನು ಸುಲಭವಾಗಿ ಮರೆತು ಬಿಡುತ್ತೇವೆ. ಭೂಲೋಕ ಪ್ರದಕ್ಷಿಣೆ ಹಾಕಿ ಬರುವ ನಮ್ಮ ಅನೇಕ ತಜ್ಞರು ಪರರಾಷ್ಟ್ರಗಳ ತಂತ್ರಜ್ಞರ ದುಡಿಮೆಯ ಬಗ್ಗೆ ಯಾವ ದಾಖಲೆಗಳನ್ನು ಸಂಗ್ರಹಿಸುತ್ತಿಲ್ಲ, ಅವರ ಬದಲು ಅವರೆಷ್ಟು ದೊಡ್ಡ ಬಂಗಲೆಗಳಲ್ಲಿ ವಾಸಿಸುತ್ತಾರೆ, ಅವರೆಷ್ಟು ದೊಡ್ಡ ವಾಹನಗಳಲ್ಲಿ ಸಂಚರಿಸುತ್ತಾರೆ, ಅವರೆಷ್ಟು ಸಂಬಂಧಿಗಳನ್ನು ಪಡೆದಿರುತ್ತಾರೆ, ಅವರೆಷ್ಟು ಸಂಭಾವನೆ ಪಡೆಯುತ್ತಿದ್ದಾರೆಂಬ ವಿಚಾರಗಳನ್ನು

ಚಾ ಚೂ ತಪ್ಪದೆ ಸಂಗ್ರಹಿಸಿ ನಮ್ಮ ಬಡ ಸರಕಾರದ ಮುಂದಿಡುತ್ತೇವೆ. ಈ ರೀತಿಯ ಥಳುಕಿನಜೀವನವು ನಮ್ಮನ್ನು ಕೆಲಸ ಮಾಡದಂತೆ ಮಾಡಿತು ಕಾಲುಗಳು ನಡೆಯುವಂತೆ ಮಾಡಿದುವು. ಮಿದುಳನ್ನು ಸರಿಯಾದ ರೀತಿ ಯಲ್ಲಿ ಆಲೋಚಿಸದಂತೆ ಮಾಡಿತು. ಇದರಿಂದಾಗಿ ನಮ್ಮ ಕೈಕಾಲುಗಳ ಶಕ್ತಿ ಕುಂದಿತು: ಮಿದುಳು ಸ್ವತಂತ್ರವಾಗಿ ಯೋಚಿಸುವ ಕಾರ್ಯವನ್ನು ನಿಲ್ಲಿಸುವಂತಾಯಿತು. ನಮ್ಮ ಸಾಮಾನ್ಯ ಕೆಲಸಗಳಿಗೂ ಅನ್ಯರ ಕೈಕಾಲುಗಳ ಸೇವೆಯನ್ನು ಪಡೆಯುವ ಮರ್ಜಿ ಬೆಳೆಯಿತು. ಅದೇ ರೀತಿ ಸ್ವತಂತ್ರ ವಾಗಿ ಆಲೋಚಿಸುವವರನ್ನು ಬಿಟ್ಟು ನಾವು ಸ್ವತಂತ್ರವಾಗಿ ಆಲೋಚಿಸು ವವರನ್ನು ಕಡೆಗಣಿಸುವ ಅಥವಾ ತ್ಯಜಿಸುವ ಮಟ್ಟಕ್ಕೆ ಬಂದುದಾಯಿತು. ಈ ರೀತಿಯ "ಗುಲಾಮಗಿರಿ" ನಮಗೆ ತಿಳಿಯದಂತೆಯೇ ನಮ್ಮ ಮನೆಗಳಲ್ಲಿ, ಹೊಲಗಳಲ್ಲಿ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಆಫೀಸುಗಳಲ್ಲಿ ಸೇರಿಕೊಂಡು ಬೇರುಬಿಟ್ಟಿರುತ್ತದೆ. ಈ ರೀತಿಯ ಗುಲಾಮಗಿರಿಯೇ ಸಮಾಜದ ಘನಸ್ತಿಕೆ ಅಥವಾ ಆದರ್ಶವೆಂದು ತಿಳಿಯುವವರೆಗೂ ನಮ್ಮ ಸಾಮಾಜಿಕ ಜೀವನ ಮುಂದುವರಿದಿದೆ. ನಮ್ಮ ಶಿಕ್ಷಣ, ನಮ್ಮ ಆಡಳಿತ ರಂಗ ಗಳು ದೇಹಶ್ರಮದ ಕೆಲಸಗಳನ್ನು ಕೆಳದರ್ಜೆಯ ಜನರಿಗೆ ವಹಿಸಿ ಕೊಡುವಲ್ಲಿ ಮುಂದಾಯಿತು. ನಮ್ಮ ವಿದ್ಯಾವಂತರೆನಿಸಿಕೊಂಡ ಹಲವರು ದೇಹ ಶ್ರಮದ ಕೆಲಸವನ್ನೇ ದ್ವೇಷಿಸುವ ಸ್ಥಿತಿಗೆ ಬಂದು ಮುಟ್ಟಿದರು. ಇದ ರಿಂದಾಗಿ ಕೆಲವೇ ಮಂದಿ ದೇಹಶ್ರಮದ ಕೆಲಸಕ್ಕೆ ಕಟ್ಟುಬಿದ್ದರು. ಉಳಿದ ಹಲವಾರು ವಿದ್ಯಾವಂತರು ಕೆಲಸಗಾರರ ಮೇಲ್ವಿಚಾರಣೆಯ ಕೆಲಸದಲ್ಲೇ ಉತ್ಸುಕರಾಗಿದ್ದಾರೆ. ಈ ರೀತಿಯ ಸೋಮಾರಿ ಜೀವನದ ಚಾಳಿ ನಮ್ಮ ವಿದ್ಯಾರ್ಥಿಗಳನ್ನು ಕೆಡಿಸಿತು. ಅವರು ತಮ್ಮ ಪೋಷಾಕಿನ ಥಳಕು ಉಳಿಸಿಕೊ ಳ್ಳುವ ಉದ್ದೇಶದಿಂದ ಶರೀರಶ್ರಮದ ಕೆಲಸಕ್ಕೆ ತಿಲಾಂಜಲಿಯನ್ನಿತ್ತರು.

ಸಮಾಜಕ್ಕೆ ಅಂಟಿಕೊಂಡಿದ್ದ ಸೋಮಾರಿತನದ ಸಾಮಾಜಿಕ ಬಂಡಣೆಗೆ ಯನ್ನು ಹೋಗಲಾಡಿಸಲು ಗಾಂಧೀಜಿ ಸೊಂಟಕಟ್ಟಿದರು. ಯುವಕ ರಾಗಿದ್ದಾಗಲೇ ಗಾಂಧೀಜಿ ದೇಹಶ್ರಮದ ಕೆಲಸಗಳನ್ನು ಮಾಡುತ್ತಿದ್ದರು. ದಕ್ಷಿಣ ಆಫ್ರಿಕದಲ್ಲಿದ್ದಾಗ ತಮ್ಮ ಬಟ್ಟೆಯನ್ನು ತಾವೇ ಒಗೆಯುತ್ತಿದ್ದರು: ಒಗೆದ ಬಟ್ಟೆಗೆ ಗಂಜಿ ಹಾಕುತ್ತಿದ್ದರು, ಇಸ್ತ್ರಿ ಹಾಕುತ್ತಿದ್ದರು. ತಮ್ಮ

ಕೊಪಲನ್ನು ತಾವೇ ಕತ್ತರಿಸಿಕೊಳ್ಳುತ್ತಿದ್ದರು. ನಡೆದುಕೊಂಡೇ ಸಾಕಷ್ಟು ದೂರ ಸಾಗುತ್ತಿದ್ದರು, ಆಫ್ರಿಕದಿಂದ ಮರಳಿ ಬಂದ ಗಾಂಧೀಜಿ ಭಾರತೀಯರ ಮೈಗಳ್ಳ ಜೀವನಕ್ಕೆ ನೊಂದುಕೊಂಡರು. ಕಲ್ಕತ್ತಾದ, ಕಾಂಗ್ರೆಸ್ ಅಧಿವೇಶನದ ಸಮಯ ತಾವೇ ಕಕ್ಕೂಸುಗಳನ್ನು ತೊಳೆದು ಉಳಿದವರಿಗೆ ಮಾರ್ಗದರ್ಶನ ಮಾಡಿದರು. ಅಂದಿನಿಂದ ಗಾಂಧೀಜಿ ತಮ್ಮ ಎಲ್ಲಾ ಆಶ್ರಮಗಳಲ್ಲೂ ದೇಹಶ್ರಮವನ್ನು ಕಡ್ಡಾಯಗೊಳಿಸಿದರು; ತಾವೂ ಇತರರೊಡನೆ ಸೇರಿಕೊಳ್ಳುತ್ತಿದ್ದರು. ತಮ್ಮ ಅನ್ನಕ್ಕಾಗಿ, ಬಟ್ಟೆಗಾಗಿ, ಪರಾವಲಂಬಿಗಳಾಗಬಾರದೆಂದು ಗಾಂಧೀಜಿ ಸಾರಿ ಸಾರಿ ಹೇಳುತ್ತಿದ್ದರು. ಅಡಿಗೆ ಕೆಲಸ, ಶುಚಿತ್ವ, ಬೇಸಾಯ, ಪಶುಪಾಲನೆ, ನೂಲುವಿಕೆ ಮೊದಲಾದ ಕೆಲಸಗಳನ್ನು ಕಡ್ಡಾಯವಾಗಿ ಗಾಂಧಿ ಆಶ್ರಮದ ಎಲ್ಲಾ ಅನುಯಾಯಿಗಳೂ ಭೇದವಿಲ್ಲದೆ ಮಾಡುತ್ತಿದ್ದರು. ನೂಲದೆ ಗಾಂಧೀಜಿ ಊಟಮಾಡುತ್ತಿದ್ದಿಲ್ಲ. ಪ್ರಾರ್ಥನೆಯಂತೆಯೇ ನೂಲುವಿಕೆಗೂ ಮಹತ್ವವನ್ನು ಕೊಡುತ್ತಿದ್ದರು. ಗಾಂಧೀ ಅನುಯಾಯಿಗಳ ರಾಜಕೀಯ ಗದ್ದುಗೆಗಳ ಮೇಲೂ, ಸಭಾವೇದಿಕೆಗಳ ಮೇಲೆಯೂ ಚರಕ ತಕಲಿಗಳು “ಓಂ”ಕಾರ ಮಾಡುತ್ತಾ ನೂಲುತ್ತಿದ್ದುವು. ಗಾಂಧೀಜಿಯ ದೃಷ್ಟಿಯಲ್ಲಿ ದೇಹಶ್ರಮವು ಯಜ್ಞ ಮಾಡಿದಷ್ಟು ಪುಣ್ಯ ಕಾರ್ಯವೆನಿಸಲ್ಪಡುತ್ತಿತ್ತು. ಈ ರೀತಿಯ ಚಟುವಟಿಕೆಗಳಿಂದ ತುಂಬಿದ ಶ್ರಮದ ಜೀವನವನ್ನು ನಮ್ಮ ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಆಫೀಸುಗಳಲ್ಲಿ ಕಡ್ಡಾಯಗೊಳಿಸಬೇಕು; ತುಂಬು ಮನಸ್ಸಿನಿಂದ ಎಲ್ಲಾ ರೀತಿಯ ಪ್ರೋತ್ಸಾಹಗಳನ್ನು ಕೊಡಬೇಕು. ನಮ್ಮ ಶಾಲೆಗಳು ಗಾಂಧೀಜಿಯಿಂದ ನಿರೂಪಿತವಾದ ಜೀವನ ಶಿಕ್ಷಣದ ಮೂಲಕ ದೇಹಶ್ರಮಕ್ಕೆ ಪ್ರಾಧಾನ್ಯ ಕೊಡಬೇಕು. ಅದೇ ರೀತಿ ನಮ್ಮ ಆಫೀಸುಗಳು ಸಿಬಂದಿಯ ಸಂತೆಯಾಗದಂತೆ ತಡೆಗಟ್ಟಬೇಕು: ಅವು ಸೇವಾಕೇಂದ್ರಗಳಾಗಬೇಕು. ನಮ್ಮ ಸೇವೆಯಿಂದ ನಾವು ಹೆಚ್ಚಿನ ಪಾಠವನ್ನು ಕಲಿಯಬೇಕಾಗಿದೆ. N.C.C. ಸ್ಕೌಟು, ಭಾರತ ಸೇವಕ ಸಮಾಜಗಳಂತಹ ಸಂಸ್ಥೆಗಳ ಮೂಲಕ ಯುವ ಜನಾಂಗವು ದೇಹದಂಡಿಸಿ ಕೆಲಸಮಾಡುವ ಹವ್ಯಾಸವನ್ನು ಬೆಳಸಬೇಕು. ದೇಹಶ್ರಮದ ಕೆಲಸಗಳನ್ನು ಅತೀ ಹೆಚ್ಚಿನ ಬಹುಮಾನಗಳ ಮೂಲಕ ಪ್ರೋತ್ಸಾಹಿಸಬೇಕು, ಸರಕಾರದ ಖರ್ಚೇ

ಗಳಲ್ಲೂ, ಹೊರಗೂ ದೇಹಶ್ರಮದ ಕೆಲಸಗಾರರಿಗೆ ಹೆಚ್ಚಿನ ಪ್ರೋತ್ಸಾಹ, ವೇತನಗಳನ್ನು ಕೊಟ್ಟು ಅವರ ಸಂಖ್ಯೆಯನ್ನು ಹೆಚ್ಚಿಸಬೇಕು. ಮೇಲ್ವಿಚಾರಕ ಸಿಬಂದಿಯ ಸಂಖ್ಯೆ ಕನಿಷ್ಟ ಸಂಖ್ಯೆಯಲ್ಲಿರಬೇಕು. ನಮ್ಮ ಆಫೀಸುಗಳಲ್ಲಿ, ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ಹೊಲಗಳಲ್ಲಿ, ಕಾರ್ಖಾನೆಗಳಲ್ಲಿ ಸಂತೋಷದಿಂದ ದೇಹ ಶ್ರಮದ ಕೆಲಸ ಮಾಡುವ ಶ್ರಮಿಕರ ಸೈನ್ಯವನ್ನೇ ಕಟ್ಟಬೇಕು. ಹಾಗಾದರೆ ಮಾತ್ರ ಎಲ್ಲಾ ರಂಗದಲ್ಲೂ ಉತ್ಪಾದನೆ ಅಧಿಕವಾಗುತ್ತದೆ; ದೇಹಶ್ರಮಕ್ಕೆ ಮರ್ಯಾದೆಯೂ ಸಲ್ಲುತ್ತದೆ. ಮೇಲ್ವಿಚಾರಕ ಸಿಬಂದಿಯ ಸಂಖ್ಯೆ ಅಧಿಕವಾದಷ್ಟು ಉತ್ಪಾದನೆ ಕುಂಠಿತವಾಗುತ್ತದೆ; ಕೆಲಸ ಮಾಡುವ ಉತ್ಸುಕತೆಯೂ ಉಡುಗುತ್ತದೆ.

ನಮ್ಮ ಇಪ್ಪತ್ತೇಳು ಕೋಟಿ ಯುವಕರಿಗೂ ದೇಹ ಶ್ರಮದ ಕೆಲಸಗಳನ್ನು ಒದಗಿಸಿಕೊಡುವುದು ಅಗತ್ಯ. ನಮ್ಮ ಗ್ರಾಮಾಂತರ ಪ್ರದೇಶದಲ್ಲಿರುವ ಸುಮಾರು ಇಪ್ಪತ್ತಮೂರು ಕೋಟಿ ಯುವಜನರು ಶ್ರಮಿಸಿ ನಮ್ಮ ಹೊಲಗಳಲ್ಲಿ ದುಡಿಯುವಂತಾಗಬೇಕು. ಅವರು ಸುಧಾರಿತ ರೀತಿಯ ಕ್ರಮದಲ್ಲಿ ವ್ಯವಸಾಯ ಮಾಡಲು ಪ್ರಾರಂಭ ಮಾಡಿದರೆ ನಮ್ಮ "ಹಸಿರು ಕ್ರಾಂತಿ"ಯ ಘೋಷಣೆಗಳು ಸತ್ಯವಾದಾವು; ಇಲ್ಲದಿದ್ದರೆ ಇತರ ಮೂರ್ತಿಪಾಲಾದ ಘೋಷಣೆಗಳಲ್ಲಿ ಒಂದಾದೀತು.

ಬೆಳೆಯುತ್ತಿರುವ ಯುವ ಜನಾಂಗವನ್ನು ಅವರು ಹುಟ್ಟಿ ಬೆಳೆಯುತ್ತಿರುವ ಹಳ್ಳಿಗಳಲ್ಲಿಯೇ ಅವರ ಜೀವನಕ್ಕೆ ಬೇಕಾದ ವಿದ್ಯಾಭ್ಯಾಸವು ದೊರೆಯುವಂತೆ ಏರ್ಪಡಿಸಬೇಕು. ಅವರಿಗೆ ವ್ಯವಸಾಯದಲ್ಲಿ, ಗ್ರಾಮ ಕೈಗಾರಿಕೆಗಳಲ್ಲಿ ಸರಿಯಾದ ಶಿಕ್ಷಣ ದೊರೆಯುವಂತೆ- ನಮ್ಮ ಪಟ್ಟಣಗಳಲ್ಲಿ ಬೆಳೆಯುತ್ತಿರುವ ತರಬೇತಿ ಶಾಲೆಗಳನ್ನು, ವ್ಯಾವಸಾಯಿಕ ಶಿಕ್ಷಣ ಸಂಸ್ಥೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿಯೇ ತೆರೆಯುವಂತಾಗಬೇಕು. ವ್ಯಾವಸಾಯಕ್ಕೆ ಸಂಬಂಧಪಟ್ಟ ಇತರ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಗಳಲ್ಲೇ ತೆರೆಯುವಂತಾದರೆ- ಶಿಕ್ಷಣ, ಸಂಪಾದನೆಗಳಿಗಾಗಿ ಗ್ರಾಮದ ಯುವಕರು ಪಟ್ಟಣಗಳಿಗೆ ಹೋಗುವ ಪ್ರಮೇಯ ತಪ್ಪುತ್ತದೆ, ಮತ್ತು ಪೇಟೆಗಳ ಕೆಟ್ಟ ಚಾಳಿಗಳಿಂದಲೂ ಅವರನ್ನು ಉಳಿಸಬಹುದಾಗಿದೆ, ಇದರಿಂದಾಗಿ ಹಸಿದ ಹೊಟ್ಟೆಗೆ ಕೂಳು ಸಿಕ್ಕಿದಂತಾಗುತ್ತದೆ, ಮತ್ತು ಸೋಮಾರಿಯಾದ ಕೈಗಳಿಗೆ ಕಸಬು ದೊರೆದಂತಾಗುತ್ತದೆ. ಗಾಂಧೀಜಿಯ ಖಾದಿಯ

ವ್ಯಾಪಕವಾದ ಚಳವಳಿಯನ್ನು ಹೂಡಲು ಇದೇ ಕಾರಣವಾಗಿತ್ತು. ಹಳ್ಳಿಯಲ್ಲಿ ಬೆಳೆಯುವ ಹತ್ತಿಯನ್ನು ಹಿಂಜಿ, ನೂತು, ಹಳ್ಳಿಯ ರೈತ ಕುಟುಂಬಗಳೇ ಬಟ್ಟೆಯನ್ನು ತಯಾರು ಮಾಡಿದರೆ ರೈತನು ಕುಟುಂಬದ ವರಮಾನ ತಕ್ಕಷ್ಟು ಅಭಿವೃದ್ಧಿಯಾಗುತ್ತದೆ, ನಮ್ಮ ಅದಾವ ತಜ್ಞರೂ ಕಳೆದ 15–16 ವರ್ಷಗಳಲ್ಲಿ ಇದಕ್ಕಿಂತ ಸುಧಾರಿತವಾದ ಮತ್ತು ವ್ಯಾಪಕವಾದ ಬೇರಾವ ಕಸುಬನ್ನೂ ರೈತನಿಗೆ ಒದಗಿಸಿ ಕೊಡುವಲ್ಲಿ ಸಫಲರಾಗಿಲ್ಲ; ಅಥವಾ ಮನಸ್ಸು ಮಾಡಿಲ್ಲವೆನ್ನಬಹುದು. ಖಾದಿ ಸ್ವರಾಜ್ಯ ಸಂಗ್ರಾಮದ ಸೈನಿಕರ ಸಮವಸ್ತ್ರವಾಗಿತ್ತು. ಶಿಸ್ತಿನ ಆ ಸೈನಿಕರು ತಮ್ಮ ಖಾದಿಬಟ್ಟೆಯನ್ನು ತಾವೇ ನೂತ ನೂಲಿನಿಂದ, ನೇಯ್ದ ಬಟ್ಟೆಯಿಂದ ಒದಗಿಸಿಕೊಳ್ಳಬೇಕಿತ್ತು. ಖಾದಿ ಉಡುಗೆಯು ದೇಶೀಯ ಭಾವನೆಯ ಸ್ವಾವಲಂಬನೆಯ ಹಾಸು ಹೊಕ್ಕುಗಳಿಂದ ನೇಯಲಾಗಿತ್ತು; ಸರಳ ಜೀವನದ ಸಂಕೇತವಾಗಿತ್ತು. ಬಡತನದಿಂದ ಬೇಯುತ್ತಿದ್ದ ರೈತನ ಕುಟುಂಬದ ಕಷ್ಟದಲ್ಲಿ ಸಕ್ರಿಯವಾಗಿ ಭಾಗವಹಿಸುವ ಆರ್ಥಿಕ ನೀತಿಯು ಅದರಲ್ಲಿ ಅಡಗಿತ್ತು. ತಾವೇ ನೂತ ಉಟ್ಟ ಪಂಚೆ, ತೊಟ್ಟ ಶಾಲಿನಲ್ಲಿ ಗಾಂಧೀಜಿ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿ ಐದನೇ ಜೋರ್ಜರನ್ನೂ ಮೇರಿ ರಾಣಿಯವರನ್ನೂ ಭೇಟಿಮಾಡಿ ಚಹಾ ಪಾನಮಾಡಿದರು. ಭಾರತೀಯ ರೈತನ ನಿಜರೂಪ ಧರಿಸಿದ ಗಾಂಧೀಜಿ ನಮ್ಮ ದೇಶದ ಸಜೀವ, ಸರಳ ಸಂಕೇತವಾಗಿದ್ದರು. ಗ್ರಾಮಾಂತರ ಪ್ರದೇಶದಲ್ಲಿ ತಲತಲಾಂತರದಿಂದ ರೂಢಿಯಲ್ಲಿದ್ದ ನೂಲುವ, ನೇಯುವ ಗುಡಿಕೈಗಾರಿಕೆಗೆ ಹೊಸ ಜೀವ ಕೊಟ್ಟರು. ಗಾಂಧೀಜಿ ಗುಡಿಕೈಗಾರಿಕೆಗಳ ಜೀವವನ್ನು ಹೀರುತ್ತಿದ್ದ ಪರಕೀಯ ಬಟ್ಟೆಗಿರಣಿಗಳನ್ನೂ ಸಾಮೂಹಿಕವಾಗಿ ಬಹಿಷ್ಕರಿಸಿದರು. ಈ ರೀತಿ ಗಾಂಧೀಜಿಯವರು ಶರೀರ ಶ್ರಮದೊಂದಿಗೆ, ಸ್ವಾವಲಂಬನದ ಮತ್ತು ಗ್ರಾಮದ ಅರ್ಥ ನೀತಿಯನ್ನು ಭಾರತೀಯರಿಗೆ ಕಲಿಸಿದರು. ನಮ್ಮ ಯುವ ಜನಾಂಗ ಇದನ್ನೆಲ್ಲಾ ಮನನಮಾಡಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ.

ಗಾಂಧೀಜಿಯವರ ಜೀವನದಿಂದ ಕಲಿಯಬಹುದಾದ ನಾಲ್ಕನೇ-ಗುಣ, ಶಿಸ್ತು ಮತ್ತು ಅವರ ಸಂಘಟನಾ, ಕುಶಲತೆ. ಗಾಂಧೀಜಿ ಶಿಸ್ತಿನ ಸೈನಿಕರಂತಿದ್ದರು. ಅವರ ದಿನಚರಿಯು ಕ್ರಮಬದ್ಧವಾಗಿತ್ತು. ಪ್ರಾರ್ಥನೆ,

ನೂಲುವಿಕೆ, ಇಲ್ಲದ ದಿವಸಗಳೇ ಇರಲಿಲ್ಲ. ದುಂಡುಮೇಜಿನ ಪರಿಷತ್ತಿಗೆ ಗಾಂಧೀಜಿ ಇಂಗ್ಲೆಂಡಿಗೆ ಹೊರಟಾಗ ಅವರ ಚರಕವೂ ಅವರೊಂದಿಗೇ ಹೊರಟಿತು. ಹಡಗದ ಮೇಲೆಯೂ ನೂಲುವ ಕೆಲಸ ಎಂದಿನಂತೆಯೆ ನಡೆಯುತ್ತಿತ್ತು. ಬಡವ, ಬಲ್ಲಿದ, ಮುಂದಾಳುಗಳೆಂಬ ಭೇದವಿಲ್ಲದೆ ಗಾಂಧಿ ಅನುಯಾಯಿಗಳು ಸದಾ ಖಾದಿ ಬಟ್ಟೆಯನ್ನು ಧರಿಸಬೇಕಿತ್ತು. ಇಲ್ಲಿ ಪೋಷಾಕಿನ ಯಾವ ಬೂಟಾಟಿಕೆಗೂ ಎಡೆ ದೊರೆಯುತ್ತಿರಲಿಲ್ಲ. ಗಾಂಧೀಜಿಯವರ ಆಹಾರದಲ್ಲೂ ಕ್ರಮಬದ್ಧತೆಯಿತ್ತು. ಹುಟ್ಟಿನಿಂದಲೇ ಶಿಸ್ತಿನಲ್ಲಿ ಬೆಳೆದ ಗಾಂಧೀಜಿಗೆ ಶಿಸ್ತು ಜೀವನದ ಒಂದು ಅಂಗವಾಗಿಯೇ ಬೆಳೆದು ಬಂದಿತ್ತು. ಅದೇ ರೀತಿ ಅವರು ವಿದ್ಯಾರ್ಥಿಗಳಲ್ಲೂ, ರೈತರಲ್ಲೂ, ಕಾರ್ಮಿಕರಲ್ಲೂ ಶಿಸ್ತಿನ ಜೀವನವನ್ನು ಮೆಚ್ಚುತ್ತಿದ್ದರು. ಅವರ ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ, ಹರಿಜನ ಅಭಿವೃದ್ಧಿ ಚಳವಳಿಗಳೂ ತುಂಬಾ ಶಿಸ್ತಿನಿಂದಲೇ ಸಂಘಟಿಸಲ್ಪಟ್ಟಿದ್ದುವು, ಅಲ್ಲಿಯ ಕಾರ್ಯಕ್ರಮಗಳು ಯಾವ ಸುಸಜ್ಜಿತ, ಶಿಕ್ಷಿತ ಸೇನೆಯ ಕಾರ್ಯಕ್ರಮಕ್ಕೂ ಬಿಟ್ಟಿರಲಿಲ್ಲ. ದ. ಆಫ್ರಿಕದಲ್ಲಿರುವಾಗ ಬೋಯರ್ ದಂಗೆಯ ಸಮಯದಲ್ಲಿ, ಜೂಲೂ ಜನರ ದಂಗೆಯ ಸಮಯದಲ್ಲಿ ಸೈನಿಕರ ಸಮವಸ್ತ್ರವನ್ನು ಧರಿಸಿ ಘಾಸಿಗೊಂಡವರ ಗಾಯಗಳಿಗೆ ಬಟ್ಟೆ ಸುತ್ತಿದರು. ಯುವ ಜನಾಂಗ ಗಾಂಧೀಜಿಯ ಜೀವನ ಚರಿತ್ರೆಯನ್ನು ಓದಿದಾಗ ಗಾಂಧೀಜಿ ಯಾವ ರೀತಿ ಇಡೀ ದೇಶವನ್ನೇ ಶಿಸ್ತಿನ ಸೈನ್ಯದಿಂದ ತುಂಬಿದರೆಂಬ ವಿಚಾರ ಹೊಳೆಯುವುದು. ಶಿಸ್ತು ಯುವಕರ ಜೀವನಕ್ಕೆ ಮೆರುಗನ್ನು ಕೊಡುವುದು.

ಶಿಸ್ತಿನ ಉಲ್ಲಂಘನೆಯನ್ನು ಗಾಂಧೀಜಿ ಎಂದೂ ಸಹಿಸುತ್ತಿರಲಿಲ್ಲ. ಆದರೆ ಅವರು ಶಿಸ್ತುಗೇಡಿಗಳಿಗೆ ಶಿಕ್ಷೆ ವಿಧಿಸುವ ವಿಧಾನ ಬಹು ವಿಚಿತ್ರವಾಗಿತ್ತು. ಶಿಸ್ತುಭಂಗವಾದರೆ ಅದಕ್ಕೆ ನಾಯಕನೇ ಹೆಚ್ಚಾಗಿ ಜವಾಬ್ದಾರನೆಂದು ಗಾಂಧೀಜಿಯ ಮತ, ಅದರಂತೆಯೇ ತನ್ನ ಅನುಯಾಯಿಗಳು ಶಿಸ್ತುಭಂಗಮಾಡಿದರೆ ತನ್ನನ್ನೇ ಗಾಂಧೀಜಿ ಶಿಕ್ಷಿಸಿಕೊಳ್ಳುತ್ತಿದ್ದರು. ತಮ್ಮ ಆತ್ಮಶುದ್ಧಿಗಾಗಿ ಉಪವಾಸಗಳನ್ನೇ ಮಾಡುತ್ತಿದ್ದರು. 1921ರಲ್ಲಿ ಸತ್ಯಾಗ್ರಹಿಗಳು ಸಹನೆ ಕಳೆದುಕೊಂಡು ಹಿಂಸಾಕೃತ್ಯಗಳನ್ನು ತೊಡಗಿದಾಗ—ಚೌರಿಚೌರದಲ್ಲಿ ಪೋಲೀಸರನ್ನೇ ಕಡಿದು ಬಿಸಾಡಿದಾಗ—ಗಾಂಧೀಜಿ ತಮ್ಮ

ಅಸಹಕಾರ ಚಳವಳವನ್ನು ಹಿಂತೆಗೆದುಕೊಂಡರು. ಮತ್ತು ಐದು ದಿನಗಳ ಉಪವಾಸವನ್ನು ಕೈಗೊಂಡರು. ಇದರಿಂದ ದೇಶದ ಜನತೆಯ ಮೇಲೆ ಅಗಾಧವಾದ ಪರಿಣಾಮವಾಯಿತು. ಮುಂದೆ ಎಂದೂ ಈ ರೀತಿಯ ಹಿಂಸಾಕೃತ್ಯಗಳಿಗೆ ಸತ್ಯಾಗ್ರಹಿಗಳು ಮನಸ್ಸುಮಾಡಲು ಅಂಜಿದರು. 1924ರಲ್ಲಿ ಹಿಂದು, ಮುಸ್ಲಿಂ, ಐಕ್ಯಕ್ಕಾಗಿ ಇಪ್ಪತ್ತೊಂದು ದಿನಗಳ ಉಪವಾಸ ಮಾಡಿ ತಮ್ಮೊಳಗೆ ಕಚ್ಚಾಟವಾಡುತ್ತಿದ್ದ ಹಿಂದುಗಳನ್ನೂ, ಮುಸ್ಲಿಮರನ್ನೂ ಸರಿದಾರಿಗೆ ತಂದರು. 1932ರಲ್ಲಿ ಅಸ್ಪೃಶ್ಯರ ನಿವಾರಣೆಗಾಗಿ ಆಮರಣ ಉಪವಾಸವ್ರತ ತೊಟ್ಟು ಹಟಗಾರ—ಮುಂದಾಳುಗಳನ್ನು ಸರಿದಾರಿಗೆ ತಂದರು. ಗಾಂಧೀಜಿಯ ಜೀವನದುದ್ದಕ್ಕೂ ಈ ರೀತಿಯ ಹಲವಾರು ಘಟನೆಗಳಿವೆ. ಇದರಿಂದ ತಿಳಿಯುವ ವಿಷಯವೆಂದರೆ ಶಿಸ್ತಿನ ಪಾಲನೆಗೆ ಮುಂದಾಳುಗಳು ಮತ್ತು ಅವರ ಅನುಯಾಯಿಗಳು ಎಷ್ಟು ಕಾರಣರೋ ಅದೇ ರೀತಿ ಶಿಸ್ತುಗೇಡಿತನಕ್ಕೆ ಮುಂದಾಳುಗಳೂ, ಅನುಯಾಯಿಗಳೂ ಕಾರಣರಾಗಿರುತ್ತಾರೆ. ಮುಂದಾಳುವು ತನಗೆ ತಾನೇ ಶಿಕ್ಷೆಯನ್ನು ವಿಧಿಸಿಕೊಳ್ಳುವುದರಿಂದ ತನ್ನ ಅನುಯಾಯಿಗಳ ನಡವಳಿಕೆಯನ್ನು ತಿದ್ದಬಹುದೆಂದು ತೋರಿಸಿಕೊಟ್ಟಿದ್ದಾರೆ. ಇವೆಲ್ಲಾ ಅನುಕರಣೀಯವಾಗಿವೆ.

ಗಾಂಧೀಜಿಯ ಸಂಘಟನಾ ಶಕ್ತಿಯು ಅದ್ಭುತವಾಗಿತ್ತು. 200–300 ವರ್ಷಗಳ ಪರ್ಯಂತರ ನಿರ್ಜೀವವಾಗಿ ಬಾಳುತ್ತಿದ್ದ ಭಾರತಕ್ಕೆ ಆತ್ಮಶಕ್ತಿಯ ಚುಚ್ಚು ಮದ್ದನ್ನು ಕೊಟ್ಟು ತನ್ನ ಬರೇ 20–21 ವರ್ಷಗಳ ಸೇವಾ ಸಮಯದಲ್ಲಿ ಸಂಘಟಿಸಿದ ಕೀರ್ತಿ ಗಾಂಧೀಜಿಯವರಿಗೆ ಸಲ್ಲಬೇಕು. ಗಾಂಧೀಜಿ ಚಂಪಾರಣ್ಯದ ಚಳವಳಿಯ ಮೂಲಕ, ಅಸಹಕಾರ ಚಳವಳಿ ಉಪ್ಪಿನ ಸತ್ಯಾಗ್ರಹ, ಪಾನನಿರೋಧ, ಗ್ರಾಮಕೈಗಾರಿಕಾ ಕಾರ್ಯಕ್ರಮಗಳು, ಅಸ್ಪೃಶ್ಯತಾ ನಿವಾರಣೆ, ಹಿಂದು ಮುಸ್ಲಿಂ ಐಕ್ಯವೇ ಮೊದಲಾದ ಹಲವಾರು ಚಾರಿತ್ರಿಕ ಚಳವಳಿಗಳ ಮೂಲಕ ದೇಶದ ರೈತರನ್ನು ಕಾರ್ಮಿಕರನ್ನು , ವಿದ್ಯಾರ್ಥಿಗಳನ್ನು, ಸ್ತ್ರೀಯರನ್ನು. ರಾಜಕಾರಣಿಗಳನ್ನು, ಅಸ್ಪೃಶ್ಯತನ್ನು ಸಂಘಸಿದರು. ಅವರ ಸಂಘಟನೆಯ ಮೂಲಕ ಅಸಾಧ್ಯವಾದುದನ್ನು ಸಾಧ್ಯವೆಂದು ಮಾಡಿ ತೋರಿಸಿದರು. ದಂಡಿಯಲ್ಲಿ ಒಂದು ಮುಷ್ಟಿ ಉಪ್ಪನ್ನು ಎತ್ತುತ್ತಲೇ ಭಾರತೀಯರಲ್ಲಿ ಕರ ನಿರಾಕರಣೆಯ ಕ್ರಾಂತಿಯನ್ನೇ

ಸಾಧಿದರು. ಬೊಂಬ್ಯಾಯ ಚೌಪಾಟಿಯಲ್ಲಿ ವಿದೇಶೀ ವಸ್ತ್ರಗಳನ್ನು ಸುಡುತ್ತಲೇ ಭಾರತದ ಜನತೆ ಸ್ವದೇಶೀ ಭಾವನೆಯಿಂದ ಉರಿಯುವಂತೆ ಮಾಡಿದರು. ಮತದ ಹೆಸರಿನಲ್ಲಿ ರಕ್ಕಸರು ತಮ್ಮ ನೆರೆಕೆರೆಯ ಮಕ್ಕಳ, ಹೆಂಗಸರ ರಕ್ತ ಮಾಂಸಗಳೊಡನೆ ಓಕುಳಿಯಾಡುತ್ತಿದ್ದಾಗ ಎಪ್ಪತ್ತರ ಮುದುಕ ಗಾಂಧೀಜಿ ನಡೆದುಕೊಂಡೇ ಹೋಗಿ ಬುದ್ಧಿ ಕಳಕೊಂಡು ಮೃಗವಾಗಿದ್ದ ಮಾನವನನ್ನು ಮಾನವನನ್ನಾಗಿ ಮಾಡಿದರು. ಇವೆಲ್ಲಾ ಸಂಟಘನಾ ಶಕ್ತಿಯ ಪವಾಡಗಳೇ ಆಗಿವೆ. ಇಂತಹ ಶಕ್ತಿಯನ್ನು ಯುವಕರು ಕಂಡುಕೊಂಡು ಬೆಳೆಸಿಕೊಳ್ಳುವುದು ಅಗತ್ಯ.

ಗಾಂಧೀಜಿಯ ಜೀವನದಿಂದ ಕಲಿಯಬಹುದಾದ ಮತ್ತೊಂದು ದೊಡ್ಡ ಪಾಠ ತ್ಯಾಗದ ಪಾಠ. ಭಾರತೀಯರ ಜೀವಮಾನದಲ್ಲಿ ತ್ಯಾಗಕ್ಕೆ ಅದ್ವಿತೀಯ ಸ್ಥಾನವಿದೆ, ತ್ಯಾಗಿಗಳಿಂದ, ಈ ನೆಲ ಪಾವನವಾಗಿದೆ. ತ್ಯಾಗ ಜೀವನವೇ ಭಾರತೀಯ ಜೀವನದ ಸಾರ ಮತ್ತು ಸರ್ವಸ್ವ. ಈ ಮಾತುಗಳನ್ನು ನಮ್ಮ ಪುರಾಣಗಳು ಸಾರುತ್ತಿವೆ. ಪುರಾಣ ಕಾಲದಲ್ಲಿ ಹಲವಾರು ಮಹಾಪುರುಷರು ಬಾಳಿದ್ದಾರೆ. ಆದರೆ ಭಾರತೀಯರು ಅವರನ್ನು ಪೂಜಿಸುವುದು ಅವರ ತ್ಯಾಗಗುಣಗಳಿಗಾಗಿಯೇ, ಶ್ರೀ ರಾಮಚಂದ್ರನನ್ನು ಅಯೋಧ್ಯೆಯ ರಾಜನೆಂದು ಪೂಜಿಸುವುದಿಲ್ಲ, ಆದರೆ ಅವನು ತನ್ನ ತಂದೆಗೋಸ್ಕರ, ತಮ್ಮಂದಿರಿಗೋಸ್ಕರ, ಜನತೆಗೋಸ್ಕರ, ಭಕ್ತರಿಗೋಸ್ಕರ ಮಾಡಿದ ತ್ಯಾಗದಿಂದಾಗಿ ಪೂಜನೀಯನೆನೆಸಿದ್ದಾನೆ, ಅದೇ ರೀತಿ ಶ್ರೀಕೃಷ್ಣನನ್ನು–ಅರ್ಜುನನ ಸಾರಥಿಯಾದ ಶ್ರೀಕೃಷ್ಣನನ್ನು, ಗೀತೋಪದೇಶ ಮಾಡಿ ಸಜ್ಜನರ ಸೇವೆಗಾಗಿ ರಥದ ಸಾರಥಿಯಾದ, ಶ್ರೀಕೃಷ್ಣನನ್ನು—ನಾವು ಪೂಜಿಸುತ್ತೇವೆ. ಚಾರಿತ್ರಿಕ ಕಾಲದ ಮಹಾವೀರ, ಗೌತಮ ಬುದ್ಧರನ್ನು ರಾಜಪುತ್ರರೆಂದು ಯಾರೂ ಆರಾಧಿಸುವುದಿಲ್ಲ. ಆದರೆ ಅವರು ತಮ್ಮ ರಾಜಪದವಿಯನ್ನು ತ್ಯಜಿಸಿ ಸಾಮಾನ್ಯ ಜನತೆಯ ಸುಖಕ್ಕಾಗಿ ತಮ್ಮ ಸುಖವನ್ನು ತ್ಯಾಗಮಾಡಿದಾಗಲೇ ಪೂಜಾರ್ಹರಾಗಿದ್ದಾರೆ. ಅದೇ ರೀತಿ ಚಂದ್ರಗುಪ್ತ, ಅಶೋಕ, ಸಮುದ್ರಗುಪ್ತ, ಪುಲಕೇಶಿ, ವಿಷ್ಣುವರ್ಧನರು, ಮತ್ತು ನಮ್ಮ ಆಚಾರ್ಯರ ಪರಂಪರೆಯ ತ್ಯಾಗ ಹಿಮಾಲಯದಂತೆ ಭವ್ಯವಾಗಿದೆ. ಇವರೆಲ್ಲರ ಪುಣ್ಯಪರಂಪರೆಗೆ ಸೇರಿದ ಗಾಂಧೀಜಿ ಅನ್ಯರಿಗಾಗಿ ಬಾಳಿದ್ದಾರೆ.

ಅನ್ನರಿಗಾಗಿ ಕಂಬನಿಮಿಡಿದಿದ್ದಾರೆ, ಅನ್ನರ ಕಂಬನಿಯನ್ನು ಒರೆಸಲು ತಾವು ದುಡಿದಿದ್ದಾರೆ. ದೇಶಕ್ಕೆ ಅನ್ನವನ್ನು ಕೊಡುವ ರೈತನಿಂದಲೇ ದೇಶದ ಕ್ಷೇಮವೆಂದು ಖಂಡಿತವಾಗಿ ನಂಬಿದ್ದ ಗಾಂಧೀಜಿ ತಮ್ಮ ಬೂಟಾಟಿಕೆಯ ಪೋಷಾಕನ್ನು ತೆಗೆದು ಬಿಸಾಡಿ ರೈತನಂತೆ ಅರ್ಧ ಪಕೀರ ವೇಷವನ್ನೇ ತೊಟ್ಟರು. ಅದೇ ವೇಷದಲ್ಲಿ ಜಗತ್ತಿನ ಅತಿ ದೊಡ್ಡ ಚಕ್ರವರ್ತಿಯೊಡನೆ ಮಾತುಕತೆ ನಡೆಸಿದರು. ರೈತನ ಮಧ್ಯದಲ್ಲೇ ತಮ್ಮ ಆಶ್ರಮ ಸ್ಥಾಪಿಸಿ ಅಲ್ಲೇ ಉಳಿದರು. ನೇಯ್ಗೆಯವನ ಬವಣೆಯನ್ನು ಕಂಡು ತಾನೂ ನೇಯುವವನಾದರು, ತನ್ನ ಮೇಲಿನ ಅಪಾದನೆಯೊಂದಕ್ಕೆ ಉತ್ತರಕೊಡುತ್ತಾ ಗಾಂಧೀಜಿಯವರು ಕೋರ್ಟಿನಲ್ಲಿ ತಾನೊಬ್ಬ ರೈತನೆಂದೂ, ನೇಯ್ಗೆಯವನೆಂದೂ ಹೇಳಿಕೊಂಡದ್ದನ್ನು ಇಲ್ಲಿ ನೆನಸಬಹುದಾಗಿದೆ. ರೈತರ ಉದ್ಧಾರಕ್ಕಾಗಿ, ಭಾರತದ 43 ಕೋಟಿ ಗ್ರಾಮಸ್ಥ ಭಾರತೀಯರ ಉದ್ಧಾರಕ್ಕಾಗಿ - ಗ್ರಾಮರಾಜ್ಯ, ಪಂಚಾಯತಿ ರಾಜ್ಯಗಳನ್ನು ಸ್ಥಾಪಿಸಬೇಕೆಂದಿದ್ದ ಕನಸು ಕೆಲವೇ ಮಂದಿ ಅಧಿಕಾರಮತ್ತರ ಕಪಿಮುಷ್ಟಿಯಲ್ಲಿ ಭಂಗವಾಗುತ್ತಿದೆ. ನೊಂದ ಜೀವಕ್ಕೆ ಪರಿಹಾರ ನೀಡುವ ಪಂಚಾಯತಿ ರಾಜ್ಯದ ಮೂಲ ಸೂತ್ರಗಳನ್ನು ನಮ್ಮ ಯುವ ಜನಾಂಗ ಅಭ್ಯಾಸಿಸಬೇಕು ಗ್ರಾಮಾಂತರ ಪ್ರದೇಶದಲ್ಲಿರುವ ಸುಮಾರು 20 ಕೋಟಿ ಯುವಕರ್ರು ಗ್ರಾಮ ಪಂಚಾಯತು. ಸಹಕಾರ ಸಂಘ, ಗ್ರಾಮದ ಶಾಲೆಗಳ ಮೂಲಕ ತಮಗೆ ಅನ್ನ ಬಟ್ಟೆ ಕೊಟ್ಟು ಸಾಕಿದ, ಸಲಹಿದ ಗ್ರಾಮದ ಜನತೆಯ ಸೇವೆಯನ್ನು ಮಾಡುವ ಸಂದರ್ಭವನ್ನು ಕಳಕೊಳ್ಳಬಾರದು. ಗಾಂಧೀಜಿಯ ಗ್ರಾಮ್ಯ ಪುನರ್ರಚನಾ ಕಾರ್ಯಗಳಾದ ವ್ಯವಸಾಯ, ಗುಡಿ ಕೈಗಾರಿಕೆ ಮತೀಯ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ, ಪಾನನಿಶೇದ, ಸ್ತ್ರೀಯರ ಸಮಾನತೆ ಮೊದಲಾದ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ ಸಕ್ರಿಯವಾಗಿ ದುಡಿಯುವುದು ಅಗತ್ಯ. ಯುವ ಜನಾಂಗವು ತಾನುಂಡ ಅನ್ನದ ಋಣವನ್ನು ಸಲ್ಲಿಸುವುದು ಅಗತ್ಯ. ಗಾಂಧೀಜಿಯ ತ್ಯಾಗ ಜೀವನದ ಆದರ್ಶ ನಮ್ಮ ಇಂದಿನ ಸ್ವಾರ್ಥ ಜೀವನವನ್ನು ಕುಂಠಿತಗೊಳಿಸುವಲ್ಲಿ ಸಹಕಾರಿಯಾಗಬೇಕು. ತ್ಯಾಗದ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಲು ಸಾಧ್ಯವಾಗದಿದ್ದರೂ ತ್ಯಾಗದ

ದಾರಿಯಲ್ಲಿ ಸಾಗುವುದು ಅಗತ್ಯ. ಎಲ್ಲಾ ಸದ್ಗುಣಗಳ ಮೊತ್ತವೇ ತ್ಯಾಗ ವಾಗಿದೆ. ಶಿಷ್ಟಶಕ್ತಿಗಳ ದೇವಾಲಯಕ್ಕೆ ತ್ಯಾಗದ ಕಲಶವಿಟ್ಟಾಗಲೇ ನಮ್ಮ ಕಾರ್ಯ ಪೂರ್ಣವಾದಂತಾಗುವುದು.

ಸ್ಥೂಲವಾಗಿ ಗಾಂಧೀಜಿಯವರ ಜೀವನದಿಂದ ಯುವಕರು, ಯುವ ತಿಯರು ಸಂಗ್ರಹಿಸಬಹುದಾದ ಜೀವನಾವಶ್ಯ ಸಾಮಗ್ರಿಗಳ ಲೆಕ್ಕ ಹಾಕಿ ದೆವು. ಆದರೆ ಇವೆಲ್ಲವನ್ನು ನಾವು ನಮ್ಮ ದಿನ ನಿತ್ಯ ಜೀವನದಲ್ಲಿ ಆಚರಿಸಿದರೆ ಮಾತ್ರ ಪ್ರಯೋಜನ. ನಮ್ಮ ಆಚಾರಕ್ಕೂ, ವಿಚಾರಕ್ಕೂ, ಹೊಂದಾಣಿಕೆ ಅಗತ್ಯ, ಇಲ್ಲದಿದ್ದರೆ ವಿಚಾರ ಒಂದೆಡೆ ಎಳೆದರೆ ಆಚಾರ ಮತ್ತೊಂದೆಡೆ ಎಳೆ ಯುವುದು. ಆಚಾರ ವಿಚಾರಗಳಲ್ಲಿ ಘರ್ಷಣೆಯು ತೊಡಗಿದಾಗ ಎಲ್ಲೆಲ್ಲೂ ಅತೃಪ್ತಿ ತಾಂಡವವಾಡುತ್ತಿದೆ. ತಂದೆ ಮಕ್ಕಳ ಜಗಳ, ಗುರು ಶಿಷ್ಯರ ಜಗಳ ಬಡವ ಬಲ್ಲಿದರ ಜಗಳ, ಹಿಂದಾಳು ಮುಂದಾಳುಗಳ ಜಗಳಗಳ ಮೂಲವಿರು ವುದು ಇಲ್ಲೆ. ನುಡಿಯಂತೆ ನಡೆ. ಆಚಾರ ವಿಚಾರಗಳ ಹೊಂದಾಣಿಕೆಗಳನ್ನು ಸಾಧಿಸಿದರೆ ಮಾತ್ರ ವೈಯಕ್ತಿಕ ಕಲ್ಯಾಣವನ್ನು ಸಾಧಿಸಬಹುದು, ಮತ್ತು ದೇಶದ ಕಲ್ಯಾಣವನ್ನು ಸಾಧಿಸಬಹುದು. ಈ ವಿಚಾರವನ್ನು ಯುವಜನ ತನ್ನ ಪ್ರತಿ ಹೆಜ್ಜೆ ಹೆಜ್ಜೆಯಲ್ಲೂ ಕಲಿತುಕೊಳ್ಳುವುದು ನಮ್ಮ ಶಾಲೆಗಳಲ್ಲಿ, ಮನೆ ಗಳಲ್ಲಿ ಗಾಂಧೀಜಿ ಜೀವನದ ತತ್ವಗಳ ವಿಚಾರ ಹರಡಬೇಕು. ಅವುಗಳು ಆಚರಿಸಲ್ಪಡಬೇಕು. ತಂದೆ ತಾಯಿಗಳ, ಗುರುಗಳ ಆಚಾರಗಳು, ವಿಚಾರ ಗಳು ವಿದ್ಯಾರ್ಥಿಗಳ ಜೀವನದ ಮೇಲೆಸ್ಪಷ್ಟವಾದ ಪ್ರತಿಬಿಂಬವನ್ನು ಮೂಡಿ ಸುತ್ತದೆ. ಅದೇ ರೀತಿ ನಮ್ಮ ಕಾಲೇಜುಗಳು, ಆಫೀಸುಗಳೂ, ಗಾಂಧೀ ತತ್ವದ ವಿಚಾರ ದಾರೆಯಲ್ಲಿ ಮೀಯಬೇಕು. ನಮ್ಮ ಶಾಲಾ ಕಾಲೇಜುಗಳ ಪಾಠ ಪುಸ್ತಕಗಳಲ್ಲಿ ಗಾಂಧೀಜಿ ವಿಚಾರಗಳ ಮುಕ್ತ ಕಂಠದ ಪ್ರಶಂಸೆಗಳಿರ ಬೇಕು. ಯುವಜನಾಂಗವು – ತಾನೂ ಗಾಂಧೀಜಿಯ ಸಂತಾನವೆಂಬ ಭಾವನೆ ಮೂಡುವಂತಹ ಪಾಠ ಕ್ರಮಗಳು ಬೆಳೆಯಬೇಕು. ವರ್ತಮಾನ ಪತ್ರಗಳು ಹೃದಯಂಗಮವಾಗಿ ಗಾಂಧೀಜಿಯ ವಿಚಾರ ಸರಣಿಯನ್ನು ಕೆದಕುವ ಪುಣ್ಯ ಕಾರ್ಯವನ್ನು ಮನಸ್ಸಿಟ್ಟು ಮಾಡಬೇಕು. ನಮ್ಮ ಚಲನ ಚಿತ್ರಗಳು ಗಾಂಧೀಜಿಯವರ ಜೀವನವನ್ನು ರಸವತ್ತಾಗಿ ತಿಳಿಸುವ ರೂಪಕಗಳನ್ನು ಒದಗಿಸಬೇಕು. ನಮ್ಮ ಲೇಖಕರು, ಕಾದಂಬರಿಕಾರರು

ಗಾಂಧೀಜಿಯ ತ್ಯಾಗಮಯ ಜೀವನವನ್ನು ಯುವ ಜನಾಂಗಕ್ಕೆ ಮೆಚ್ಚುಗೆ ಯಾಗುವ ರೀತಿಯಲ್ಲಿ ಚಿತ್ರಿಸಿ ಕೃತಕೃತ್ಯರಾಗಬೇಕು. ಈ ರೀತಿ ಪ್ರಚೋದಿ ಸಲ್ಪಟ್ಟ ಯುವ ಜನಾಂಗವು ಗಾಂಧೀ ಮಾರ್ಗವಲ್ಲಿ ನಡೆದು ತಮ್ಮ ಹಾಗೂ ತಮ್ಮ ತಾಯ್ನಾಡಿನ ಸರ್ವಾಂಗೀಣ ಕಲ್ಯಾಣಕ್ಕೆ ಸಿದ್ಧರಾಗುವರೆಂದು ಆಶಿಸ ಬಹುದು. ಅನ್ಯ ರಾಷ್ಟ್ರಗಳು ತಮ್ಮ ರಾಷ್ಟ್ರ ನಿರ್ಮಾಪಕರ ಗುಣಗಾನ ಮಾಡುತ್ತಾ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಕ್ರಮಗಳನ್ನು ನಾವೂ ನೋಡುತ್ತಿದ್ದೇವೆ. ಈ ಕಾರ್ಯದಲ್ಲಿ ರಾಷ್ಟ್ರದ ಎಲ್ಲಾ ಜನತೆ ತಮ್ಮ ಸರ್ವಶ ಕ್ತಿಯನ್ನು ಕೇಂದ್ರೀಕರಿಸಿ ತಮ್ಮ ರಾಷ್ಟ್ರದ ನಿರ್ಮಾಪಕರನ್ನು ಒಕ್ಕೊರಲಿನಿಂದ ಕೊಂಡಾಡುತ್ತಿವೆ, ಪೂಜಿಸುತ್ತಿವೆ. ಗಾಂಧೀಜಿಯವ ಅದರ್ಶ ಗುಣಗ ಳನ್ನು ಅನುಕರಿಸುವಲ್ಲಿ ಸಮಗ್ರ ದೇಶದ ಸರ್ವಶಕ್ತಿಯನ್ನು ಉಪಯೋಗಿ ಸುವುದು ಅಗತ್ಯ. ಭಾರತದ ಯುವಜನಾಂಗವು ಈ ಭವ್ಯ ಪರಂಪರೆಯನ್ನು ಮುನ್ನಡೆಸಲಿ!!!

# ಹತ್ತು ಕೋಟಿ ಭಾರತೀಯರ ಬವಣೆ

ಅಸ್ಪೃಶ್ಯರು, ಪರೆಯರು, ಹೊಲೆಯರು, ಕೊರಗರೇ ಮೊದಲಾದವರು ಈ ಹತ್ತುಕೋಟಿ ಹತಭಾಗ್ಯ ಭಾರತೀಯರು, ಸಮಾಜದ ಮಡಿವಂತರಿಂದ ಅತಿ ನಿಕೃಷ್ಟವೆಂದೆಣಿಸಿಕೊಂಡಿರುವ, ಆದರೂ ಜೀವನಾವಶ್ಯಕವಾದ ಸೇವೆಗಳನ್ನು ಮಾಡುತ್ತಲೇ ತಮ್ಮ ಜೀವನವನ್ನು ಸವೆಯಿಸುತ್ತಿರುವ — ಸಮಾಜದ ಕೊಳೆಯನ್ನು ತೊಳೆಯುತ್ತಿರುವ ವಿನೀತ ಸರ್ವಶ್ರೇಷ್ಠ ಸೇವಕ ವರ್ಗವೇ ಬವಣೆಗೊಳಗಾದ ಹತ್ತು ಕೋಟಿ ಭಾರತೀಯರು, ಇವರನ್ನೇ ಗಾಂಧೀಜಿ "ಹರಿಜನ"ರೆಂದು ನಾಮಕರಣ ಮಾಡಿ ಹರಿಜನೋದ್ಧಾರದ ತೊಟ್ಟಿಲು ತೂಗಿದರು — ಬಾಪೂಜಿ ಯಥಾರ್ಥವಾಗಿ 'ಪತಿತಪಾವನ'ರೆನಿಸಿಕೊಂಡರು ಮಾತ್ರವಲ್ಲ ಪ್ರತಿಯೊಬ್ಬ ಭಾರತೀಯನನ್ನು 'ಮಾನವನ ಅಮಾನುಷ ಬಹಿಷ್ಕಾರ'ವನ್ನು ಪ್ರತಿಭಟಿಸಲು ಹುರಿದುಂಬಿಸಿದರು ಮತ್ತು ಭಾರತೀಯ ಜೀವನಕ್ಕೆ ತಗಲಿದ ಬಂದಣಿಕೆಯನ್ನು ಕಿತ್ತು ಬಿಸಾಡಲು ಸೂತ್ರಗಳನ್ನೂ ಉಪದೇಶಿಸಿದರು.

ಆರ್ಯರು, ದಸ್ಯುಗಳೆಂದು ನಮ್ಮ ಪೂರ್ವೇತಿಹಾಸವು ಭಾರತದಲ್ಲಿ ಮೇಲು ಕೀಳಿನ ಕೋಟಲೆಯನ್ನೆಬ್ಬಿಸಿತು. ಇಂತಹ ಇತಿಹಾಸವನ್ನು ಆರ್ಯರು ಬರೆದರೋ, ದಸ್ಯುಗಳು ಬರೆದರೋ ತಿಳಿಯುವುದು ಕಷ್ಟ— ಕಾಲದ ಕತ್ತಲ ಮಡುವಿನಲ್ಲಿ ಮೇಲು ಕೀಳಿನ ಕರಾಳ ಕೃತ್ಯಗಳು—ತಮ್ಮ ಇರುವಿಕೆಗೇ ನಾಚಿ ಮುಳುಗಿಹೋಗಿವೆ—ಅವುಗಳ ಛಾಯೆ ಆಗಾಗ್ಗೆ ಅಲ್ಲಲ್ಲಿ ತನ್ನ ಬೀಭತ್ಸ ಸ್ವರೂಪವನ್ನು ತೋರುತ್ತಿವೆ–ಜನ ಜಾಗೃತಿಯುಂಟಾಗುವಂತೆ ಮಾಡುತ್ತಿವೆ. ಈ ರೀತಿಯ ಮನೆ–ಮುರುಕ ಇತಿಹಾಸದ ಸತ್ಯಾಸತ್ಯತೆಯನ್ನು ಪ್ರಶ್ನಿಸಲಾರದಷ್ಟು, ವಿಮರ್ಶಿಸಲಾರದಷ್ಟು ದಾಸರಾಗಿದ್ದೇವೆ. ಆರ್ಯರೆಂಬವರು ಆಹ್ವಾನಿಸಿ ಪೂಜಿಸಿದ ಅಗ್ನಿ, ವರುಣ, ವಾಯು ಮೊದಲಾದುವು ಆಳರಸರೆಂಬ ಭೇದವಿಲ್ಲದೆ ಉರಿಯುತ್ತಿವೆ, ಉಕ್ಕುತ್ತಿವೆ–ಅವರಉಪಾಸಕರಲ್ಲಿ ಮಾತ್ರ ಈ ಭೇದವೇಕೋ ತಿಳಿಯದು! ಇಂದ್ರಾದಿ ಪ್ರಾಕೃತಿಕ.

ದೇವತೆಗಳಿಗೆ ಮೇಲು ಕೀಳೆಂಬ ಭೇದವಿಲ್ಲದಿರುವಾಗ ಪ್ರಕೃತಿಪೂಜಾರಿಗಳಿಗೇಕೆ ಈ ಭೇದಭಾವನೆ ? ಪೀರ, ಕಾಫೀರ; ಬಿಳಿಯ, ಕರಿಯರೆಂಬ ಭೇದಭಾವನೆಗಳ ಒಳಗುಟ್ಟೇನು ??? ಸ್ವಾರ್ಥ, ಸ್ವಾರ್ಥ, ಸ್ವಾರ್ಥ! ಅಸಮರ್ಥರ, ಅಪಕ್ವ, ಅಸಂಸ್ಕೃತ ರಾಕ್ಷಸೀ ಜೀವನದ ಛಾಯೆಯ ಮಾಯೆ–ಜನತೆಯನ್ನು ಮಂಕುಮಾಡಲು ಎಂದೆಂದೂ ಪೈಶಾಚಿಕ ಕೃತ್ಯವನ್ನೆಸಗುತ್ತಿದೆ. ಮತ, ಭಾಷೆ. ರಾಜಕೀಯಗಳ ಸುಸಂಸ್ಕೃತ ಸ್ವರೂಪವನ್ನು ಜನತೆಯಿಂದ ಮರೆಮಾಜಿ—ಅವುಗಳ ವಿಕೃತ ವಿರೂಪದ ಹೊಲೆತನದ ಹೊಲಸನ್ನು ಹರಡುತ್ತಿದೆ. ಮಾನವಕೋಟಿಯನ್ನು ಪ್ರೇಮದ, ಕರುಣೆಯ ಬಂಧನದಿಂದ ಬಂಧಿಸುವ ಬದಲು—ಜೀವನ ದೇಗುಲದಲ್ಲಿ ಕೃತ್ರಿಮವಾದ, ಅಸಹ್ಯ ಅಡ್ಡ ಗೋಡೆಗಳನ್ನು ಎಬ್ಬಿಸುತ್ತಿದೆ. ಮಾನವನನ್ನು ತನ್ನ ಮಾಯೆಯಿಂದ ವಿಚಾರ ಮೂಢನನ್ನಾಗಿ, ಕರ್ತವ್ಯ ಮೂಢನನ್ನಾಗಿ ಮಾಡಿ—ಅವನು ತನ್ನ ದಾಸ್ಯತ್ವವನ್ನೂ, ಕಾಫೀರತನವನ್ನೂ ಹೊಲೆತನವನ್ನೂ ಒಪ್ಪುವಂತೆ ಮಾಡುವ ಈ ಮೋಡಿ ಬಹು ವಿಚಿತ್ರ—ಈ ಅಜ್ಞಾನ ವಿಷವು ಮನುಷ್ಯನ ನರನಾಡಿಗಳಲ್ಲಿ ಕಾಲಕ್ರಮೇಣ ಹರಿಯುವಂತೆ ಮಾಡಿ ಅವನನ್ನು ಮತ್ತನನ್ನಾಗಿ ಮಾಡುತ್ತದೆ: ಮತ್ತನಾದ ಮನುಷ್ಯ ಮೃಗವಾಗುತ್ತಾನೆ: ಮೃಗಗಳಲ್ಲಿ ಆಗಾಗ್ಗೆ ಕಂಡುಬರುವ ಸೌಜನ್ಯ, ಸಹಬಾಳ್ವೆಯನ್ನೂ ಮರೆತು—ಮೃಗಕ್ಕಿಂತಲೂ ಕೀಳಾಗುತ್ತಾನೆ. ಮನೆಗಳನ್ನು ಮುರಿಯುವ, ಮತಗಳನ್ನು ಸೀಳುವ, ರಾಷ್ಟ್ರಗಳ ಒಳಗೆ ಉಪರಾಷ್ಟ್ರವನ್ನು ಕೊರೆಯುವ, ರಾಷ್ಟ್ರದ ರಕ್ತವನ್ನೇ ಹೀರುವ ಸ್ವಾರ್ಥಿ ಜಗಳಗಳ ಹುಟ್ಟನ್ನು ಅಡಗಿಸದಿದ್ದರೆ—ಕಷ್ಟದ ಜೀವನದ ಫಲವನ್ನು ಉಣ್ಣುವ ಭಾಗ್ಯ ನಮಗಿಲ್ಲದಾದೀತು!

ಅಸ್ಪೃಶ್ಯತೆಯು ಇಂತಹ ಸ್ವಾರ್ಥದ ಕೈಗೂಸು. ಕನಕ, ಕಬೀರ,ಬಸವೇಶ್ವರರೇ ಮೊದಲಾದ ಸಂತರೂ, ಸತ್ಪುರುಷರೂ ಅಸ್ಪೃಶ್ಯರ ಮೇಲಾಗುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಿದರು - ಜನಜಾಗ್ರತಿಯನ್ನುಂಟುಮಾಡಿದರು. ಈ ಪವಿತ್ರ ಕಾರ್ಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕ್ರಮಬದ್ಧವಾಗಿ ವ್ಯಾಪಕವಾಗಿ ಮಾಡಿ ತೋರಿದವರು ಗಾಂಧೀಜಿ ಮಾತ್ರ. ಈ ಸಾಮಾಜಿಕ ಕ್ರಾಂತಿಯನ್ನು ಗಾಂಧೀಜಿಯವರು ತಮ್ಮ ವೈಯಕ್ತಿಕ ಜೀವನದಿಂದಲೇ ತೋರಿಸಿದರು. ಅಸ್ಪೃಶ್ಯನೊಬ್ಬನಿಗೆ ಸಮಾಜದಿಂದ ಆಗುವ

ಅನ್ಯಾಯದ ನೋವನ್ನು ಅನುಭವಿಸಲೆಂದೇ ಗಾಂಧೀಜಿ ಭಂಗೀ ಕೊಲೋನಿಯಲ್ಲೇ ಮನೆಮಾಡಿದರು. ಅವರನ್ನು ನೋಡಲು ಅವರ ಅನುಯಾಯಿಗಳೂ ಅಲ್ಲೇ ನಡೆಯಬೇಕಾಯ್ತು. ಇದರಿಂದಾಗಿ ಭಂಗಾ ಕೊಲೆನಿಯ ಕೊಳೆಯೂ ಕಳೆಯಿತು. — ಮುಂದಾಳುಗಳ ಮನಸ್ಸೂ ವಿಕಸನ ಗೊಂಡಿತು. ತಾನು ಉಣ್ಣುವ ಅನ್ನವನ್ನು ದಾನಿ ಬೆಹನ್ ಎಂಬ ಹರಿಜನ ಹೆಂಗಸೇ ಅಡಿಗೆ ಮಾಡಬೇಕೆಂದು ಗಾಂಧೀಜಿ ಹಟ ತೊಟ್ಟರು. ಲಕ್ಷ್ಮಿಯೆಂಬ ಹರಿಜನ ಬಾಲಿಕೆಯನ್ನು ತನ್ನ ಮಗಳೆಂದೇ ಮನೆಯಲ್ಲಿಟ್ಟು ಸಾಕುತ್ತಿದ್ದರು. ಈ ರೀತಿ ಗಾಂಧೀಜಿಯವರ ಆಶ್ರಮದಿಂದ ತೊಡಗಿದ ಹರಿಜನೋದ್ಧಾರ ಕ್ರಾಂತಿ ಭಾರತದ ಹಳ್ಳಿ ಹಳ್ಳಿಗಳಲ್ಲೂ, ಪೇಟೆ ಪಟ್ಟಣಗಳಿಗೂ ಹರಡಿತು; ಮನೆ ಮನೆಗಳಲ್ಲೂ ಜನಮನವನ್ನು ತೊಳೆಯಿತು. ಮದ್ಯಪಾನ ನಿಷೇಧ, ನೂಲುವುದು, ಹಿಂದೂಮುಸ್ಲಿಂ ಐಕ್ಯದಂತೆಯೇ ಅಸ್ಪೃಶ್ಯರಿಗೆ ಸಮಾನತೆಯನ್ನು ಒದಗಿಸಲು ಗಾಂಧೀಜಿ ಅತಿ ದೊಡ್ಡ ಯುದ್ಧವನ್ನೇ ಮಾಡಬೇಕಾಯ್ತು. 1932ರಲ್ಲಿ ಹರಿಜನರನ್ನು ಇತರ ಭಾರತೀಯರಿಂದ ಪ್ರತ್ಯೇಕಿಸುವ ಪರದೇಶೀಯರ ಹೊಲಸು ರಾಜಕೀಯವನ್ನು ಪ್ರತಿಭಟಿಸಿದರು; ಜೀವವನ್ನೇ ಪಣವಾಗಿಟ್ಟು ಆಮರಣ ಉಪವಾಸವನ್ನು ಕೈಗೊಂಡರು. ದಿಗಿಲುಗೊಂಡ ಜನತೆ ಮತ್ತು ಅವರ ಮುಂದಾಳುಗಳು "ಯರವಾಡಾ" ಒಪ್ಪಂದಕ್ಕೆ ಸಹಿ ಹಾಕುತ್ತಾ ಅಸ್ಪೃಶ್ಯತಾ ನಿವಾರಣೆಗಾಗಿ ಪ್ರತಿಜ್ಞಾಬದ್ಧರಾದರು. ಗಾಂಧೀಜಿಯ ಪ್ರಾಣ ಉಳಿಯಿತು. ಹರಿಜನೋದ್ಧಾರ ಕಾರ್ಯ ಬೆಳೆಯಿತು. 1933 ರಲ್ಲಿ ತಾನು ಸೆರೆಮನೆಯಲ್ಲಿದ್ದಂತೆಯೇ ಹರಿಜನ ಸೇವಕ ಸಂಘ'ವನ್ನು ಸ್ಥಾಪಿಸಿದರು. ತನ್ನ 'ಯಂಗ್ ಇಂಡಿಯಾ' ಎಂಬ ಪತ್ರಿಕೆಯನ್ನು "ಹರಿಜನ'ವೆಂದು ಬದಲಿಸಿ ಹರಿಜನ ಕಾರ್ಯಕ್ಕಾಗಿಯೇ ಮೀಸಲಾಗಿಟ್ಟರು. 1933 ನವಂಬರ ತಿಂಗಳಿಂದ ಹತ್ತು ತಿಂಗಳ ಭಾರತ ಪರ್ಯಟನವನ್ನು ಕೈಕೊಂಡರು. ದೇಶದ ಹಳ್ಳಿ ಪಟ್ಟಣಗಳನ್ನು, ಸುತ್ತಿದರು. ಮುತ್ತೈದೆಯರ ಮೂಗುತಿಗಳನ್ನೂ, ಮಾಂಗಲ್ಯಮಣಿಗಳನ್ನೂ ನಿರ್ಭಾಗ್ಯ ಹರಿಜನರ ಕಲ್ಯಾಣ ಕಾರ್ಯಕ್ಕಾಗಿ ಬೇಡಿದರು. ಸೆರಗೊಡ್ಡಿ ಪುಡಿಕಾಸನ್ನೂ ಬೇಡಿ ಕೂಡಿ ಹಾಕಿದರು. ತನ್ನ ಹಸ್ತಾಕ್ಷರವನ್ನೂ ಮಾರಾಟ ಮಾಡಿ ಹಣಗಳಿಸಿದರು. ಜನಮನವನ್ನೂ ಈ ಕ್ರಾಂತಿಗಾಗಿ ಹಸನುಗೊಳಿಸಿದರು, ಅಲ್ಲಲ್ಲಿ ಹರಡಿದ್ದ ಹರಿಜನ ಕಾರ್ಯಕರ್ತ

ರನ್ನು ಸಂಘಟಿಸಿವರು -ಅವರಲ್ಲಿ ಹೊಸ ಹುರುಪು ಹುಟ್ಟಿಸಿದರು. ಇದರ ಫಲವಾಗಿ ಅಲ್ಲಲ್ಲಿ ಹರಿಜನ ವಸಾಹತುಗಳು ತಲೆಯೆತ್ತಿದುವು. ಹರಿಜನರಿಗಾಗಿ ಶಾಲೆಗಳು ತೆರೆದುವು. ದೇಶವಿಡೀ ದೇವಾಲಯಗಳ ಮಹಾದ್ವಾರಗಳು ಹರಿಜನರಿಗಾಗಿ ತೆರೆಯಲ್ಪಟ್ಟಪ. ಶಾಲಾ ಕೋಲೇಜುಗಳು ಮುಕ್ತ ದ್ವಾರವಾದುವು.

ಗಾಂಧೀಜಿಯವರ ಆದೇಶದಂತೆ ನಮ್ಮ ಸರಕಾರವಾದರೂ ಹರಿಜನೊದ್ಧಾರ ಕಾರ್ಯವನ್ನು ಮುಂದುವರಿಸಿತು. ಕಾನೂನು ಮೂಲಕ ಅಸ್ಪೃಶ್ಯತೆಯನ್ನು ಬಹಿಷ್ಕರಿಸಿತು. ಪ್ರಕೃತ ಹರಿಜನ ಗಿರಿಜನರ ಸುಮಾರು 800ಕ್ಕೂ ಮಿಕ್ಕಿದ ಪ್ರತಿನಿಧಿಗಳು ನಮ್ಮ ಪಾರ್ಲಿಮೆಂಟಿನಲ್ಲಿ - ಬೇರೆ ಬೇರೆ ರಾಜ್ಯಗಳ ವಿಧಾನ ಸಭೆಗಳಲ್ಲೂ, ಸಾವಿರಾರು ಮಂದಿ ಹರಿಜನ ಮುಂದಾಳುಗಳು ತಾಲೂಕು ಬೋರ್ಡು ಪಂಚಾಯತುಗಳಲ್ಲೂ ಸದಸ್ಯರಾಗಿದ್ದು ಹಿಂದುಳಿದವರ ಕಲ್ಯಾಣ ಕಾರ್ಯಗಳಲ್ಲಿ ಸಹಕಾರ ನೀಡುತ್ತಿರುವರು. ಹರಿಜನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಪ್ರಾರಂಭವಾಗಿ ಪ್ರೌಢ ಶಿಕ್ಷಣದ ವರೆಗೂ ಮುಂದುವರಿಯುವಂತೆ ಹಳ್ಳಿಹಳ್ಳಿಗಳಲ್ಲಿ ಆಶ್ರಮ ಶಾಲೆಗಳನ್ನೂ, ವಿದ್ಯಾರ್ಥಿನಿಲಯಗಳನ್ನೂ ತೆರೆಯಲಾಗಿದೆ. ಇಲ್ಲಿ ವಸತಿ, ಊಟ ಮತ್ತು ಬಟ್ಟೆಗಳನ್ನು ಪುಕ್ಕಟೆಯಾಗಿ ಒದಗಿಸಿಕೊಡಲಾಗುವುದು ಮಾತ್ರವಲ್ಲ.. ಇಂತಹ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಸಾಧ್ಯವಾಗದ ಮಕ್ಕಳಿಗೆ ವಿದ್ಯಾರ್ಥಿವೇತನಗಳನ್ನೂ, ಬಟ್ಟೆ, ಪುಸ್ತಕ ಹಾಗೂ ಆಹಾರ ಮೊದಲಾದ ಸವಲತ್ತುಗಳನ್ನೂ ಒದಗಿಸಿಕೊಡಲಾಗುವುದು. ಹರಿಜನ ಮಹಿಳೆಯರಿಗೆ ಮಹಿಳಾ ಸಮಾಜ ಕೇಂದ್ರಗಳಲ್ಲಿ ಕಸೂತಿ, ಹೊಲಿಗೆಯ ಕೆಲಸಗಳನ್ನೂ ಕಲಿಸಿಕೊಟ್ಟು ಧರ್ಮಾರ್ಥವಾಗಿ ಹೊಲಿಗೆ ಯಂತ್ರಗಳನ್ನು ಒದಗಿಸಿ ಕೊಡಲಾಗುವುದು. 3-5ವರ್ಷ ಪ್ರಾಯದ ಚಿಕ್ಕ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಇಂತಹ ಕೇಂದ್ರಗಳಲ್ಲಿ ಒದಗಿಸಲಾಗುವುದು. ಸ್ವಲ್ಪ ವಿದ್ಯೆ ಪಡೆದ ಮಕ್ಕಳಿಗೆ ನೂಲುವ, ತೆಂಗಿನ ನಾರಿನ ಕೈಗಾರಿಕೆ ಕಮ್ಮಾರ, ಬಡಗಿ ಮೊದಲಾದ ಕೈಗಾರಿಕೆಗಳಲ್ಲಿ ತರಬೇತಿ ಕೊಡುವ ಕಾರ್ಯಕ್ರಮಗಳಿವೆ. ಹಿಂದುಳಿದ ವರ್ಗದ ರೈತರಿಗೆ ವ್ಯವಸಾಯದ ಬಗ್ಗೆ - ಗದ್ದೆ ಮಾಡಲು, ಸಹಾಯಧನವನ್ನು ಒದಗಿಸಿಕೊಡಲಾಗುವುದು. ಹೂಡುವ ಎತ್ತು ಕೋಣಗಳನ್ನೂ, ವ್ಯವಸಾಯ ಉಪಕರಣಗಳನ್ನೂ, ಒದಗಿಸಿ ಕೊಡಲಾಗು

ತ್ತದೆ. ಮನೆಗಳನ್ನು ಕಟ್ಟಲು ಸಾಲ ಹಾಗೂ ಸಹಾಯಧನವನ್ನೂ ಒದಗಿಸಿ ಕೊಡಲಾಗುತ್ತಿದೆ. ಇಂತಹ ಆರ್ಥಿಕ ಕಾರ್ಯಕ್ರಮಗಳು ಇನ್ನಷ್ಟು ಪ್ರಯೋಜನಕಾರಿಯಾಗುವಂತೆ ಹರಿಜನ ಬಂಧುಗಳೂ ಅವರ ಮುಂದಾಳುಗಳೂ, ಇತರ ಕಾರ್ಯಕರ್ತರೂ ಮುತುವರ್ಜಿ ವಹಿಸುವುದು ಅಗತ್ಯ. ಹರಿಜನ ಗಿರಿಜನರ ತೀರಾ ಹತ್ತಿರವಿದ್ದು ಕಾರ್ಯವೆಸಗುತ್ತಿರುವ ತಾಲೂಕುಬೋರ್ಡು ಹಾಗೂ ಪಂಚಾಯತುಗಳೂ ಈ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಸಾಧ್ಯವಿದೆ. ರಾಷ್ಟ್ರಪಿತ ಗಾಂಧೀಜಿಯಿಂದ ಪ್ರೇರಿತವಾದ ಹರಿಜನೋದ್ಧಾರದ ಈ ಸಾಮಾಜಿಕ ಕ್ರಾಂತಿ ಗಾಂಧೀಜಿಯ ಜನ್ಮಶತಾಬ್ದಿಯಲ್ಲಿ ಇನ್ನಷ್ಟು ತೀವ್ರವಾಗಿಯೂ, ವ್ಯಾಪಕವಾಗಿಯೂ ಹರಡಲೆಂದು ಆಶಿಸಲಾಗಿದೆ.

# ಗಾಂಧೀಜಿ ನಡೆದ ರಾಜಮಾರ್ಗ
# ಗ್ರಾಮಗಳ ಅಭಿವೃದ್ಧಿ

## ನಲುವತ್ತ ಮೂರು ಕೋಟಿ
## ಭಾರತೀಯರ ಅಭಿವೃದ್ಧಿ

ನಮ್ಮ ದೇಶದ ಸುಮಾರು ಐವತ್ತೆರಡು ಕೋಟಿ ಜನರಲ್ಲಿ ನೂರಕ್ಕೆ ಎಂಭತ್ತೆರಡು ಮಂದಿ ಅಂದರೆ ಸುಮಾರು ನಲುವತ್ತಮೂರು ಕೋಟಿ ಜನರು ರಾಷ್ಟ್ರದ ಉದ್ದಗಲಕ್ಕೆ ಹರಡಿರುವ ಐದುವರೆ ಲಕ್ಷ ಹಳ್ಳಿಗಳಲ್ಲಿ ಹುಟ್ಟಿದ್ದಾರೆ ಬಾಳುತ್ತಿದ್ದಾರೆ, ಅಂದರೆ ದೇಶದ ಜನತೆಯ ಹೆಸರಲ್ಲಿ ನಡೆಯುತ್ತಿರುವ ವಿದ್ಯಾಭ್ಯಾಸ ಆರೋಗ್ಯ ಮಿತಸಂತಾನ, ವ್ಯವಸಾಯ. ಸಹಕಾರ ಮೊದಲಾದ ಯೋಜನೆಗಳು ದೇಶದ ನಲುವತ್ತಮೂರು ಕೋಟಿ ಜನತೆಯು ಬಾಳಿ ಬದುಕುವಲ್ಲಿ ನಡೆಯಬೇಕೆಂಬುದನ್ನು ತಿಳಿಯಲು ಯಾವ ಪರದೇಶದ ತಜ್ಞನೂ ಅಗತ್ಯವಿಲ್ಲ. ವಿದ್ಯಾಭ್ಯಾಸ, ಆರೋಗ್ಯ, ಮಿತಸಂತಾನ ವ್ಯವಸಾಯ, ಸಹಕಾರಗಳ ಹೆಸರಲ್ಲಿ ಖರ್ಚಾಗುತ್ತಿರುವ ರಾಷ್ಟ್ರೀಯ ನಿಧಿಯು ಈ ನಲವತ್ತಮೂರು ಕೋಟಿ ಜನತೆಯು ಜೀವಿಸಿಕೊಂಡಿರುವ ಹಳ್ಳಿಗಳಲ್ಲಿ ವ್ಯಯಿಸಲ್ಪಡುತ್ತಿದೆಯೇ ಎಂಬುದನ್ನು ನಮ್ಮ ಆರ್ಥಿಕ ತಜ್ಞರೂ, ಸಾಮಾಜಿಕ ಕಾರ್ಯಕರ್ತರೂ, ರಾಜಕೀಯ ಮುಂದಾಳುಗಳೂ ತರ್ಕಿಸುವುದು ದೇಶದ ಹಿತದೃಷ್ಟಿಯಿಂದ ಅಗತ್ಯ. ಇಂದು ನಮ್ಮ ಹೆಚ್ಚಿನ ಗಮನ, ನಮ್ಮ ಹೆಚ್ಚಿನ ಸಂಪತ್ತು ಖರ್ಚಾಗುತ್ತಿರುವುದು. – ಢಿಲ್ಲಿ ಬೆಂಗಳೂರಂತಹ ಬೃಹತ್-ಪಟ್ಟಣಗಳಲ್ಲೂ ಅವುಗಳ ಸುತ್ತಮುತ್ತ ಹಬ್ಬಿರುವ ಉಪ ಪಟ್ಟಣಗಳಲ್ಲಿಯೂ ಆಗಿದೆ. ರಾಷ್ಟ್ರದ ಹೆಚ್ಚಿನ ಸಂಪತ್ತು ಕರಗುವುದು ಪಟ್ಟಣದ ಒಂಭತ್ತು ಹತ್ತು ಕೋಟಿ ಜನತೆಗಾಗಿ, ಅವರ ಸುಖ, ಸಂತೋಷ, ವಿಲಾಸಗಳಿಗಾಗಿ. ಸಿಮೆಂಟು ಮಾರ್ಗಗಳು, ಕೋಲೇಜು, ವಿಶ್ವವಿದ್ಯಾಲಯಗಳು, ಅರಸು ಮನೆಯಂತಹ ಆಸ್ಪತ್ರೆಗಳು, ಕಾರ್ಖಾನೆಗಳು, ಗಿರಣಿಗಳು, ಆಡಳಿತ ಖಚೇರಿಗಳು

ಇವೆಲ್ಲಾ ಇರುವುದು. 9 - 10 ಕೋಟಿ ಜನತೆಯ ಮಧ್ಯದಲ್ಲಿಯೆ. 43 ಕೋಟಿ ಜನತೆ ಈ ಸಂಸ್ಥೆಗಳ ಸವಲತ್ತನ್ನು ಪಡೆಯಬೇಕಾದರೆ ತಮ್ಮ ಹಳ್ಳಿಯನ್ನು ಬಿಟ್ಟು ಪೇಟೆಗೆ ಗುಳೆ ಕಿತ್ತು ಬರಬೇಕಾಗಿದೆ. ಆ ರೀತಿ ಬರಲು ಹಲವಾರು ನೆಪಗಳು ಇಲ್ಲದಿಲ್ಲ. ವಿದ್ಯಾರ್ಜನೆ, ಚಾಕರಿ, ನೌಕರಿ, ರಾಜಕೀಯ ವ್ಯಾಪಾರ— ಇನ್ನೆಷ್ಟೋ ಹೆಸರಿಸಬಾರದ ವ್ಯವಹಾರಗಳಿಗಾಗಿ ತಾವು ಬೆಳೆದ ಹಳ್ಳಿಗಳನ್ನು ತ್ಯಜಿಸಿ, ಪಟ್ಟಣಗಳನ್ನು ಸೇರುವ ಜನತೆ—ಒಂದು ಕಡೆಯಿಂದ ಹಳ್ಳಿಯನ್ನು ಬರಡಾಗಿ ಮಾಡಿದರೆ ಮಗುದೊಂದು ಕಡೆಯಿಂದ ಪೇಟೆಯ ತಲೆನೋವನ್ನು—ಜನನಿಬಿಡತೆ, ನಿರುದ್ಯೋಗ, ಕೆಟ್ಟ ಚಾಳಿಗಳ ರೂಪದಲ್ಲಿ ಬೆಳೆಸುತ್ತಿರುವರು. ದೇಶದ ಅನ್ನ, ಬಟ್ಟೆಗಳ ಉತ್ಪಾದನೆಯ ರೂಪದಲ್ಲಿ 43 ಕೋಟಿ ಜನತೆಯ ಶ್ರಮದ ಫಲ ಪೇಟೆಗಳಿಗೆ ಹರಿಯುತ್ತಿದೆ. ಆದರೆ ಹಳ್ಳಿಗಳಿಗೆ ಹಿಂತಿರುಗುವುದು, ಕರ, ತೆರಿಗೆಗಳು ಮಾತ್ರ. ಕೊಡುವ ಕೈ ಧಾರಾಳಿಯಾಗಿದೆ— ಕೊಳ್ಳುವ ಕೈ ಕಿತ್ತು ತಿನ್ನುವಂತಿದೆ. ಹಾಲನ್ನು ಸುರಿಸುವ ಕೆಚ್ಚಲನ್ನೇ ಕಡಿದು ತಿನ್ನುವಂತಿದೆ. ನಮ್ಮ ಹಳ್ಳಿಗಳ ಪರಿಸ್ಥಿತಿ. ಈ ದುಸ್ಥಿತಿಯನ್ನು ಬಗೆಹರಿಸಲು ರಾಷ್ಟ್ರದ 82·/. ಜನತೆ ಆರಿಸಿದ ಮುಂದಾಳುಗಳಿಂದ ನಿರ್ಮಿತವಾದ ಪ್ರಜಾಪ್ರಭುತ್ವದಲ್ಲಿ ಸಾಧ್ಯವರೂ - ಈ ಮುಂದಾಳುಗಳು ತಮ್ಮ ಹಿಂದಾಳುಗಳನ್ನು ಕಾಣಬರುವುದು, ಐದು ವರ್ಷಗಳ ಪರ್ಯಾಯ ಕಾಲದಲ್ಲಿ ಮತ್ತೆ ಬಾಗಿಲು ತೆರೆಯುವ ಕಲ್ಲು ಹಾಕುವ ಕಾರ್ಯಕ್ರಮಗಳನ್ನು ನೆರವೇರಿಸಲು ಮಾತ್ರ. ಇದಕ್ಕೆ ಅಲ್ಲೊಂದು ಇಲ್ಲೊಂದು ಆದರ್ಶ ಅಪವಾದಗಳು ಇಲ್ಲದಿಲ್ಲ.

ಈ ಎಲ್ಲಾ ಶೋಷಣೆ ಹಾಗೂ ಸಮಸ್ಯೆಗಳನ್ನು ತಮ್ಮ ದೂರ ದೃಷ್ಟಿಯಿಂದ ತಿಳಿದೇ ಗಾಂಧೀಜಿಯವರು "ಗ್ರಾಮಗಳೇ ಭಾರತದ ಜೀವಾಳ" ಎಂಬ ವೇದವಾಕ್ಯವನ್ನು ನಮ್ಮ ಮುಂದಿಟ್ಟರು. ಭಾರತದ ನೈಜ ಪ್ರಜಾತಂತ್ರದಲ್ಲಿ ಗ್ರಾಮವೇ ಮೂಲ ಘಟಕವೆಂಬ ಸತ್ಯವನ್ನು ಮತ್ತೆ, ಮತ್ತೆ ನಮ್ಮ ಮುಂದಾಳುಗಳ ಕಿವಿಗಳಲ್ಲಿ ಜಪಿಸಿದರು. ಇದನ್ನೆಲ್ಲಾ ಮರೆಯುವಷ್ಟು ಮತ್ತೆ ನಮ್ಮಲ್ಲಿ ಮೂಡಬಾರದು. ಗೊತ್ತು ಗುರಿಯಿಲ್ಲದ ನಮ್ಮ ಇಂದಿನ ರಾಜಕೀಯ—ನಮ್ಮ ರಾಜಕೀಯದ ಗೋರಿಯತ್ತ ನಮ್ಮನ್ನು ನಡೆಸಿದರೆ ಆಶ್ಚರ್ಯವಿಲ್ಲ. ಇವನ್ನೆಲ್ಲಾ ನೋಡುವ ದೃಷ್ಟಿಬೇಕು, ಮನಸ್ಸು

ಬೇಕು. ಇವನ್ನೆಲ್ಲಾ ತಿಳಿದುಕೊಂಡು ನಾವು ತಕ್ಕ ಕಾರ್ಯಕ್ರಮಗಳನ್ನು ರಚಿಸಿಕೊಂಡು— ಕಾರ್ಯಗತಗೊಳಿಸಲು ತಪ್ಪಿದರೆ— ನಮ್ಮ ಸಮಸ್ಯೆಗಳು ಕಾದುನಿಲ್ಲಲಾರದೆ, ತಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳಬಹುದು. ಪೂಜ್ಯ ಗಾಂಧೀಜಿಯವರ ಮೂಲಪಾಠಗಳನ್ನು ಕಲಿತುಕೊಳ್ಳುವುದು ಅಗತ್ಯ. ಗಾಂಧೀಜಿಯವರ ಗ್ರಾಮ ಪುನರ್ರಚನಾ ಕಾರ್ಯಕ್ರಮಗಳನ್ನು ಕಡೆಗಣಿಸಲು ಸಾಧ್ಯವಿಲ್ಲ.

ನಮ್ಮ ಮುಂದಾಳುಗಳು, ನಮ್ಮ ತಜ್ಞರು ಬೇರೊಂದು ಉತ್ತಮ ಹಾಗೂ ಅರ್ಥವತ್ತಾದ ಯೋಜನೆಗಳನ್ನು ಜನತೆಯ ಮುಂದಿಡುವ ತನಕ ಗಾಂಧೀಜಿಯವರು ಪ್ರತ್ಯಕ್ಷವಾಗಿ ಮಾಡಿ ತೋರಿಸಿದ ಕಾರ್ಯಕ್ರಮಗಳನ್ನೇ ನಾವು ನಿಷ್ಠೆಯಿಂದ ಕಾರ್ಯಗತಗೊಳಿಸುವುದುಅಗತ್ಯ. ಹಸಿದ ಹೊಟ್ಟೆ ಯಲ್ಲಿ ಎರಡು ಅನ್ನದ ಕಾಳು ಹಾಕುವುದು ಅಗತ್ಯ. ಬರಿಗೈಯಲ್ಲಿ ಬವಣೆ ಪಡುವ ಕೈಯಲ್ಲಿ ಎರಡು ಬಿಡಿ ಕಾಸುಗಳನ್ನು ಇಟ್ಟು, ನಾಳೆಯೂ ಜೀವ ಹಿಡಿದು ಬಾಳಬೇಕೆಂಬ ಆಶೆಯನ್ನು ಜನತೆಯಲ್ಲಿ ಹುಟ್ಟಿಸದೆ ಹೋದರೆ ಗಂಡಾತರ ತಪ್ಪಿದ್ದಲ್ಲ. ಹಸಿದ ಹೊಟ್ಟೆ, ಕೆಲಸವಿಲ್ಲದ ಕೈಗಳು ಏನನ್ನೂ ಮಾಡಿಯಾವು, ಯಾರನ್ನೂ ಬಲಿ ತೆಗೆದುಕೊಂಡಾವು. ಇವೆಲ್ಲದರ ಮೊಳಕೆ ಯನ್ನು ಅಲ್ಲಲ್ಲಿ ನಾವು ಕಾಣುತ್ತಿದ್ದೇವೆ. ಅವನ್ನೆಲ್ಲಾ ಬರೇ ರಾಜಕೀ ಯವೆಂದು ತಾತ್ಸಾರದಿಂದ ಕುಳಿತರೆ ರಾಷ್ಟ್ರದ್ರೋಹವಾದೀತು.

ಕೃಷಿ ಮತ್ತು ಪಶುಪಾಲನೆಯು ಭಾರತೀಯರ ಸಂಸ್ಕೃತಿಯ ಮೂಲ ವಾಗಿದೆ. ಪುರಾಣ ಕಾಲದಿಂದಲೂ ಈ ಮಾತು ಸತ್ಯವಾಗಿದೆ. ಭಾರತೀಯ ರೆಲ್ಲರಿಂದ ಪೂಜಿಸಲ್ಪಡುವ ಶ್ರೀ ಕೃಷ್ಣನನ್ನು ಕೊಳಲು ಕೃಷ್ಣನೆಂದೂ, ಗೋಪಾಲಕೃಷ್ಣನೆಂದೂ ದಿನ ನಿತ್ಯ ಪೂಜಿಸುತ್ತೇವೆ. ತನ್ನ ಪಾಲನೆಯಲ್ಲಿದ್ದ ಗೋವಿಂದನು ಗೋವರ್ಧನ ಪರ್ವತವನ್ನೇ ಕೊಡೆಯಾಗಿ ಎತ್ತಿ-ಆವು ಗಳನ್ನು ಮಳೆ, ಗಾಳಿಯಿಂದ ರಕ್ಷಿಸಿದುದರಿಂದ ಅವನು ಬೇಕಾದಷ್ಟು ಹಾಲು, ಬೆಣ್ಣೆ ತಿನ್ನುವಂತಾಯ್ತು, ಮಾತ್ರವಲ್ಲ ತನ್ನ ಎಲ್ಲಾ ಭಕ್ತರಲ್ಲೂ ಹಾಲು ಬೆಣ್ಣೆಯ ಸಮುದ್ರವೇ ಉಕ್ಕುವಂತೆ ಮಾಡಿದನೆಂಬ ವಿಚಾರವನ್ನು ಓದಿ ತಿಳಿದಿದ್ದೇವೆ. ಅವನಣ್ಣ ಬಲರಾಮನಾದರೋ ವ್ಯವಸಾಯದ ಕೀಲಿ ಕೈ ಯಂತಿರುವ ನೇಗಿಲನ್ನೇ ಧರಿಸಿ ಹಲಾಯುಧ ನೆನಿಸಿಕೊಂಡೇ ನಮ್ಮೆಲ್ಲರ

ಪೂಜೆಯನ್ನು ಪಡೆಯುತ್ತಿರುವನು. ಈ ರೀತಿ ಕೃಷಿ, ಪಶು ಪಾಲನೆಗಳು ತಲೆತಲಾಂತರದಿಂದ ಹರಿದು ಬಂದಿವೆ. ನಮ್ಮ ರೈತನಿಗೆ ಸಾಕಷ್ಟು ವ್ಯವಸಾಯದ ಅನುಭವವಿದೆ. ಉತ್ತಮ ಬೀಜವನ್ನು ಬಿತ್ತಿದರೆ, ಉತ್ತಮ ಬೆಳೆ ಬರುತ್ತದೆಂಬ ವಿಚಾರ ತಜ್ಞರ ಬಾಯಿಯಿಂದಲೇ ಬರಬೇಕೆಂದಿಲ್ಲ. ಆದರೆ ರೈತನಿಗೆ ಉತ್ತಮ ಬೀಜವನ್ನು - ಅವನಿಗೆ ಬೇಕಾದಾಗ ಒದಗಿಸಿ ಕೊಡುವ ಏರ್ಪಾಡಾಗಬೇಕು. ಅದೇ ರೀತಿ ಹೆಚ್ಚು ಗೊಬ್ಬರ ಹಾಕಿದರೆ, ಹುಲುಸಾದ ಬೆಳೆ ಬರುತ್ತದೆಂಬ ತತ್ವಜ್ಞಾನವು ರೈತನಿಗಿದೆ. ಆದರೆ ಅಂತಹ ಗೊಬ್ಬರಗಳನ್ನು ಸುಲಭ ಕ್ರಯಕ್ಕಾಗಲೀ, ಸಾಲದ ಮೂಲಕವಾಗಲೀ ಅವು ತನ್ನ ಹಳ್ಳಿಯಲ್ಲೇ ತಕ್ಕ ಸಮಯದಲ್ಲಿ ದೊರೆಯುವಂತಹ ವ್ಯವಸ್ಥೆಯಾಗಬೇಕು. ಬಡತನದಿಂದ ಬಳಲುತ್ತಿರುವ ರೈತನಿಗೆ ಸುಧಾರಿತ ಬೀಜ, ಗೊಬ್ಬರಗಳನ್ನು ಖರೀದಿಸಲು ಮತ್ತು ವ್ಯವಸಾಯದ ಖರ್ಚಿಗಾಗಿ ಎಕ್ರೆಗೆ ರೂ. 400 — 500 ಸಾಲವೂ ದೊರೆಯುವಂತಾದರೆ, ವ್ಯವಸಾಯದ ಅಭಿವೃದ್ಧಿ ತನ್ನಿಂದ ತಾನೇ ಆಗುವುದು, ರೈತನಿಗೂ, ಅವನ ಮಕ್ಕಳಿಗೂ ವೈಜ್ಞಾನಿಕ ವ್ಯವಸಾಯ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಸರಿಯಾದ ವಿದ್ಯಾಭ್ಯಾಸ ಮತ್ತು ತರಬೇತಿಯು ದೊರೆಯುವಂತಾಗಬೇಕು. ನಮ್ಮ ರಾಷ್ಟ್ರೀಯ ಸಂಪತ್ತು, -ವ್ಯವಸಾಯದ ಅಭಿವೃದ್ಧಿಗಾಗಿ ಖರ್ಚಾಗುವಾಗ—ರೈತನಿಗೆ ಹೆಚ್ಚು ಹೆಚ್ಚು ಉತ್ತಮ ಬೀಜ, ಗೊಬ್ಬರಗಳು, ಸಲಕರಣೆಗಳು ಹೆಚ್ಚು ಹೆಚ್ಚಾಗಿ ಕಡಿಮೆ ಖರ್ಚಿನಿಂದ ದೊರೆಯುವಂತಾಗಬೇಕು. ರೈತನ ಮಕ್ಕಳಿಗೆ ವ್ಯವಸಾಯದ ಕುರಿತು ವಿದ್ಯಾಭ್ಯಾಸ ಕೊಡಲು ಖರ್ಚಾಗಬೇಕು. ಆದರೆ ಇಂದು ನಾವು ಪರದೇಶದಿಂದ ಬೇಡಿತಂದ ಹಣವನ್ನು ಶಿಬಂದಿಯ ಸೈನ್ಯವನ್ನು ಬೆಳೆಸಲು ಖರ್ಚು ಮಾಡುತ್ತಿದ್ದೇವೆ. ರೈತನ ಕೆಲಸದ ಮೇಲ್ವಿಚಾರವನ್ನು ಮಾಡುತ್ತಿರುವ ಮೇಸ್ತ್ರಿಗಳಿಗಾಗಿ ಖರ್ಚಾಗುತ್ತಿದೆ. ಆದರೆ ರೈತನು ಬೀಜ, ಗೊಬ್ಬರ. ಸಾಲಗಳಿಗಾಗಿ ಇಪ್ಪತ್ತು ಆಫೀಸುಗಳನ್ನು ಸುತ್ತುವ, ಹಲವಾರು ಆಫೀಸರುಗಳನ್ನು ನೋಡುವ ಹಿಂದಿನ ಆಡಳಿತ ಕ್ರಮಗಳಿಂದಲೇ ತನ್ನ ಕಲ್ಯಾಣವನ್ನು ಸಾಧಿಸಬೇಕಾಗಿದೆ. ರೈತನು ತನ್ನ ಅಭಿವೃದ್ಧಿಗಾಗಿ ತಾನೇ ಕಟ್ಟಿದ ಸಹಕಾರ ಸಂಘಗಳು ಅವನಿಗೆ ಬೇಕಾದ ಬೀಜ, ಗೊಬ್ಬರ ಸಾಲಗಳನ್ನು ಒದಗಿಸಿ ಕೊಡಲಾಗದೆ—ಬಡ ರೈತನನ್ನು ಇತರ

ಸಾಲಗಾರರಲ್ಲಿ ಅಟ್ಟುತ್ತಿದ್ದೇವೆ. ಅವನ ಜೀವನಾಧಾರವಾದ ಅಂಗೈಯಗಲದ ಜಮೀನನ್ನು ವ್ಯಾಪಾರಿಗಳಲ್ಲಿ ಅಡವಿಡಲು ಜೋಧಿಸುವ ಸಂದರ್ಭ ಬಂದಿರುತ್ತದೆ. ಇದು ನಿಜವಾಗಿಯೂ ಆಡಳಿತದ ಶಿಥಿಲತೆಯನ್ನು, ಆಡಳಿತೆಯ ಸಡಿಲುತನವನ್ನು ಎತ್ತಿ ತೋರಿಸುತ್ತದೆ.

ರೈತನ ನಿಜವಾದ ಕಲ್ಯಾಣವನ್ನು ಸಾಧಿಸಬೇಕಿದ್ದರೆ—ರೈತನ ವ್ಯಾವಸಾಯಿಕ ಉತ್ಪಾದನೆಯು ಅಧಿಕವಾಗುವಂತೆ ಅವನಿಗೆ ಅಧಿಕ ಪಸಲು ಬರುವ ಬೀಜಗಳು, ರಾಸಾಯನಿಕ ಗೊಬ್ಬರಗಳು—ಇವನ್ನೆಲ್ಲಾ ಬಳಸಲು ಸಾಕಷ್ಟು ಸಾಲಗಳು ಗ್ರಾಮದ ಸಹಕಾರಿ ಸಂಘಗಳ ಮೂಲಕ ಕ್ಲಪ್ತ ಸಮಯದಲ್ಲಿ ದೊರೆಯುವಂತಾಗಬೇಕು; ಮಾತ್ರವಲ್ಲ ರೈತನ ಭಾಷೆಯನ್ನು ತಿಳಿದಿರುವ, ರೈತನೊಂದಿಗೆ ಸಹಕರಿಸಿ ನಡೆಯುತ್ತಿರುವ, ಸರಿಯಾದ ತರಬೇತಿ ಪಡೆದಿರುವ ಗ್ರಾಮ ಸೇವಕನು ಪ್ರತಿ ಪಂಚಾಯತಿನ ಸರಹದ್ದಿನಲ್ಲೂ ಇರುವುದು ಅನಿವಾರ್ಯ— ಈ ಎಲ್ಲಾ ಕಾರ್ಯಗಳ ಕುರಿತು ಸಲಹೆ ಕೊಡಲು ಮತ್ತು ಸರಿಯಾಗಿ ನಡೆಯುವಂತೆ ಆಯಾ ತಾಲೂಕು ಅಭಿವೃದ್ಧಿ ಮಂಡಳಿಯು ಯೋಗ್ಯ ಮೇಲ್ವಿಚಾರಣೆಯನ್ನು ನೋಡುತ್ತಿರುವುದು ಅನಿವಾರ್ಯ. ತಜ್ಞ ಅಧಿಕಾರಿಗಳು ತಾಲೂಕು ಜೋರ್ಡಿನ ಅಂಕಿತದಲ್ಲಿ ದುಡಿಯುವಂತಾದರೆ ಮಾತ್ರ ಇಂತಹ ಅಧಿಕಾರಿಗಳಿಂದ ಸಾಮಾನ್ಯ ರೈತನಿಗೆ ಪ್ರಯೋಜನ ದೊರೆತೀತು. ಈ ಕಾರ್ಯವನ್ನು ಬೇರೆ ಬೇರೆ ಇಲಾಖೆಗಳಲ್ಲಿ ಹಂಚಿ ಹಾಕಿದರೆ—ಸರಕಾರಕ್ಕೆ ಈ ಇಲಾಖೆಗಳ ಶಿಬಂದಿಯನ್ನು ಸಾಕುವ ಖರ್ಚು ನಡೆದೀತು ಮಾತ್ರ. ವ್ಯವಸಾಯದ ಮತ್ತು ಪಶುಪಾಲನೆಯ ಕುರಿತು, ರೈತನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವು ದೊರೆಯುವಂತೆ ಸಂಬಂಧಪಟ್ಟ ತಾಂತ್ರಿಕ ಶಾಲೆಗಳನ್ನು ಹಳ್ಳಿಗಳ ಸಮುದಾಯಗಳಲ್ಲೇ ಖಡ್ಡಾಯವಾಗಿ ತೆರೆಯಬೇಕು. ರೈತನ ಮಕ್ಕಳು ಪಟ್ಟಣವನ್ನು ಸೇರಿ, ವ್ಯವಸಾಯದಲ್ಲಿ ವಿದ್ಯೆ ಕಲಿತು, ತಮ್ಮ ಹಳ್ಳಿಗೆ ವ್ಯವಸಾಯಕ್ಕಾಗಿ ಹಿಂತಿರುಗುವ ಚಿಹ್ನೆಗಳು ಕಂಡು ಬರುವಂತಿಲ್ಲ. ಹಾಗಾಗದಂತೆ ತಡೆಗಟ್ಟುವುದು ರಾಷ್ಟ್ರದ ಸಂಪತ್ತಿನ ದೃಷ್ಟಿಯಿಂದ ಮತ್ತು ರೈತನ ದೃಷ್ಟಿಯಿಂದ ಅಗತ್ಯ. ಇಂತಹ ವಿದ್ಯಾ ಕೇಂದ್ರಗಳು, ತರಬೇತಿ ಕೇಂದ್ರಗಳು ಗ್ರಾಮಾಂತರ ಪ್ರದೇಶದಲ್ಲಿ ತೆರೆಯುಂತಾದರೆ — ಇಂದಿನ ರೈತರಿಗೆ ತಮ್ಮ ವ್ಯವಸಾಯ ಕ್ರಮಗಳನ್ನು ಸುಧಾರಿಸಲು ಸಹಾಯವಾಗುತ್ತದೆ.

ರೈತನ ಮಕ್ಕಳಿಗೂ ಅವು ಬೆಳೆಯುತ್ತ ಬರುವಂತೆ ತಮ್ಮ ಹೆತ್ತವರ ಕಸುಬಾದ ವ್ಯವಸಾಯ, ಪಶುಪಾಲನೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಕೈಗೊಳ್ಳಲು ಸಾಧ್ಯವಾಗುತ್ತದೆ. ಮಾತ್ರವಲ್ಲ—ವ್ಯವಸಾಯ ಕಸುಬಿನಲ್ಲಿ ಇಂದಿನ ವಿದ್ಯಾರ್ಥಿಗಳಲ್ಲಿರುವಂಥಹ ತಾತ್ಸಾರ ಬುದ್ಧಿಯೂ ಬದಲಾಗಲು ಅನುಕೂಲವಾಗುತ್ತದೆ. ಇದರಿಂದಾಗಿ ದಿನದಿಂದ ದಿನಕ್ಕೆ ಬೆಳೆದು, ರಾಕ್ಷಸ ರೂಪವನ್ನು ತಾಳುತ್ತಿರುವ ನಿರುದ್ಯೋಗ ಸಮಸ್ಯೆಯೂ ತಕ್ಕಮಟ್ಟಿಗೆ ಪರಿಹಾರವಾಗುವುದರಲ್ಲಿ ಸಂಶಯವಿಲ್ಲ.

ವಿದ್ಯಾವಂತ ರೈತರು ತಮ್ಮ ಸಹಕಾರ ಸಂಘಗಳನ್ನು ತಮ್ಮ ಅವಶ್ಯಕತೆಗಳನ್ನು ಪೂರೈಸಲು ಅನುಕೂಲವಾಗುವಂತೆ ಕಟ್ಟಿಕೊಂಡು ಬರಲು ಅನುಕೂಲವಾಗುವುದು. ನಮ್ಮ ಸಹಕಾರ ಸಂಘಗಳು ಇಂದಿನಂತೆ ಬರೇ ಶೇಕಡಾ 30-40 ಮಂದಿ ರೈತರಿಗೆ ಮಾತ್ರ ಸಾಲವನ್ನು ಪೂರೈಸಿ ಉಳಿದವರನ್ನು ಸಾಲಕ್ಕಾಗಿ ವ್ಯಾಪಾರಿಗಳತ್ತ ದಬ್ಬುತ್ತಿರುವ, ಕರುಣಾಜನಕ ಪರಿಸ್ಥಿತಿ ಬದಲಾಗಬಹುದು. ಸಹಕಾರ ಸಂಘಗಳು ಇಂದಿನಂತೆ ಕೇವಲ ಕೆಲವೇ ಮಂದಿ ಹಿತಾಸಕ್ತರ ಮಂಗ ಮುಷ್ಟಿಯಲ್ಲಿ ಸಿಕ್ಕಿ, ಇತ್ತ ಸಾಯದೆ, ಅತ್ತ ಬದುಕದೇ ಇರುವಂತಹ ಪರಿಸ್ಥಿತಿಯು ಬದಲಾಗಬಹುದು. ಉತ್ತಮ ಆಡಳಿತ ಮಂಡಳಿಯನ್ನು ಪಡೆದ ಸಹಕಾರ ಸಂಘಗಳು ಹಳ್ಳಿಯ ಎಲ್ಲಾ ರೈತ ಕುಟುಂಬಗಳಿಗೆ ಬೇಕಾದಷ್ಟು ಬೀಜ, ಗೊಬ್ಬರ ಸಾಲಗಳನ್ನು ಒದಗಿಸುವುದು ಮಾತ್ರವಲ್ಲ—ಅಂಥಹ ಸಾಲಗಳನ್ನು ರೈತನು ಬೆಳೆಸಿದ ಪದಾರ್ಥಗಳನ್ನು ಖರೀದಿಸಿ ಭರ್ತಿ ಮಾಡಿಕೊಳ್ಳುವುದು. ಇದರಿಂದಾಗಿ ಆಹಾರ ಧಾನ್ಯಗಳ ಎತ್ತುವಳಿಗಾಗಿ-ಆಹಾರಧಾನ್ಯದ ಬೆಳೆಸುವಿಕೆ ಅಥವಾ ವ್ಯಾಪಾರದ ಗಂಧಗಾಳಿ ತಿಳಿಯದ ಅಧಿಕಾರಿಗಳಿಗಾಗಿ ವ್ಯಯಿಸುವ ಸರಕಾರದ ಹಣವನ್ನು ಉಳಿಸಬಹುದಾಗಿದೆ. ಇಂಥಹ ಸಹಕಾರ ಸಂಘಗಳು ರೈತನ ದಿನ ನಿತ್ಯ ಜೀವನಾವಶ್ಯ ಸಾಮಾಗ್ರಿಗಳನ್ನು ಪೂರೈಸಿ ಜನಪ್ರೀತವಾಗಬಹುದಾಗಿದೆ. ಆದರೆ ಇಂಥಹ ಸಹಕಾರ ಸಂಘಗಳಲ್ಲಿ ಕೆಲಸಮಾಡುವ ಶಿಬಂದಿಗೆ ಬೀಜಗಳು, ಗೊಬ್ಬರಗಳ ಸರಿಯಾದ ಮಾಹಿತಿ ಇರುವುದು ಅಗತ್ಯ. ಅದಕ್ಕಾಗಿ ಅವರಿಗೆ ವ್ಯವಸಾಯ ವಿಚಾರಗಳಲ್ಲೂ, ವ್ಯಾಪಾರ ವ್ಯವಹಾರಗಳ ಕುರಿತೂ ಸರಿಯಾದ ತರಬೇತಿಯನ್ನೀಯುವುದು ಅಗತ್ಯ. ಸ್ಥಳೀಯ ಗ್ರಾಮಸೇವಕನು

ಸಹಕಾರ ಸಂಘದೊಂದಿಗೆ ನಿಕಟ ಸಂಪರ್ಕವನ್ನಿಟ್ಟುಕೊಳ್ಳುವುದು ಅತಿ ಅಗತ್ಯ.

ಗ್ರಾಮದ ಸಾಮಾಜಿಕ ಮತ್ತು ಆರ್ಥಿಕ ಜೀವನಕ್ಕೆ ಭದ್ರವಾದ ತಳ ಪದಿಯನ್ನು ಹಾಕುವ ಕಾರ್ಯವನ್ನು ಗ್ರಾಮಗಳ ಶಾಲೆಗಳ ಮೂಲಕ ಸಾಧಿಸ ಬೇಕಾಗಿದೆ. ಆದರೆ ಗ್ರಾಮದ ಜ್ಞಾನ ಕೇಂದ್ರವೆನಿಸಿರುವ ಶಾಲೆಯು ಅಧ್ಯಾಪಕ ವೃಂದ, ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುತ್ತಿರುವ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಜ್ಞಾನದಿಂದಿರುವುದು, ಅಥವಾ ತಾತ್ಸಾರದಿಂದಿರುವುದು ಕಂಡು ಬರುವುದು. ಈ ಪರಿಸ್ಥಿತಿಗೆ ಹಲವಾರು ಮಂದಿ ಮತ್ತು ಹಲವಾರು ಆಡಳಿತ ಕ್ರಮಗಳು ಕಾರಣವಾದಾಗ್ಯೂ—ಇದೊಂದು ಜನತೆಯ ಕಲ್ಯಾಣದ ದೃಷ್ಟಿಯಿಂದ ಅಪರಾಧವೇ ಸರಿ. ಜನತೆಯ ಕಲ್ಯಾಣಕ್ಕಾಗಿ ಮಾಡುವ ಯಾವ ಕಾರ್ಯಕ್ರಮಗಳಾದರೂ ಅವುಗಳು ನಮ್ಮ ವಿದ್ಯಾ ಸಂಸ್ಥೆಯು ಕಲಿಸುವ ವಿಷಯದಲ್ಲಿ ಹಾಸು ಹೊಕ್ಕಾಗಿ ಸೇರದಿದ್ದರೆ— ಮುಂದಿನ ಜನಾಂಗವು ಇಂದಿನ ಜನಾಂಗದ ಶ್ರಮದ ಬಗ್ಗೆ, ಸಾಧನೆಗಳ ಬಗ್ಗೆ ಹೆಮ್ಮೆಪಟ್ಟುಕೊಳ್ಳಲಾರದು, ಮಾತ್ರವಲ್ಲ ಇಂಥಹ ಯೊಜನೆಗಳು ಹಳ್ಳಿಯಲ್ಲಿ ಬೇರು ಬಿಟ್ಟು ನಿಲ್ಲಲಾರವು. ಇಂತಹ ಶೋಧನಾ ವಿಧಾನಗಳನ್ನು ನಾವು ಮುಂದುವರಿದ ಇತರ ರಾಷ್ಟ್ರಗಳಿಂದ ಕಲಿತುಕೊಳ್ಳುವುದು ಅಗತ್ಯ. ವಿದ್ಯಾರ್ಥಿಗಳ ಹೆತ್ತವರು, ಸರಕಾರ ಮಾಡುವ ಕಾರ್ಯಗಳ ಮಾಹಿತಿ ಸೂಕ್ಷ್ಮವಾಗಿ ತಿಳಿಸುವುದು ಅಗತ್ಯ — ಮತ್ತು ವಿದ್ಯಾರ್ಥಿಗಳು ಅಂಥಹ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಮತ್ತು ಅಭಿಮಾನದಿಂದ ಭಾಗವಹಿಸುವುದು ಅಗತ್ಯ. ತನ್ನ ತಂದೆ, ತಾಯಿಗಳ ಕೆಲಸದ ಕುರಿತು ಅಭಿಮಾನ ತಾಳದ, ವಿದ್ಯಾರ್ಥಿಯು ತನಗೆ ಅನ್ನ. ಬಟ್ಟೆ ಕೊಟ್ಟು ಸಾಕಿದ ಗ್ರಾಮದ ಬಗ್ಗೆ ದೇಶದ ಬಗ್ಗೆ ಅಭಿಮಾನತಾಳಿಯಾನೇ? ರಾಷ್ಟ್ರಾಭಿಮಾನದ ಮೊಳಕೆ ಗ್ರಾಮ ಶಾಲೆಗಳಲ್ಲಿ ತೋರುವುದು ಅಗತ್ಯ, ಅದೇ ರೀತಿ ವಿದ್ಯಾರ್ಥಿಯ ನಾಳೆಯ ಜೀವನಕ್ಕೆ ಅವನ ಇಂದಿನ ವಿದ್ಯಾಭ್ಯಾಸವು ಸಹಕಾರಿಯಾಗಿರಬೇಕು.ಇಂದು ಸ್ವತಂತ್ರವಾಗಿರುವ ವಿದ್ಯಾರ್ಥಿಯು ವಿದ್ಯೆಗಳಿಸಿ ನಾಳೆ ಹೆರವರ ಚಾಕರಿ, ನೌಕರಿ ಮಾಡಲು ಸಾಲುಗಟ್ಟಿ ನಿಲ್ಲಲು, ಪಟ್ಟಣಕ್ಕೆ ಹೋಗುವಂತಾದರೆ ಗ್ರಾಮ ಶಾಲೆಗಳು ಗ್ರಾಮ ಜೀವನವನ್ನು

ಬರಿದಾಗಿಸಿದಂತಾಗುತ್ತದೆ. ಗ್ರಾಮದ ಶಾಲೆಗಳಲ್ಲಿ ಗ್ರಾಮ ಜೀವನಕ್ಕೆ ಅವಶ್ಯವಾದ ಸುಧಾರಿತ ವ್ಯವಸಾಯ, ಪಶುಪಾಲನೆ, ಗುಡಿಕೈಗಾರಿಕೆಗಳಿಗೆ ಸಂಬಂಧಿಸಿದ ವಿದ್ಯೆ ದೊರೆಯುವಂತಾಗಬೇಕು. ಗ್ರಾಮ ಜೀವನವನ್ನು ಹಸನುಗೊಳಿಸುವಂತಹ ಜೀವನ ಶಿಕ್ಷಣ ದೊರೆಯುವಂತಾಗಬೇಕು. ಗಾಂಧೀಜಿಯು ತೋರಿಸಿ ಕೊಟ್ಟ ವಾರ್ಧಾ ಶಿಕ್ಷಣ ಕ್ರಮವನ್ನು ಮನಃಪೂರ್ವಕ ಜಾರಿಗೆ ತಂದರೆ ಮಾತ್ರ ಹಳ್ಳಿಯ ಇಂದಿನ ಮತ್ತು ಮುಂದಿನ ಸಾಮಾಜಿಕ ಮತ್ತು ಆರ್ಥಿಕ ಜೀವನದ ಬುನಾದಿಯನ್ನು ಹಾಕಲು ಅನುಕೂಲವಾಗುತ್ತದೆ. ಈ ರೀತಿಯಿಂದ ಕಾರ್ಯಪ್ರವೃತ್ತವಾದರೆ ಗ್ರಾಮದ ಶಾಲೆಯು ಗ್ರಾಮಕ್ಕೆ ಅತಿ ದೊಡ್ಡ ಕೊಡುಗೆಯಾಗುತ್ತದೆ; ಇಲ್ಲದಿದ್ದರೆ ಗ್ರಾಮ ಜೀವನವನ್ನು ಕದಡುವ ಪಿಡುಗಾಗುತ್ತದೆ.

ಗ್ರಾಮಗಳ ಶಾಲೆಗಳಿಗಾಗಿ ಕಟ್ಟಡ ರಚನೆ, ಇತರ ಸಾಮಾಗ್ರಿಗಳನ್ನು ಒದಗಿಸಲು ತಮ್ಮ ಬಡತನವನ್ನು ಮರೆತು ಗ್ರಾಮಗಳ ಜನತೆ ಸಾವಿರಗಟ್ಟಲೆ ಖರ್ಚು ಮಾಡುತ್ತಿದ್ದಾರೆ. ಆದರೆ ಶಾಲಾ ಆಡಳಿತೆಯಲ್ಲಿ ಅವರ ಸ್ಥಾನ ಬರೇ ನಿರಾಶಾದಾಯಕವಾಗಿದೆ. ಗ್ರಾಮದ ಶಾಲೆಯ ಆಡಳಿತದಲ್ಲಿ ಸ್ಥಳೀಯ ಪಂಚಾಯತಿಗೆ ಯೋಗ್ಯ ಹಾಗೂ ಮರ್ಯಾದಿತ ಸ್ಥಾನವನ್ನು ಕೊಡಬೇಕು; ಮಾತ್ರವಲ್ಲ—ಸರಕಾರದ ಶಾಲಾ ನೌಕರರು ಪಂಚಾಯತಿನ ಸಾಮೂಹಿಕ ಅಭಿಪ್ರಾಯದಂತೆ ವರ್ತಿಸಿದರೆ ಜನತೆಗೆ ತಮ್ಮ ಶಾಲೆಯ ಮೇಲೆ ಆತ್ಮೀಯತೆ ಮೂಡುತ್ತದೆ. ಇದರಿಂದಾಗಿ ಶಾಲೆಯ ಮಧ್ಯಾಹ್ನ ಊಟದ, ಶಾಲಾ ತೋಟದ ಅಭಿವೃದ್ಧಿ, ಆಟದ ಬಯಲಿನ ಅಭಿವೃದ್ಧಿಯನ್ನು ಅತಿ ಶೀಘ್ರದಲ್ಲಿ ಸರಕಾರದ ಕಿಂಚಿತ್ತು ಸಹಾಯದಿಂದ ಅಗಾಧ ರೀತಿಯಲ್ಲಿ ಸಾಧಿಸಬಹುದಾಗಿದೆ. ತಾಲೂಕು ಮಟ್ಟದಲ್ಲಿ ಅಭಿವೃದ್ಧಿ ಮಂಡಲಿಗಳು ಶಾಲಾ ಆಡಳಿತೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುವುದು ಅತೀ ಅಗತ್ಯ.

ನಲುವತ್ತಮೂರು ಕೋಟಿ ಜನತೆಯ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ಸಾಧಿಸಬೇಕಿದ್ದರೆ ಗ್ರಾಮದ ಪಂಚಾಯತಿಗಳಿಗೆ ಉತ್ತಮ ರೀತಿಯ ತರಬೇತಿ ಪಡೆದ ಸಿಬಂದಿಯನ್ನು ನಿಯಮಿಸಿ, ಸಹಾಯ ಧನವನ್ನಿತ್ತು ಅವುಗಳ ಮೂಲಕ ಪಂಚಾಯತಿನ ಅನೇಕ ಕಾರ್ಯ-

ಕ್ರಮಗಳು ನಡೆಯುವಂತಹ ಆಡಳಿತ ಯಂತ್ರವನ್ನು ನಿರ್ಮಿಸುವುದು ಅಗತ್ಯ. ಇಂತಹ ಹಲವಾರು ಕಾರ್ಯಕ್ರಮಗಳ ಮೂಲಕ ಗ್ರಾಮದ ಜನತೆಯನ್ನು ಒಂದಿಲ್ಲೊಂದು ರೀತಿಯಿಂದ ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು. ಪಂಚಾಯತು ಗ್ರಾಮ ಮಟ್ಟದಲ್ಲಿ ಯೋಜನಾ ಸಂಸ್ಥೆಯಾಗಿದ್ದು, ಆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು; ತಾಲೂಕು ಅಭಿವೃದ್ಧಿ ಮಂಡಳಿಯೂ, ಸರಕಾರವೂ ಉದಾರವಾಗಿ ಸಹಾಯ ಮಾಡುತ್ತಿರಬೇಕು. ಗ್ರಾಮದ ಸಹಕಾರ ಸಂಘವು ಗ್ರಾಮದ ಜನತೆಯ ಆರ್ಥಿಕ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು, ಮತ್ತು ತನ್ನ ವ್ಯವಹಾರ ವಲ್ಲಿ ಗ್ರಾಮದ ಎಲ್ಲಾ ರೈತ ಕುಟುಂಬಗಳು ಭಾಗವಹಿಸುವಂತೆ ತೆರೆದ ಬಾಗಿಲಿನ ವ್ಯವಹಾರಗಳನ್ನಿಟ್ಟುಕೊಳ್ಳುವುದು ಅಗತ್ಯ. ಗ್ರಾಮದ ಸಾಲದ ಪೂರೈಕೆಯೊಡನೆ, ಬೀಜ, ಗೊಬ್ಬರಗಳ ಪೂರಕೈಯನ್ನೂ ಮಾಡಬೇಕು ಮಾತ್ರವಲ್ಲ ಗ್ರಾಮದ ಜನತೆಗೆ ಉಳಿತಾಯದ ಮೂಲ ಪಾಠವನ್ನು ಕಲಿಸಿ ಕೊಡುವ ದೊಡ್ಡ ಜವಾಬ್ದಾರಿಯನ್ನು ನೆರವೇರಿಸಬೇಕಾಗಿದೆ. ಅದೇ ರೀತಿ ಗ್ರಾಮದ ಶಾಲೆಯೂ ಮಕ್ಕಳಿಗೆ ಮತ್ತು ಮಕ್ಕಳ ಹೆತ್ತವರ ಅಭಿಮಾನದ ಜ್ಞಾನ ಭಂಡಾರದಂತಿರಬೇಕು. ಈ ರೀತಿ ಗ್ರಾಮದ ಈ ಮೂರು ಮೂಲ ಸಂಸ್ಥೆಗಳು ಗ್ರಾಮದ ಜನತೆಯು ಸಶಕ್ತವಾಗಿ ಬಾಳಿ ಬದುಕಲು ಬೇಕಾದ ಸಂದರ್ಭವನ್ನು ಒದಗಿಸಿ ಕೊಡಬೇಕು. ಇಂದು ದೇಶದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಹೆಸರಲ್ಲಿ ಖರ್ಚಾಗುತ್ತಿರುವ ಸಂಪತ್ತು ಈ ಮೂಲ ಸಂಸ್ಥೆಗಳ ಮೂಲಕ ಖರ್ಚಾಗುವಂತಾದರೆ ಅವು ಯಾರಿಗೆ ಸಲಬೇಕೋ ಅವರಿಗೆ ಸಂದಾಯ ಸಂದಾಯವಾಗುತ್ತದೆ; ಇಲ್ಲದಿದ್ದರೆ ಖರ್ಚು ನಡೆಯುತ್ತಿರುತ್ತದೆ; ಇಲಾಖೆಗಳು ಬೆಳೆಯುತ್ತಿರುತ್ತವೆ, ಆದರೆ ಜನತೆಯ ಅತೃಪ್ತಿ ನೂರ್ಮಡಿಯಾಗಿ ಬೆಳೆಯುತ್ತಿರುತ್ತದೆ.

ಗ್ರಾಮಾಂತರ ಪ್ರದೇಶದ ಜನತೆಯಲ್ಲಿ ಆರ್ಥಿಕ ಬಡತನವಿರಬಹುದು, ಆದರೆ ಅವರಲ್ಲಿ ಬುದ್ಧಿಯ ಬರಗಾಲ ಬಂದಿಲ್ಲ. ಅವರ ಸಂಸ್ಕೃತಿಯ ಚಿಲುಮೆ ಬತ್ತಿಲ್ಲ. ಅವುಗಳ ಸಂಪೂರ್ಣ ಉಪಯುಕ್ತತೆಯನ್ನು ಸಾಧಿಸಿಕೊಂಡು ರಾಜಕೀಯ ಕ್ರಾಂತಿಯನ್ನೂ ಆರ್ಥಿಕ ಕ್ರಾಂತಿಯನ್ನೂ ಗಾಂಧೀಜಿ ನಡೆದು ತೋರಿದ ಗಾಂಧೀ ಮಾರ್ಗದಲ್ಲಿ ನಡೆಯು

ವಂತೆ ಮಾಡುವುದು ಅಗತ್ಯ. ಗಾಂಧೀಜೀಯ ಹುಟ್ಟು ಹಬ್ಬದ ಶತಮಾನೋತ್ಸವವನ್ನು ಆಚರಿಸುವ 1969—70ನೇ ವರ್ಷವು ಈ ರಾಜ್ಯಮಾರ್ಗವನ್ನು ಬೆಳಗಿ ದಾರಿ ತೋರಲೆಂದು ಜನತಾ ಜನಾರ್ಧನನನ್ನು ನಿಷ್ಠೆಯಿಂದ ಪ್ರಾರ್ಥಿಸಿ ಕಾರ್ಯಪ್ರವೃತ್ತವಾಗುವುದು ಅಗತ್ಯ!

33612
12-12-69

# ಬಾಪೂಜಿಯ ನುಡಿ ಮುತ್ತುಗಳು

1 ದೇವರೇ ಸತ್ಯ, ಸತ್ಯವೇ ದೇವರು.

2 ಕೀಳು ಪ್ರಾಣಿಗೆ ಹಿಂಸಾ ಬುದ್ಧಿ ಎಷ್ಟು ಸಹಜವೋ, ಅಹಿಂಸೆ ಮಾನವ ನಿಗಷ್ಟೇ ಸಹಜ.

3 ಸತ್ಯವನ್ನು ನುಡಿಯುವುದು, ಸತ್ಯವನ್ನು ಆಲೋಚಿಸುವುದು; ಸತ್ಯ ವನ್ನು ಆಚರಿಸುವುದು ಇದುವೇ ಸತ್ಯಮಾರ್ಗದ ಪ್ರಥಮ ಸೂತ್ರ.

4 ಅಧಿಕ ಪ್ರಸಾರದಿಂದಾಗಿ ಅಸತ್ಯವು ಸತ್ಯವಾಗುವುದಿಲ್ಲ. ಯಾರೂ ನೋಡದ ಕಾರಣ ಸತ್ಯವು ಅಸತ್ಯವಾಗುದಿಲ್ಲ.

5 ನಿನ್ನಲ್ಲಿದ್ದ ಅತ್ಯುತ್ಕೃಷ್ಟವಾದುದನ್ನು ವ್ಯಕ್ತ ಮಾಡುವುದೇ ನಿಜವಾದ ಶಿಕ್ಷಣ.

6 ಭಾರತದ ಉದ್ಧಾರ ಸ್ತ್ರೀಯರ ತ್ಯಾಗ ಮತ್ತು ತಿಳುವಳಿಕೆಗಳನ್ನವ ಲಂಬಿಸಿದೆಯೆಂದು ನನ್ನ ನಿಶ್ಚಲ ನಂಬಿಕೆ.

7 ಅಸ್ಪೃಶ್ಯತೆ ಒಂದು ಪಾಪ, ಘೋರ ಅಪರಾಧ. ಹಿಂದೂ ಧರ್ಮವು ಸಕಾಲದಲ್ಲಿ ಈ ಸರ್ಪವನ್ನು ಕೊಲ್ಲದಿದ್ದರೆ ಇದು ಹಿಂದೂ ಧರ್ಮ ವನ್ನೇ ನುಂಗುವುದು.

8 ಮದ್ಯ ಮತ್ತು ಮಾದಕ ಪದಾರ್ಥಗಳು ಪಿಶಾಚಿಯ ಎರಡು ಕೈಗಳು. ಇವುಗಳಿಂದ ಹೊಡೆದು ಅದು ತನ್ನ ಅಸಹಾಯ ಗುಲಾಮರನ್ನು ಬುದ್ಧಿ ಭ್ರಷ್ಟರನ್ನಾಗಿಯೂ ಪ್ರಜ್ಞಾಹೀನರನ್ನಾಗಿಯೂ ಮಾಡುತ್ತದೆ.

9 ಎಲ್ಲಿಯ ವರೆಗೆ ಒಬ್ಬ ಸಶಕ್ತ ಸ್ತ್ರೀ ಅಥವಾ ಪುರುಷ ನಿರುದ್ಯೋಗಿ ಅಥವಾ ಉಪವಾಸದಿಂದ ಇರುವನೋ ಅಲ್ಲಿಯ ವರೆಗೆ ವಿಶ್ರಮಿಸಲು ಅಥವಾ ಉಣ್ಣಲು ನಾಚಿಗೆಯಾಗಬೇಕು.

10 ನಮ್ಮ ಮೋಕ್ಷ ರೈತನಿಂದಲೇ ಬರ [illegible] ಧನಿಕರಾದ ಜ[illegible]ೀನ್ದಾರರಾಗಲೀ ಅ[illegible] ಎಚ್ಚರಿಕೆ!

Library IIAS, Shimla
K 923.254 G 151 D
00033612

Printed at Shantinath Press, Main Road, Puttur, S. K.